ಕಾ.ತ. ಚಿಕ್ಕಣ್ಣನವರ ಸಾಹಿತ್ಯದಲ್ಲಿ ಗ್ರಾಮೀಣ ಸಂವೇದನೆ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ನಿಬಂಧ)

ಸಂಶೋಧಕರು

ದೊಡ್ಡಬಸಪ್ಪ ಬಿ.

ಮಾರ್ಗದರ್ಶಕರು

ಸಿ. ವೆಂಕಟೇಶ

ಸಹ ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೧-೧೨

1013

ಮಾರ್ಗದರ್ಶಕರ ಪ್ರಮಾಣ ಪತ್ರ

"ಕಾ.ತ. ಚಿಕ್ಕಣ್ಣನವರ ಸಾಹಿತ್ಯದಲ್ಲಿ ಗ್ರಾಮೀಣ ಸಂವೇದನೆ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ದೊಡ್ಡಬಸಪ್ಪ ಬಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೧೧.02.೧೨

೧೧/02/೧೨

ಸಿ. ವೆಂಕಟೇಶ್

ಸಹ ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

1013

ಪ್ರಮಾಣ ಪತ್ರ

"ಕಾ.ತ. ಚಿಕ್ಕಣ್ಣನವರ ಸಾಹಿತ್ಯದಲ್ಲಿ ಗ್ರಾಮೀಣ ಸಂವೇದನೆ" ಎಂಬ ನಿಬಂಧವನ್ನು ಸಿ. ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಭಾಷಾ ನಿಕಾಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: 11/07/2012

11/07/2012
ದೊಡ್ಡಬಸಪ್ಪ ಬಿ.
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮತ್ತು ಸ್ವರೂಪ

ಪ್ರಸ್ತಾವನೆ:

ನವ್ಯೋತ್ತರ ಕಾಲಘಟ್ಟದಲ್ಲಿ ತಮ್ಮ ಬರವಣಿಗೆ ಸಹಜವಾಗಿಯೇ ದಲಿತ ಬಂಡಾಯದ ಪ್ರಭಾವಳಿಯಿತ್ತಾದರೂ ಅಂತಹ ಯಾವುದೇ ಪ್ರಖರವಾದ ಸೈದ್ಧಾಂತಿಕ ಚೌಕಟ್ಟಿನ ಮಿತಿಗೆ ಒಳಪಡದೆ ಮುಕ್ತ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಬಹಳ ಸಂಯಮದಿಂದ ಸೃಜನಶೀಲ ಕಾಯಕವನ್ನು ಬಹಳ ಪ್ರೀತಿ ಹಾಗೂ ಸಾಮಾಜಿಕ ಬದ್ಧತೆಯೊಂದಿಗೆ ಮಾಡಿಕೊಂಡು ಬಂದಿದ್ದಾರೆ.

ಕನ್ನಡದ ಅನೇಕ ಬರಹಗಾರರಂತೆಯೇ ಚಿಕ್ಕಣ್ಣನವರೂ ಕೂಡಾ ಗ್ರಾಮೀಣ ಪರಿಸರದಿಂದ ಬಂದವರು. ಆ ಕಾರಣಕ್ಕಾಗಿಯೇ ಅವರ ಸೃಜನಶೀಲತೆಯ ಹಾಗೂ ಚಿಂತನೆಯ ಬೇರುಗಳಿರುವುದು ನಿಚ್ಚಳವಾಗಿ ಹಳ್ಳಿಯಲ್ಲಿಯೇ. ಈ ಹಿನ್ನೆಲೆಯಲ್ಲಿ ನೋಡಿದಾಗ ಬಹುತೇಕ ಇವರ ಕೃತಿಗಳ ಕೇಂದ್ರ ಹಳ್ಳಿಯೇ. ಅಪರೂಪಕ್ಕೆಂಬಂತೆ ಅವಶ್ಯಕತೆಗನುಗುಣವಾಗಿ ಪಟ್ಟಣ ಹಾಗೂ ನಗರಗಳಲ್ಲಿ ನೆಲೆನಿಂತು ಆಧುನಿಕವೆಂಬಂತೆ ಭಾಸವಾಗುವ ಹಲ ಕೆಲವು ವ್ಯಕ್ತಿತ್ವಗಳ ಸ್ಮೃತಿಯಲ್ಲಿಯೂ ಪಟ್ಟಂತ ಎಚ್ಚರಾಗುವ ಹಳ್ಳಿಯಿದೆ. ಇದು ಇವರ ಬಹುತೇಕ ಎಲ್ಲಾ ಕೃತಿಗಳಿಗೂ ಅನ್ವಯಿಸಿ ಹೇಳಬಹುದಾದ ಅಭಿಪ್ರಾಯವಾಗಿದೆ. ಹಾಗಾಗಿ ಕಾ.ತ. ಚಿಕ್ಕಣ್ಣನವರ ಸಾಹಿತ್ಯದಲ್ಲಿ ಗ್ರಾಮೀಣ ಸಂವೇದನೆಯ ವಿವಿಧ ಆಯಾಮಗಳ ಹುಡುಕಾಟಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಪ್ರತಿಯೊಂದು ಸಾಹಿತ್ಯವು ಕೂಡ ಅಂದಂದಿನ ಸಮಕಾಲೀನ ಜೀವನವನ್ನು ಪ್ರತಿಬಿಂಬಿಸುತ್ತದೆ. ಬರಿ ಬಿಂಬಿಸುವುದಷ್ಟೇ ಅಲ್ಲ. ಬದಲಾವಣೆಯ ಆಶಯವನ್ನು ಕೂಡ ಒಳಗೊಂಡಿರುತ್ತದೆ.

ಇಂತಹ ಸಾಹಿತ್ಯ ಕೃತಿಗಳು ಅಂದಂದಿನ ಕಾಲ ಮಾನದ ಜನಜೀವನದ ಎಲ್ಲಾ ಮುಖಗಳನ್ನು ಒಳಗೊಂಡಿರುತ್ತದೆ. ಸಮಗ್ರವಾಗಿ ಅಲ್ಲದಿದ್ದರೂ ಕೆಲವೊಂದು ಅಂಶಗಳನ್ನು, ಬರಿ ಉಲ್ಲೇಖಗಳಿಂದಲೋ ಅಥವಾ ಅಲ್ಲಲ್ಲಿ ಕೃತಿಗಳಲ್ಲಿನ ಪಾತ್ರಗಳಿಂದಲೋ, ಒಟ್ಟಿನಲ್ಲಿ ಆಯಾ ಜನ ಜೀವನವನ್ನು, ಪ್ರಾದೇಶಿಕತೆಯನ್ನು ಪ್ರತಿಬಿಂಬಿಸುತ್ತವೆ.

ಅಧ್ಯಯನದ ಉದ್ದೇಶ:

ಕಾ.ತ. ಚಿಕ್ಕಣ್ಣನವರು ಮೈಸೂರು ಮತ್ತು ಬೆಂಗಳೂರು ನಗರಗಳ ನಡುವಿನ ಪ್ರಾಂತ್ಯದ ಗ್ರಾಮೀಣ ಭಾಷೆಯನ್ನು ತಮ್ಮ ಕಥೆ, ಕಾದಂಬರಿ, ನಾಟಕ, ಕಾವ್ಯ, ಲೇಖನ, ವಿಮರ್ಶೆ ಮುಂತಾದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಬಳಸಿದ್ದಾರೆ. ಅಪಾರವಾಗಿ ಸಾಹಿತ್ಯ ರಚನೆ ನಿರ್ಮಾಣ ಮಾಡಿದ ಇವರು ವಿಶೇಷ ವ್ಯಕ್ತಿತ್ವ, ಪ್ರತಿಭೆ ಎರಡಕ್ಕೂ ಸಿದ್ಧಹಸ್ತರು. ಇವರು ಸೃಜನಶೀಲ ಮತ್ತು ಸೃಜನೇತರ ಎರಡು ಕ್ಷೇತ್ರಗಳಲ್ಲಿ ಕಾರ್ಯ ಮಾಡಿದ್ದಾರೆ. ನಿರಂತರವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ನವೋದಯ ಮೊದಲ್ಗೊಂಡು ಇವತ್ತಿನ ದಲಿತ ಬಂಡಾಯದ ಸಂದರ್ಭದವರೆಗಿನ ಸಾಹಿತ್ಯಕ ಕಾಳಜಿಗಳಿಗೆ ಒಗ್ಗಿರುವ ಕಾ.ತ. ಚಿಕ್ಕಣ್ಣನವರನ್ನು ಯಾವುದೇ ಕಾಲಕ್ಕೆ ಸಿದ್ಧಾಂತಕ್ಕೆ ಬದ್ಧಗೊಳಿಸಿ ನೋಡಲು ಸಾಧ್ಯವಾಗದು. ಇವರ ಸಾಹಿತ್ಯ ಹತ್ತಾರು ಬಗೆಯ ಅಧ್ಯಯನಕ್ಕೆ ವಸ್ತುವಾಗುತ್ತದೆ. ಗ್ರಾಮ ಸಂಸ್ಕೃತಿಯ ಪರಿಶೀಲನೆಗೆ ಆಕರವಾಗುತ್ತದೆ. ಸಮಾಜ ನಿಸರ್ಗಗಳ ಪರಸ್ಪರ ಮಗ್ಗಲುಗಳನ್ನು ಗ್ರಾಮೀಣ ಪದರಿನಲ್ಲಿಯೇ ವಿವರಿಸುತ್ತಾ ಸೆಲೆಯ ದಟ್ಟ ನೆಲೆಯನ್ನು ಪರಿಗಣಿಸುವುದೇ ಇವರ ಸಾಹಿತ್ಯದ ಹಿರಿಮೆಯಾಗಿದೆ.

ಇವರ ಅನೇಕ ಕಥೆಗಳು ಮಯೂರ, ತರಂಗ, ಸುಧಾ, ಚಂದನ, ಪ್ರಜಾವಾಣಿ, ತುಷಾರ, ಪ್ರಜಾಮತ, ಚಂದನ, ಸಂಕ್ರಮಣ, ಶೂದ್ರ, ಉತ್ಥಾನ, ಬಾನಾಡಿ ಪತ್ರಿಕೆ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅಲ್ಲದೇ ಇವರ ಅನೇಕ ಕಥೆಗಳಾದ 'ಕೊಂಡಿಮುಳ್ಳುಗಳು', 'ಒಡಲುರಿ', 'ಹುಚ್ಚೀರಿಯ ಎಸರಿನ ಪ್ರಸಂಗ' ಕಥೆಗಳು ನಾಟಕಗಳಾಗಿಯೂ, 'ಹಸಿವು' ಕಥೆಯು ಬೆಂಗಳೂರಿನ ಆಕಾಶವಾಣಿಯಲ್ಲಿ ನಾಟಕವಾಗಿ ಪ್ರಸಾರವಾಗಿದೆ. 'ಮುಂಗಾರು ಮಳೆಯ ಸಂಜೆ', ಟೆಲಿ ಫಿಲಂಗೆ ರೂಪಾಂತರಗೊಂಡಿದೆ. 'ನಿರ್ಗಮನ', 'ಕಿವಿ ಮೇಲಿನ ಕೂದಲು', 'ಆಕೃತಿಗಳು' ದೂರದರ್ಶನದಲ್ಲಿ ಧಾರಾವಾಹಿಗಳಾಗಿ ಪ್ರಸಾರವಾಗಿವೆ.

ಇಂತಹ ಸೃಜನಶೀಲ ಸಾಹಿತ್ಯ ಮತ್ತು ಲೇಖಕರ ಕುರಿತು ಅಧ್ಯಯನ ಮಾಡುವ ಪ್ರಯತ್ನವೇ ಇಲ್ಲಿನ ಉದ್ದೇಶವಾಗಿದೆ.

ಮಾನವನ ಪ್ರತಿಯೊಂದು ಅನುಭವಕ್ಕೂ ಒಂದು ಇತಿಹಾಸವಿರುವಂತೆ; ಮಾನವ ನಿರ್ಮಿತ ಸಾಹಿತ್ಯಕ್ಕೂ ಒಂದು ಇತಿಹಾಸವಿದೆ. ಸಮಕಾಲೀನ ಸಾಹಿತ್ಯವು ಸಮಕಾಲೀನ ಇತಿಹಾಸವನ್ನು ಕಟ್ಟಿಕೊಡುತ್ತದೆ. ಅದೇ ರೀತಿಯಾಗಿ ಕಾ.ತ. ಚಿಕ್ಕಣ್ಣನವರ ಸಮಗ್ರ ಸಾಹಿತ್ಯವು ಗ್ರಾಮೀಣ ಜನರ ಜೀವನ ವಿಧಾನಗಳು, ನಿಸರ್ಗದೊಂದಿಗೆ ಇವರ ಸಂಬಂಧಗಳು, ಮೂಢನಂಬಿಕೆಗಳು, ಅಜ್ಞಾನ, ಅನಕ್ಷರತೆ, ಮುಗ್ಧತೆ, ಮೋಸ, ವಂಚನೆ, ಜೀತಪದ್ಧತಿ, ಕರಕುಶಲ ಕೈಗಾರಿಕೆಗಳು, ಕುಂಬಾರರ ವೃತ್ತಿ, ಬಡವರ ಶೋಷಣೆಯ ಹಲವು ಮುಖಗಳು, ಹಳ್ಳಿಗಾಡಿನ ಹಬ್ಬ-ಹರಿದಿನಗಳು, ಗ್ರಾಮದೇವತೆಯ ಜಾತ್ರೆಗಳು, ಹಸಿವಿನ ಕರಾಳ ಸ್ಥಿತಿ-ಗತಿಗಳು, ಇದರ ಹಲವು ಮುಖಗಳು, ಗ್ರಾಮೀಣರ ಭಾಷೆ, ಇನ್ನೂ ಮುಂತಾದ ಆಶ್ಚರ್ಯಕರವಾದಂತಹ ಅನೇಕ ಸಂಗತಿಗಳನ್ನು ಲೇಖಕರು ತಮ್ಮ ಸಾಹಿತ್ಯದಲ್ಲಿ ಕಟ್ಟಿಕೊಡುತ್ತಾರೆ.

ಲೇಖಕರು ಗ್ರಾಮೀಣ ಪ್ರದೇಶದ ಕೌಟುಂಬಿಕ ಹಿನ್ನೆಲೆಯಲ್ಲಿ ಬೆಳೆದು ಬಂದರೂ ಸಹ ಅಲ್ಲಿಯ ಸಮಾಜಕ್ಕೆ ಒಂದು ನೆಲೆ-ಬೆಲೆ ಬರುವ ಸಾಮಾಜಿಕ ಸ್ಥಿತಿಗತಿ ಮತ್ತು ಸ್ಥಾನಮಾನ ಹೆಚ್ಚಿಸಲು ತಮ್ಮ ಕೃತಿಗಳನ್ನು ಹಲವು ಉತ್ತಮ ಅಂಶಗಳನ್ನು ಚಿತ್ರಿಸುವುದನ್ನು ನಾವು ಕಾಣಬಹುದು.

ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳಿಂದಾಗಿ ಗ್ರಾಮೀಣ ಜನರಲ್ಲಿದ್ದ ಮೂಢನಂಬಿಕೆಗಳು, ಜಾತೀಯತೆ, ಅಜ್ಞಾನಗಳು, ಧರ್ಮಾಂಧತೆಗಳು, ಅನಕ್ಷರತೆಗಳು ಇನ್ನೂ ಮುಂತಾದವು ನಾಶವಾಗತೊಡಗಿದವು. ಲೇಖಕರು ಜನರಲ್ಲಿ ವೈಚಾರಿಕೆಯ ಅಂಶಗಳನ್ನು ಬೆಳೆಸುವಲ್ಲಿ ತಮ್ಮ ಸಾಹಿತ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು.

ಒಂದು ಸಾಹಿತ್ಯ ಕೃತಿಯು ಏನಾಗಿದೆ ಎನ್ನುವುದಕ್ಕಿಂತ ಓದುಗನ ಅಂತರಂಗದಲ್ಲಿ ಅದು ಏನು ಪರಿಣಾಮ ಉಂಟು ಮಾಡುತ್ತದೆ ಎನ್ನುವುದು ಹೆಚ್ಚು ಮುಖ್ಯವಾದುದು. ಒಂದು ಕೃತಿಗೆ ಎಷ್ಟು ಓದುಗರಿರುವರೋ ಅಷ್ಟು ಅರ್ಥಾವತಾರಗಳಿವೆ. ಓದುಗರಿಂದ ಪ್ರತ್ಯೇಕವಾದ ಅರ್ಥವೊಂದು ಇಲ್ಲವೇ ಇಲ್ಲ. ಗಟ್ಟಿ ಮುಟ್ಟಾದ ಕಥನದ ನೆರವಿನಿಂದ ಕಥೆ, ಕಾದಂಬರಿ, ನಾಟಕಗಳು, ಓದುಗರೊಡನೆ ನಿರಂತರ ಸಂವಾದ ನಡೆದಾಗ ಮಾತ್ರ ಆ ಕೃತಿ ಉಳಿಯಲು ಸಾಧ್ಯವಾಗುತ್ತದೆ.

ಒಬ್ಬ ಲೇಖಕ ಅಥವಾ ಬರಹಗಾರನ ಬಗ್ಗೆ ಅಧ್ಯಯನ ಕೈಗೊಳ್ಳುವಾಗ ಆ ವ್ಯಕ್ತಿಯ ಬರಹದಷ್ಟು ಬದುಕೂ ಸಹ ಮಹತ್ವದ್ದಾಗಿರುತ್ತದೆ. ಅವರ ಸಾಧನೆಯ ಉತ್ತುಂಗ ಶಿಖರಕ್ಕೇರಿ ನಿಂತಾಗ ಆ ಶಿಖರಾರೋಹಣದ ಪ್ರತಿ ಹೆಜ್ಜೆ ಪ್ರತಿ ಮೆಟ್ಟಿಲೂ ಸಹ ಮುಖ್ಯವಾಗಿರುತ್ತದೆ. ಆದ್ದರಿಂದ ಆ ಪ್ರತಿ ಬೆಳವಣಿಗೆಯ ಅಧ್ಯಯನದ ಮಹತ್ವ ಪೂರ್ಣವಾದದ್ದು.

ಅಧ್ಯಯನದ ವ್ಯಾಪ್ತಿ:

ಕಾ.ತ. ಚಿಕ್ಕಣ್ಣನವರ ಕೃತಿಗಳ ಅಧ್ಯಯನ ಇದಾಗಿದ್ದು, ಇಲ್ಲಿ ಇವರ ಸಮಗ್ರ ಸಾಹಿತ್ಯ, ಕಾದಂಬರಿ, ಕಾವ್ಯ, ನಾಟಕ, ಕಥಾಸಾಹಿತ್ಯ ಮತ್ತು ಸಮಾಜದೊಂದಿಗೆ ಇವರ ಒಡನಾಟ, ಸಂಬಂಧ ಮತ್ತು ಇವರ ವ್ಯಕ್ತಿತ್ವ ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ವಿಧಾನ:

ಒಟ್ಟಾರೇ ಇವರ ಎಲ್ಲಾ ಕೃತಿಗಳನ್ನು ಇಟ್ಟುಕೊಂಡಂತೆ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಮಾದರಿಯ ಸಮ್ಮೀಲನ ಈ ಅಧ್ಯಯನವಾಗಿರುತ್ತದೆ.

ಸಮಾರೋಪ:

ಒಟ್ಟಾರೆಯಾಗಿ ಕಾ.ತ. ಚಿಕ್ಕಣ್ಣನವರ ಸಮಗ್ರ ಸಾಹಿತ್ಯದಲ್ಲಿ ಕೈಗಾರೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದ ಗ್ರಾಮೀಣ ಜನರ ಜೀವನ ಮಟ್ಟದಲ್ಲಿನ ಅನೇಕ ತರದ ಬದಲಾವಣೆಗಳು ಆಗಿರುವುದನ್ನು, ಇವರಲ್ಲಿನ ಅನಕ್ಷರತೆ, ಮೂಢನಂಬಿಕೆಗಳು, ಜಾತೀಯತೆ, ಅಜ್ಞಾನ, ವಂಚನೆ, ಮೋಸ ಇನ್ನೂ ಮುಂತಾದ ಅಂಶಗಳು ನಾಶವಾಗಿರುವುದನ್ನು ಲೇಖಕರ ಸಮಗ್ರ ಸಾಹಿತ್ಯದಲ್ಲಿ ಗುರ್ತಿಸುವುದು ಹಾಗೂ ಗ್ರಾಮೀಣ ಜನರು ಮತ್ತು ನಿಸರ್ಗದೊಂದಿಗೆ ಇರುವ ಅನ್ಯೋನ್ಯ ಸಂಬಂಧವನ್ನು ಕಾಣಬಯಸುವುದಾಗಿದೆ.

ಈ ನಿಟ್ಟಿನಲ್ಲಿ ಕಾ.ತ. ಚಿಕ್ಕಣ್ಣನವರ ಸೃಜನಶೀಲತೆಯ ಅಂತರ್ಯದಲ್ಲಿ ಅಡಕವಾಗಿರುವ ಗ್ರಾಮೀಣ ಸಂವೇದನೆಯನ್ನು ಗುರುತಿಸುವುದು ಮುಖ್ಯವೆಂದು ಇಲ್ಲಿ ಪರಿಗಣಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗುವುದು.

ಅಧ್ಯಾಯ ೨

ಕಾ.ತ. ಚಿಕ್ಕಣ್ಣ ಮತ್ತು ಗ್ರಾಮೀಣ ಸಂವೇದನೆ

ಅಧ್ಯಾಯ ೨

ಕಾ.ತ.ಚಿಕ್ಕಣ್ಣ ಮತ್ತು ಗ್ರಾಮೀಣ ಸಂವೇದನೆ

ಚಿಕ್ಕಣ್ಣನವರು ಬರೆಯಲು ಪ್ರಾರಂಭಿಸಿದ ಕಾಲ ನವ್ಯ ಮತ್ತು ದಲಿತ ಬಂಡಾಯದ ಸಂಕ್ರಮಣದ ಕಾಲ. ಕನ್ನಡ ಸಾಹಿತ್ಯ ಸಂಸ್ಕೃತಿ ನವ್ಯದಿಂದ ಬಂಡಾಯದೆಡೆಗೆ ಹೊರಳುತ್ತಿದ್ದ ಕಾಲ. ಈ ಕಾಲಕ್ಕಾಗಲೇ ಕನ್ನಡದ ಸೂಕ್ಷ್ಮ ಸಂವೇದನೆಯ ಲೇಖಕರಾದ ಪಿ.ಲಂಕೇಶ್, ಶಾಂತಿನಾಥ ದೇಸಾಯಿ, ಯು.ಆರ್.ಅನಂತಮೂರ್ತಿ, ತೇಜಸ್ವಿ, ದೇವನೂರು ಮಹಾದೇವ, ಬೇಸಗರಹಳ್ಳಿ ರಾಮಣ್ಣ, ಯಶವಂತ ಚಿತ್ತಾಲ ಮುಂತಾದವರು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಛಾಪನ್ನೇ ಮೂಡಿಸಿದ್ದಾರೆ. ಇಂತಹ ಉತ್ಕೃಷ್ಟ ಹಿನ್ನೆಲೆಯಿದ್ದರೂ ಚಿಕ್ಕಣ್ಣನವರು ಯಾರನ್ನೂ ಅನುಕರಣೆ ಮಾಡದೆ ತಮ್ಮದೇ ಆದ ಶೈಲಿಯಲ್ಲಿ ಕಥೆಯನ್ನು ಬರೆದು ಗ್ರಾಮೀಣ ಸಮಾಜದ ಸೊಗಡನ್ನು ದೇಸಿಯತೆಯ ಸೊಗಡನ್ನು ಮೆರೆದಿದ್ದಾರೆ.

ಚಿಕ್ಕಣ್ಣನವರ ಕಥೆ ಮತ್ತು ಕಾದಂಬರಿ ಸಾಹಿತ್ಯವನ್ನು ಗಮನಿಸಿದಾಗ ಪ್ರಮುಖವಾಗಿ ಎರಡು ನೆಲೆಗಳು ಕಂಡುಬರುತ್ತವೆ. ಮೊದಲನೆಯದು ನವ್ಯ ಧೋರಣೆಗಳನ್ನೊಳಗೊಂಡರೂ ದಲಿತ ಬಂಡಾಯದ ಚೌಕಟ್ಟಿನೊಳಗಿರುವ ಅಂಶಗಳು ಮತ್ತು ಎರಡನೆಯದು ಪ್ರಜ್ಞಾ ಪೂರ್ವಕವಾಗಿಯೇ ಆ ಚೌಕಟ್ಟನ್ನು ಮೀರುವ ಅಂಶಗಳು. ಈ ಎರಡು ನೆಲೆಗಳನ್ನು ಅವರ ಕಥೆಗಳಲ್ಲಿ ಕಾಣಬಹುದು.

ಇವರ ಬಹುತೇಕ ಕಥೆಗಳ ವಸ್ತು ಗ್ರಾಮೀಣ ಪರಿಸರದಲ್ಲಿ ನಿರಂತವಾಗಿ ನಡೆಯುವ 'ಶೋಷಣೆ' ಮತ್ತು ಅದರ ವಿರುದ್ಧ ಬಂಡೇಳುವ 'ಪ್ರತಿಭಟನೆ' ಅಥವಾ ಏನನ್ನೂ ಸಾಧಿಸಲಾಗದ

'ಹತಾಶೆ' ಸ್ಥಿತಿ. ಶೋಷಣೆ ಎನ್ನುವಂತಹದ್ದು ಹಳ್ಳಿ ಮತ್ತು ಪಟ್ಟಣವೆಂಬ ಬೇಧವಿಲ್ಲದೆ ಸೂಕ್ಷ್ಮವಾಗೋ ವಿಶಾಲವಾಗೋ, ಗುಪ್ತಗಾಮಿನಿಯಾಗಿ ನಡೆಯುತ್ತಲೇ ಇರುತ್ತದೆ.

ಜಗತ್ತಿನಲ್ಲಿ ನಡೆಯುವ ಶೋಷಣೆಗೆ ಪ್ರಮುಖ ಕಾರಣ ಜಾತಿ ವ್ಯವಸ್ಥೆ. ಇದರ ಜೊತೆಗೆ ವೈಯಕ್ತಿಕ ಸ್ವಾರ್ಥ, ಲೋಭಗಳು, ಧಾರ್ಮಿಕ ಭೀತಿ, ಅಂಧ ಆಚರಣೆಗಳು ಮುಂತಾದಂತಹವೂ ಶೋಷಣೆಗೆ ಕಾರಣವಾಗುತ್ತವೆ ಎಂಬುದನ್ನು ಕಥೆಗಳಲ್ಲಿ ಕಾಣಬಹುದು. ಜಾತಿಯ ಶೋಷಣೆಯಿಂದ ವೈಯಕ್ತಿಕ ಪ್ರತಿಷ್ಠೆ, ಸ್ವಾರ್ಥ, ಕಾಮನೆಗಳೇ ಅತ್ಯಂತ ಕ್ರೂರವಾಗಿರುತ್ತವೆ. ಇಂತಹ ಅನೇಕವು ಕಥೆಗಳಲ್ಲಿ ಅನಾವರಣಗೊಳ್ಳುತ್ತವೆ. ಇಲ್ಲಿನ ಪಾತ್ರಗಳು ಕೇವಲ ವ್ಯಕ್ತಿ ಚಿತ್ರಮಾತ್ರವಾಗದೆ ಪ್ರತಿಯೊಬ್ಬರ ಅನುಭವದ ಪ್ರತಿರೂಪವು ಆಗುವಂತಹವು. ಆಧುನಿಕ ಜಗತ್ತಿನ ಯಾಂತ್ರಿಕತೆಯ ಅಬ್ಬರಕ್ಕೆ ಸಿಕ್ಕಿ ತಲ್ಲಣಗೊಳ್ಳುತ್ತಿರುವ ಗ್ರಾಮ ಸಂಸ್ಕೃತಿ ಇವರ ಬಹುತೇಕ ಕಥೆಗಳ ದ್ರವ್ಯ.

ಚಿಕ್ಕಣ್ಣನವರ ಕಥೆಗಳಲ್ಲಿನ ವಸ್ತುಗಳೆಲ್ಲ ನಮಗೆಲ್ಲ ಚಿರ ಪರಿಚಿತವಾದವುಗಳೇ. ಬಡತನ, ನಿರಕ್ಷರತೆ, ಮೂಢನಂಬಿಕೆಗಳು, ದಾಯಾದಿ ಮಾತ್ಸರ್ಯಗಳು, ಕಾಮ, ಅಸೂಯೆ, ಹಾದರ, ತಮಗೆ ದೊರಕದ ಆಕರ್ಷಣೆಗಳ ಸೆಳೆತ ಜೀತದ ಕಷ್ಟ, ದುಃಖ-ದುಮ್ಮಾನಗಳು, ಸಾಕು ಪ್ರಾಣಿಗಳ ಜತೆಗಿನ ಸಂಬಂಧ, ಹದಿಹರೆಯದ ಭಾವನೆಗಳು. ಈ ಅಂಶಗಳು ಇಲ್ಲಿನ ಕಥೆಗಳಲ್ಲಿ ಹಾಸುಹೊಕ್ಕಾಗಿವೆ. ಇವುಗಳು ಕೈಗೂಡದೇ ಹೋದಾಗ ಮೌನವಾದ ಬಂಡಾಯ.

ಬಂಡಾಯವೆಂದರೆ ಘೋಷಣೆ ಕೂಗುವ, ಫಲಕ ಹಿಡಿಯುವ, ಅದಕ್ಕೂ ಮಿತಿಮೀರಿ ಹೊಡೆದಾಟ, ರಕ್ತಪಾತ ಎಂಬಂತಹ ದೈಹಿಕ ಬಲ ಪ್ರದರ್ಶನವಲ್ಲ. ಬಡತನ ಇದ್ದರೂ, ನೋವಿದ್ದರೂ ಅದನ್ನೇ ಒಪ್ಪಿ ಜೀವನ ಪ್ರೀತಿಯನ್ನು ಬೆಳೆಸಿಕೊಳ್ಳುವುದೂ ಸಹ ಬಂಡಾಯದ ಇನ್ನೊಂದು ಮುಖವೇ ಆಗಿದೆ. ಬಹಿರಂಗವಾಗಿ ಅನ್ಯಾಯದ ವಿರುದ್ಧ ಬಂಡೇಳದಿದ್ದರೂ ಮೌನವಾದ ಪ್ರತಿಭಟನೆ ಇವರ ಕಥೆಗಳಲ್ಲಿ ಕಂಡುಬರುತ್ತದೆ.

ಚಿಕ್ಕಣ್ಣನವರ ಕಥೆಗಳಲ್ಲಿ ಅನೇಕ ವರ್ಗದ ವಿಭಿನ್ನ ಮನಸ್ಥಿತಿಯುಳ್ಳ ಮಹಿಳೆಯರು ಕಂಡುಬರುತ್ತಾರೆ. ಹುಚ್ಚಿಯಾಗಿ ಸಮಾಜದಿಂದ ತಿರಸ್ಕೃತಳಾಗಿದ್ದರೂ ತನ್ನ ವಿಶೇಷ ಗುಣದಿಂದ ದೇವಾಲಯವನ್ನೇ ಕಟ್ಟಿಸಿಕೊಳ್ಳುವ ಹೆಂಗಸು, ಗಂಡನ್ನು ಬಿಟ್ಟು ಇನ್ನೊಬ್ಬನ ಜೊತೆ ಬಂದು ಅವನೂ ಬಿಟ್ಟು ಹೋದ ಮೇಲೆ ಊರಿನವರ ಕುಹಕಕ್ಕೆ, ಅವಮಾನಕ್ಕೆ ಒಳಗಾಗಿದ್ದರೂ ತನ್ನ ವಿಶಾಲ ತಾಯಿ ಹೃದಯದಿಂದ ಊರಿನವರಿಗೆ ಅಚ್ಚುಮೆಚ್ಚಾಗುವ ಹೆಂಗಸು, ತನಗಿರುವ

ಒಬ್ಬನೇ ಮಗನ ಪ್ರೀತಿಗೆ ಬೆಲೆಕೊಟ್ಟು ತನ್ನ ಬಗ್ಗೆ ಯೋಚಿಸದೆ, ತನ್ನ ಜೀವದ ಆಸೆಯನ್ನು ತೊರೆದು, ತಾನು ಒಂಟಿಯಾದರೂ ಮಗ-ಸೊಸೆ ಚೆನ್ನಾಗಿರಲೆಂದು ಬಯಸುವ ತಾಯಿ.

ಊರು ಬಿಟ್ಟು ಹೋದ ಗಂಡ ಮತ್ತೆ ಬರುವನೆಂದು ಕಾಯುತ್ತ ಕುಂತ ಹೆಣ್ಣು, ಓಡಿಹೋದ ಗಂಡ ತಾನಾಗೇ ಬರಲೆಂದು ಮಾಟ-ಮಂತ್ರ ಎಂದು ಪೂಜಾರಿಯ ಮೋಹಕ್ಕೆ ಒಳಗಾಗುವ ಹೆಣ್ಣು, ಪೂಜಾರಿಯ ಅಸಭ್ಯ ವರ್ತನೆಗೆ ರುದ್ರಿಯಾಗುವ ಹೆಣ್ಣು, ಯಾವುದೋ ಸಣ್ಣ ಮಾತಿಗೆ ಚಿಕ್ಕ ವಯಸ್ಸಿನಲ್ಲಿಯೇ ಮನೆ ಬಿಟ್ಟು ಹೋದ ಮೊಮ್ಮಗನಿಗಾಗಿ ಜೀವವನ್ನು ಕೈಯಲ್ಲಿಡಿದು ಮೊಮ್ಮಗ ಬರುತ್ತಾನೆಂದು ವಯಸ್ಸಾಗಿದ್ದರೂ ಉತ್ಸಾಹದಿಂದಲೇ ಕಾಯುವ ಅಜ್ಜಿ, ಮದುವೆಯ ವಯಸ್ಸು ಮೀರಿದ ಅವಿವಾಹಿತ ಹೆಣ್ಣೊಬ್ಬಳ ಕಾಮನಗಳ, ಸಕಲ ಸಿರಿ ಸಂಪತ್ತಿದ್ದರೂ ಅಂತರಾಳದಲ್ಲಿ ಬಡವಿಯಾದ ಹೆಣ್ಣು, ಗೌಡನ ಹೆಂಡತಿಯಾಗಿ ಅಪಾರ ಗೌರವಕ್ಕೆ ಪಾತ್ರಳಾಗಿದ್ದರೂ ತನ್ನ ಕಾಮ ತೃಷೆಗಾಗಿ ಮನೆಯಲ್ಲಿನ ಮೇಷ್ಟ್ರನ್ನು ಮೋಸಗೊಳಿಸುವ ಹೆಂಗಸು, ಗಂಡು ಮಗನಂತೆ ಬೆಳೆದು ಈ ವ್ಯವಸ್ಥೆಯ ಪಿತೂರಿಗೆ ಹೀಗೆ ಮುಂತಾದ ಭಿನ್ನ ಭಿನ್ನ ವಸ್ತುಗಳಿಂದ ಕೂಡಿರುವ ಸಮಾಜದಲ್ಲಿನ ಬೇರೆ ಬೇರೆ ಪಾತ್ರಗಳನ್ನು ಇವರ ಕಥೆಗಳಲ್ಲಿ ಕಾಣುತ್ತೇವೆ.

ಚಿಕ್ಕಣ್ಣನವರು ಕಥೆ ಬರೆಯಲು ಆರಂಭಿಸಿದ ಕಾಲ, ಕನ್ನಡದಲ್ಲಿ ನವ್ಯತೆಯ ಚಿಂತನೆಗಳು ಒಂದು ಹಂತದ ಪರಾಕಾಷ್ಠತೆಯನ್ನು ತಲುಪಿ ಆ ಪರಾಕಾಷ್ಠತೆಯ ಬಲೆಯಿಂದ ಬಿಡಿಸಿಕೊಳ್ಳಲೋಸಗ ಹೊರಳುತ್ತಿದ್ದ ಕಾಲ ಅಂಚಿನಲ್ಲಿದ್ದ ದಲಿತ-ಬಂಡಾಯ ಹುಟ್ಟು ಪಡೆದ ಪ್ರಾರಂಭ ಸಂದರ್ಭದಲ್ಲಿನ ಕಾಲ ಎಂದು ಈಗಾಗಲೇ ಹೇಳಲಾಗಿದೆ. ಹಾಗಾಗಿ ಅವರ ಕಥೆಗಳ ಒಲವು-ನಿಲುವೂ ಕೂಡ ಬಂಡಾಯ ದಲಿತರ ಉದ್ಘೋಷಿತ ಮೌಲ್ಯಗಳಿಗೆ ಪೂರಕವಾಗಿರುವಂಥದ್ದು. ಅಂತಹ ಬಂಡಾಯ ದಲಿತ ಸಂವೇದನೆಯ ಮೂಲ ಗ್ರಾಮಗಳು ಮತ್ತು ಗ್ರಾಮೀಣ ಬದುಕು.

ಚಿಕ್ಕಣ್ಣನವರು ಮೂಲತಃ ಗ್ರಾಮೀಣ ಸೊಗಡಿನ ಕುಸುಮವಾದ್ದರಿಂದ ಗ್ರಾಮೀಣ ಬದುಕಿನ ನೈಜ ಚಿತ್ರಣವನ್ನು ಅದರಲ್ಲಿ ದಲಿತ ಸಂವೇದನೆಯನ್ನು ಹಿಡಿಯುವುದರಲ್ಲಿ ಸಫಲರಾಗಿದ್ದಾರೆ. ಗ್ರಾಮೀಣ ಬದುಕಿನ ಅನುಭವಗಳು ಮತ್ತು ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ನಾನಾ ವಿವಿಧ ಭಿನ್ನ ಭಿನ್ನ ಮನೋಭಾವದ ಪಾತ್ರಸ್ತರಗಳು ಕುತೂಹಲಕರವೂ, ಅಚ್ಚರಿದಾಯಕವೂ

ಆಗುವಂಥಹವು. ಗ್ರಾಮೀಣ ಬದುಕು ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಸಾಕ್ಷಿ ಪ್ರಜ್ಞೆಗಳಾಗುವುದರ ಜೊತೆಗೆ ಸಮಾಜದ ಸ್ಥಿತಿಗತಿಗಳನ್ನು ವಿಡಂಬಿಸುವ, ಪ್ರತಿಭಟಿಸುವ ಬದಲಾಗಬೇಕಾದ ಗೊತ್ತು ಗುರಿಯನ್ನು ನಿರ್ದೇಶಿಸುವ ಅಮೂಲ್ಯವಾದ ಕೆಲಸವನ್ನು ಮಾಡುತ್ತಿರುತ್ತದೆ. ಕಾರಣ ಗ್ರಾಮೀಣ ಬದುಕಿನ ಮಾದರಿಗಳು ಬಹುತೇಕವಾಗಿ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಗಾಮಿತ್ವದಿಂದ ಕೂಡಿದವುಗಳೇ ಆಗಿರುತ್ತವೆ. ಆ ಪರಿಸರದಲ್ಲಿ ರೂಪಗೊಳ್ಳುವ ಅರ್ಥವಿನ್ಯಾಸಗಳು ಕಾಲ ಮತ್ತು ಪರಿಸರದ ಗಡಿರೇಖೆಗಳನ್ನು ಸಮೀರಿಸಿಕೊಂಡು ಬಹಳ ಎತ್ತರಕ್ಕೆ ನಿಂತು ಮಾರ್ಗದರ್ಶಕವಾಗುವ ಸಾಧ್ಯತೆಗಳು ಇವೆ. ಬಹಳ ಸಂದರ್ಭದಲ್ಲಿ ನಾವೀನ್ಯತೆಗೆ ಸಾಕ್ಷಿಯಾಗಿಯೂ ಇರುತ್ತವೆ. ಹಾಗಾಗಿ ಚಿಕ್ಕಣ್ಣನವರ ಕಥೆಗಳು ಆತ್ಮಾವಲೋಕನ ಮಾಡಿಕೊಳ್ಳುವಂತಹ ಕಥೆಗಳು ಎನ್ನಬಹುದು.

ಚಿಕ್ಕಣ್ಣನವರ ಬಹುತೇಕ ಕಥೆಗಳು ಗ್ರಾಮ ಸಂಸ್ಕೃತಿಯ ಪರಿಶೀಲನೆಗೆ ಆಕರಗಳಾಗುತ್ತವೆ. "ಸಮಾಜ-ನಿಸರ್ಗಗಳ ಪರಸ್ಪರ ಮಗ್ಗಲುಗಳನ್ನು ಗ್ರಾಮೀಣ ಪದರ ಪದರಿನಲ್ಲಿ ವಿವರಿಸುತ್ತಾ ಮಾನವೀಯ ನೆಲೆಯ ದಟ್ಟ ನೆಲೆಯನ್ನು ಪರಿಗಣಿಸುವುದೇ ಚಿಕ್ಕಣ್ಣನವರು ಹಿರಿಮೆ"[೧] ಎಂದು ಹೇಳಿದ್ದಾರೆ.

"ನಿಜವಾಗಿ ಅವರ ಕಥೆಗಳ ವಸ್ತುಶೋಷಣೆ; ಗ್ರಾಮ ಜೀವನದಲ್ಲಿ ಹಾಸು ಹೊಕ್ಕಾಗಿರುವ ಶೋಷಣೆ. ಈ ಶೋಷಣೆಯ ವಸ್ತುವನ್ನು ಅವರು ಸರಳಗೊಳಿಸುವುದಿಲ್ಲ ಎನ್ನುವುದು ಈ ಸಂಗ್ರಹದಲ್ಲಿ ನನಗೆ ಮಹತ್ವದ ಸಂಗತಿಯಾಗಿ ಕಾಣುತ್ತದೆ. ನೈಜವಾದ ಸಹಾನುಭೂತಿ ಇದ್ದರೂ ಹೊರಗಿನಿಂದ ಗ್ರಾಮ ಜೀವನದ ಶೋಷಣೆ ಕಾಣುವ ರೀತಿಯೇ ಬೇರೆ. ಆ ಜೀವನದ ಭಾಗವಾಗಿ ಅಲ್ಲಿನ ಜನರೊಂದಿಗೆ ಬೆರೆತು ಅದರಿಂದ ಸಾಕಷ್ಟು ದೂರ ನಿಂತು ನೋಡುವ ಶಕ್ತಿ ಬೆಳೆಸಿಕೊಂಡಾಗ ಅದು ಕಾಣುವ ರೀತಿಯೇ ಬೇರೆ."[೨] ('ಒಡಲುರಿ' ಕಥಾಸಂಕಲನಕ್ಕೆ ಮುನ್ನುಡಿ ಬರೆದಿರುವ ಪ್ರೊ.ಎಲ್.ಎಸ್. ಶೇಷಗಿರಿರಾವ್‌ರವರು ಕಾ.ತ.ಚಿಕ್ಕಣ್ಣನವರ ಕಥೆಗಳಲ್ಲಿ ಗ್ರಾಮೀಣ ಸಂವೇದನೆ ಕುರಿತು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.)

"....ಹಳ್ಳಿಗಾಡಿನಲ್ಲಿ ನಡೆಯುವ ಅಮಾಯಕರ ಶೋಷಣೆಯ ದಟ್ಟ ಚಿತ್ರಣ ಇವರ ಕಥೆಗಳಲ್ಲಿದೆ...."[೩]

".... ಈ ಕಥೆಗಳಲ್ಲಿ ದಟ್ಟವಾದ ಬದುಕು, ಪ್ರಾದೇಶಿಕತೆಯ ಸೊಗಡು ಮತ್ತು ಭಾಷೆಯ ಕನ್ನೆತನಗಳು ತುಂಬಿಕೊಂಡಿವೆ."[೪]

"ಇವತ್ತಿನ ನಮ್ಮ ಎಷ್ಟೋ ಹಳ್ಳಿಗಳಲ್ಲಿ ಅಕ್ಷರ ಕಲಿಯುವುದೇ ಸಾಧ್ಯವಿಲ್ಲದಂಥ ಸ್ಥಿತಿ ಇದೆ. ಅಂಥ ಅನಕ್ಷರಸ್ಥ ಸಮಾಜದಲ್ಲಿ ಅಕ್ಷರ ಕಲಿಯುವುದೇ ಸಾಧ್ಯವಿಲ್ಲದಂಥ–ಹಾಗೊಮ್ಮೆ ಕಲಿತದ್ದಾದರೆ ಶಿಕ್ಷೆಗೆ ಗುರಿಯಾಗಬೇಕಾದಂಥ ದುರಂತಕ್ಕೆ ಒಳಗಾಗುತ್ತಿದ್ದಂಥ ಗ್ರಾಮೀಣ ವಲಯದಿಂದ ಬಂದು ಅಲ್ಲಿಯವರ ನೋವುಗಳನ್ನೂ, ಭಾವನೆಗಳನ್ನೂ ಆಸೆ–ಆಕಾಂಕ್ಷೆಗಳನ್ನು ಅವರ ಇಡೀ ಬದುಕಿನ ಒಳನೋಟಗಳನ್ನು ಹೆಚ್ಚು ಆತ್ಮೀಯವಾಗಿ–ಕಲಾತ್ಮಕವಾಗಿ ಕಥಾಮಾಧ್ಯಮದಲ್ಲಿ ನಿರೂಪಿಸುತ್ತ ಬಂದ ನಮ್ಮ ಇವತ್ತಿನ ಕೆಲವೇ ತರುಣ ಕಥೆಗಾರರಲ್ಲಿ ಕಾ.ತ.ಚಿಕ್ಕಣ್ಣ ಒಬ್ಬರಾಗಿದ್ದಾರೆ..... ಗ್ರಾಮೀಣ ಹಾಗೂ ನಾಗರೀಕ ಸಂಸ್ಕೃತಿಯ ವಿವರಿಸುವ ಕಥೆಗಳಲ್ಲಿ ಸಾಮಾಜಿಕ ಕಳಕಳಿ ಒಂದು ಮೌಲಿಕ ಅಂಶವಾಗಿದೆ..."[೫] (ಜಿ.ಆರ್. ತಿಪ್ಪೇಸ್ವಾಮಿ, ಕನ್ನಡ ಪ್ರಭ, ೩೦.೧೦.೧೯೮೮)

"ಈ ಕಥೆಗಳಲ್ಲಿ ಲೇಖಕರು ಬಡತನದ ಬವಣೆಯನ್ನು ಅದರ ಅಸಹಾಯಕತೆಯನ್ನು ಕೇವಲ ಹೊರಗಿನಿಂದ ಮೇಲೆ ಮೇಲಷ್ಟೇ ನೋಡಿ ಚಿತ್ರಿಸಿರದೆ ಅದರ ಒಳಗಿನಿಂದ ಸ್ವತಃ ಅನುಭವಿಸಿದಂತೆ ಆಪ್ತವಾಗಿ ಚಿತ್ರಿಸಿದ್ದಾರೆ. ಇವರ ಹೆಚ್ಚಿನ ಕಥೆಗಳಿಗೆ ಸಾಮಾನ್ಯವಾಗಿ ಗ್ರಾಮೀಣ ಜೀವನದ ಜಾನಪದ ಸಂಸ್ಕೃತಿಯೇ ಮುಖ್ಯವಾದ ಹಿನ್ನೆಲೆಯಾಗಿದೆ ಮತ್ತು ಪರಿಸರವಾಗಿದೆ..."[೬] (ಅನ್ವೇಷಣೆ, ಮೇ–ಜೂನ್,೧೯೮೯)

"ಗ್ರಾಮೀಣ ಬದುಕಿನ ಸುಖ ದುಃಖಗಳನ್ನು ಹೇಳುವ ಕಥೆಗಳು, ನಾಗರಿಕ ಜೀವನದ ಹಿನ್ನೆಲೆಯಲ್ಲಿ ವ್ಯಕ್ತಿತ್ವಗಳನ್ನು ಪರಿಶೀಲಿಸುವ ಕಥೆಗಳೂ ಸೇರಿವೆ. ಬಡಜನರ ಬವಣೆಗಳನ್ನು ಚಿತ್ರಿಸುವ ಕಥೆಗಳಲ್ಲಿ ಒಂದು ರೀತಿಯ ರಮ್ಯ ನೈಜತೆ ಇದೆಯೇನೋ ಅನಿಸುವುದಾದರೂ ಈ ಚಿತ್ರಗಳು ಇಷ್ಟವಾಗುತ್ತವೆ. ಗ್ರಾಮೀಣ ಭಾಷೆಯ ಕಥೆಗಳಿಗೆ ಪೂರಕವಾಗಿವೆ."[೭]

"ಗ್ರಾಮ ಜೀವನದ ಸುತ್ತ ಆವರಿಸಿರುವ ಬದುಕನ್ನು ಆತ್ಮೀಯವಾಗಿ ನೋಡುವುದೇ ಇವರ ಒಟ್ಟು ಕಥನ ಕ್ರಮದ ಉದ್ದೇಶ..."[೮] (ಶೂದ್ರ ಶ್ರೀನಿವಾಸ–ಲಂಕೇಶ್ ಪತ್ರಿಕೆ, ಫೆಬ್ರವರಿ ೧೭, ೧೯೯೧).

"ಇವರು ಗ್ರಾಮ ಜೀವನದ ವಿವಿಧ ಅಂಶಗಳು ಅವರ ಸ್ವಭಾವ ಪದ್ಧತಿ ಪ್ರವೃತ್ತಿ ನಂಬಿಕೆಗಳು ಇವುಗಳನ್ನೆಲ್ಲ ಚೆನ್ನಾಗಿ ಅರಿತಿದ್ದಾರೆ. ಗ್ರಾಮಸ್ತರ ಜೀವನದ ಒಳಹೊಕ್ಕು ಒಂದು ರೀತಿಯಲ್ಲಿ ಪರಕಾಯ ಪ್ರವೇಶವನ್ನು ಮಾಡಿ ಅವರ ನೋವು ನಲಿವುಗಳನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ."[೯]

"ಈ ಕೃತಿಯಲ್ಲಿ ಗ್ರಾಮೀಣ ಜನಜೀವನದ ದಟ್ಟ ನಿರೂಪಣೆಯಿದೆ. ಇಲ್ಲಿಯ ಕಥೆಗಳ ಮುಖ್ಯ ವಸ್ತು ಶೋಷಣೆ. ಶೊಷಣೆಯ ವಿವಿಧ ಮಜಲುಗಳನ್ನು ಲೇಖಕರು ಪ್ರಖರವಾಗಿ ಚಿತ್ರಿಸಿದ್ದಾರೆ. ಹಳ್ಳಿಯ ಬದುಕಿನ ಸಮರ್ಥ ಚಿತ್ರಣ ಇಲ್ಲಿದೆ."[೧೦]

"ಸಮಾಜ–ನಿಸರ್ಗಗಳ ಪರಸ್ಪರ ಮಗ್ಗಲುಗಳನ್ನು ಗ್ರಾಮೀಣ ಪದರಿನಲ್ಲಿಯೇ ವಿವರಿಸುತ್ತ, ಮಾನವೀಯ ಸೆಲೆಯ ದಟ್ಟ ನೆಲೆಯನ್ನು ಪರಿಗಣಿಸುವುದೇ ಚಿಕ್ಕಣ್ಣನವರ ಹಿರಿಮೆಯಾಗಿದೆ."[೧೧]

ಹೀಗೆ ಗ್ರಾಮೀಣ ಮಹಿಳೆಯರ ಅಂತರ್ಮುಖತೆ, ಆತ್ಮ– ಪ್ರಜ್ಞೆ, ದ್ವಂದ್ವಗಳ ಅರಿವನ್ನು ಚಿಕ್ಕಣ್ಣನವರ ಕಥೆಗಳಲ್ಲಿ ಗುರ್ತಿಸಬಹುದು. ಇಲ್ಲಿನ ಮಹಿಳೆಯರ ಕಥೆಗಳು ಕೇವಲ ಮನೋರಂಜನೆಯಲ್ಲದೆ ಕೇವಲ ಸಾಮಾಜಿಕ ಜಾಗೃತಿಯೂ ಅಲ್ಲದ ಬದುಕಿನ ಸತ್ಯದ ಅನಾವರಣವಾಗಿದೆ.

ಗ್ರಾಮೀಣ ಪರಿಸರದ ದಟ್ಟವೆನಿಸುವ ಅನುಭವಗಳನ್ನು ಕಾ.ತ.ಚಿಕ್ಕಣ್ಣರವರು ಸೃಜನಶೀಲ ಆಕೃತಿಗೆ ಇಳಿಸಿದ್ದಾರೆ. ಇವರು ತಮ್ಮ ಗ್ರಾಮೀಣ ಬದುಕಿನ ಅನುಭವಗಳ ವಸ್ತುವೆಲ್ಲ ನಮಗೆ ಪರಿಚಿತವಾದಂಥವೇ. ಬಡತನ, ನಿರಕ್ಷರತೆ, ಮೂಢನಂಬಿಕೆಗಳು, ದಾಯಾದಿ ಮಾತ್ಸರ್ಯ, ಕಾಮ, ಅಸೂಯೆ, ಹಾದರ, ತಮಗೆ ದೊರಕದ ಆಕರ್ಷಣೆಗಳ ಸೆಳೆತ, ಜೀತದ ಕಷ್ಟ, ದುಃಖ ದುಮ್ಮಾನಗಳು, ಸಾಕುಪ್ರಾಣಿಗಳ ಜತೆಗೆ ಬಾಳಬೇಕಾದ ಸಂದರ್ಭಗಳು ಹೀಗೆಲ್ಲ ಮುಂತಾದವುಗಳನ್ನು ಕುರಿತು ಚಿತ್ರಿಸಿದ್ದಾರೆ.

ಕೊನೆ ಟಿಪ್ಪಣಿಗಳು:

೧. ಸೊಲ್ಲೆತ್ತಿ, ಸಂಪಾದಕಿ ಡಾ.ಮಲ್ಲಿಕಾ ಘಂಟಿ, ತುಳುಕಿನ ವೆಂಕಣ್ಣಯ್ಯ, ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ೨೦೦೧

೨. ಕಂಡೇರಿ, ಕಾ.ತ.ಚಿಕ್ಕಣ್ಣ, ಮುನ್ನುಡಿ, ಸುಂದರ ಪ್ರಕಾಶನ, ಬೆಂಗಳೂರು, ಪುಟ ೩೯೩, ೨೦೦೪

೩. ಅದೇ, ಪುಟ ೩೮೫.

೪. ಅದೇ, ಪುಟ ೩೮೫.

೫. ಅದೇ, ಪುಟ ೩೮೫–೩೮೬.

೬. ಅದೇ, ಪುಟ ೩೮೬.

೭. ಅದೇ, ಪುಟ ೩೮೭

೮. ಅದೇ, ಪುಟ ೩೮೭

೯. ಅದೇ, ಪುಟ ೩೯೦.

೧೦. ವಾಸನಾಮಯ ಬದುಕಿನ ಆಚೆ–ಈಚೆ, ಕಾ.ತ.ಚಿಕ್ಕಣ್ಣ, ನಲ್ಮೆ ಪ್ರಕಾಶನ, ಬೆಂಗಳೂರು, ಪುಟ, ೧೦೮–೧೧೧, ೧೯೮೮.

೧೧. ಸೊಲ್ಲೆತ್ತಿ, (ಸಂ) ಡಾ. ಮಲ್ಲಿಕಾ ಘಂಟಿ, ತುಳುಕಿನ ವೆಂಕಣ್ಣಯ್ಯ, ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ಪುಟ ೧೮೨–೧೮೯, ೨೦೦೧.

ಅಧ್ಯಾಯ ೩

ಕಥಾ ಸಾಹಿತ್ಯ ಮತ್ತು ಗ್ರಾಮೀಣ ಸಂವೇದನೆ

ಅಧ್ಯಾಯ ೩
ಕಥಾ ಸಾಹಿತ್ಯ ಮತ್ತು ಗ್ರಾಮೀಣ ಸಂವೇದನೆ

ಕಾ.ತ.ಚಿಕ್ಕಣ್ಣನವರು ನಮ್ಮ ನಡುವಿನ ಉತ್ತಮ ಕಥನಕಾರರು. ಹಳ್ಳಿಗಾಡಿನ ಅನಾಮಿಕ ಜೀವಿಗಳ ವ್ಯಕ್ತಿತ್ವ ಸಿರಿಯನ್ನು ಶೋಧಿಸುವುದು ಇವರ ಬರಹದ ಪ್ರಧಾನ ಗುರಿ. ಸಿದ್ಧಾಂತದ ಚೌಕಟ್ಟಿಗಿಂತ ಮಾನವೀಯ ಮೌಲ್ಯಗಳ ನಿರೀಕ್ಷೆಯಲ್ಲಿ ಅನುಭವವನ್ನು ಆಕೃತಿಗಿಳಿಸುವ ಇವರ ರೀತಿ ವಿಶಿಷ್ಟವಾದುದು. ಬಾಲ್ಯಾನುಭವದ ನೆನಪಿನ ಕೋಶವನ್ನು ತಮ್ಮ ಕಥನದ ವಸ್ತು ದ್ರವ್ಯವಾಗಿಸಿಕೊಂಡರು. ವರ್ತಮಾನದ ವಿಸಂಗತಿಗಳ ಎದುರಲ್ಲಿ ಅದನ್ನು ಮುಖಾಮುಖಿಯಾಗಿಸುತ್ತಾರೆ. ಕಳೆದು ಹೋದ ವ್ಯಕ್ತಿ ಅಳಿದು ಹೋಗುತ್ತಿರುವ ಪರಂಪರೆಯ ಜೀವನ ಕ್ರಮ ಇವು ಇವರ ಕಥೆ ಕಾದಂಬರಿಗಳಲ್ಲಿ ಕಾಡುವ ಸಂಗತಿಗಳು. ಆಕ್ರಮಕ ರೀತಿಯಲ್ಲಿ ಎರಗುತ್ತಿರುವ ಆಧುನಿಕ ಜ್ಞಾನಸ್ಫೋಟ, ಅದರ ಅಬ್ಬರಕ್ಕೆ ಸಿಕ್ಕಿ ತಲ್ಲಣ್ಣ ವಿಷಾದ ಆತಂಕಗಳನ್ನು ಉಣ್ಣುತ್ತಿರುವ ತಳಮೂಲ ಸಂಸ್ಕೃತಿಗಳ ಗತಿಸ್ಥಿತಿ. ಇವು ಇವರ ಕಥನದ ಸಂವೇದನಾ ದ್ರವ್ಯ. ಹಳ್ಳಿಯ ಅಕ್ಷರ ಜ್ಞಾನ ವಂಚಿತ ಬಡ ಜನ ಸಮುದಾಯದ ಬವಣೆಗಳನ್ನು ಕುರಿತು ಇವರ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಇವರ ಪ್ರಾರಂಭಿಕ ಕಥೆಗಳು ೧೯೭೭ರಲ್ಲಿ ಪ್ರಕಟವಾದವು. ಚಿಕ್ಕಣ್ಣನವರು ಇದುವರೆಗೆ ಒಟ್ಟು (ಪ್ರಕಟಿತ) ೫೬ ಕಥೆಗಳನ್ನು, ಒಟ್ಟು ಆರು ಕಥಾ ಸಂಕಲನಗಳಲ್ಲಿ ಹೊರ ತಂದಿದಾರೆ. ಅವುಗಳೆಂದರೆ ೧.ಅಗಾಂತರ (೮), ೨.ಮನಸು-ಮುಗಿಲು (೧೨), ೩. ವಾಸನಾಮಯ ಬದುಕಿನ ಆಚೆ ಈಚೆ (೧೨), ೪. ಒಡಲುರಿ (೧೦), ೫. ಬಿಳಿಲು ಬಿಟ್ಟು ಬದುಕು (೧೦), ೬. ಸಂಕಲನ (೦೪) ಇವರ ಕಥಾ ಸಾಹಿತ್ಯದ ಸಮಗ್ರ ಕಥೆಗಳ ರೂಪದಲ್ಲಿ 'ಕಂಡೇರಿ' ೨೦೦೪ರಲ್ಲಿ ಪ್ರಕಟವಾಗಿದೆ.

ಕಥೆಗಾರರು ಕೇವಲ ಶೋಷಣೆಯ ಅಮಾನವೀಯ ಮುಖವನ್ನು ಚಿತ್ರಸುವುದರ ಜೊತೆಗೆ ಶೋಷಣೆಗೆ ವಿರುದ್ಧ ಎಂದಾದರೂ ಒಂದು ದಿನ ಪ್ರತಿಭಟನೆಯ ಕಿಡಿ ಏಳುವುದು ಅನಿವಾರ್ಯತೆಯನ್ನೂ ತಮ್ಮ ಕಥೆಗಳಲ್ಲಿ ಗುರ್ತಿಸುತ್ತಾರೆ. ಈ ಸಂದರ್ಭದಲ್ಲಿ ನಾವು ಈ ಕಥೆಗಳ ಆಕೃತಿಯ ಬಗ್ಗೆ ಒಂದು ಮುಖ್ಯ ಅಂಶವನ್ನು ಗಮನಿಸಬೇಕು. ಈ ಘಟ್ಟದ ಹೆಚ್ಚಿನ ಕಥೆಗಳು ಶೋಷಣೆಯ ಚಿತ್ರಣದಿಂದ ಪ್ರಾರಂಭವಾಗಿ, ಪ್ರತಿಭಟನೆಯ ಸ್ಫೋಟಕ ಕ್ಷಣದತ್ತ ಚಲಿಸುತ್ತವೆ; ಮತ್ತು ಕೇಂದ್ರ ಪಾತ್ರದ ಪ್ರತಿಭಟನೆಯ ನಿರ್ಧಾರದೊಂದಿಗೆ ಕಥೆಗಳು ಮುಕ್ತಾಯವನ್ನು ತಲುಪುತ್ತವೆ. ಈ ಅಂಶಗಳನ್ನು ಸ್ಪಷ್ಟಪಡಿಸಲು ಎರಡು ಪ್ರಾತಿನಿಧಿಕ ಹಾಗೂ ಯಶಸ್ವೀ ಕಥೆಗಳಾಗದ 'ಒಡಲುರಿ' ಮತ್ತು 'ಕಿಡಿ' ಇವುಗಳನ್ನು ನೋಡಬಹುದು.

'ಒಡಲುರಿ' ಕೃತಿಯಲ್ಲಿ 'ಒಡಲುರಿ'ಯೂ ಒಂದು ಕಥೆ. ಇದರಲ್ಲಿನ ವಿದ್ಯಾಪಾತ್ರ 'ಸಣ್ಣಿಂಗಿ' ಎಂಬ ಬಡ ಹೆಂಗಸು. ಸಾದು ಸ್ವಭಾವದವಳು. ಹಟ್ಟೀಲಿ ಹುಟ್ಟಿದ್ದ ಹೀನಸುಳೀ. ಹೋರಿನ ಬೋರೆ ಸಂತೇಲಿ ಮಾರಿ ಬರುತ್ತೀನಿ ಅಂತ ಹೋರಿ ಹೊಡಕೊಂಡು ಹೋಗಿದ್ದ ಗಂಡ ತಿರುಗಿ ಬಂದಿರಲಿಲ್ಲ. ಈಗ ಬರಬೌದೆಂದು ಸಂಜೆ, ರಾತ್ರಿ, ಹಗಲು ಕಳೆದು ವಾರವೂ ಉರುಳಿದಾಗ ಗಂಡ ಮನೆಬಿಟ್ಟ ಬಗ್ಗೆ ಊರಲಿ ಗುಮಾನಿ ಸಾಲುಗಟ್ಟಿ ನಿಂತವು.

"ಹಸುಗೂಸುನಂಥ ಮನಸ್ನ ಸದಾ ಜಗಳ ಮಾಡಿ ಓಡಿಸಿ ಬುಟ್ಲು ಈ ರಬಾಜಿ" ಅಂತ ಚುಚ್ಚಿದಂಗೆ ಅನ್ನುತ್ತಿದ್ದ ಮಾತು ಯಾರ್‍ಯಾರಿಗೊ ಸಂಬಂಧ ಕಟ್ಟಿ, ಅದಕ್ಕೆ ಗಂಡ ಓಡೋದ ಅಂತ ಹುಟ್ಟಿಸಿದ ಆರೋಪ, ಮನ್ನಳ್ಳಿ ಚಾತಿಸಾಬಿ ಹೋರಿ ಮಾರಿದ ಹಣದಲ್ಲಿ ಏನೋ ಮೋಸ ಮಾಡಿದ್ನಂತೆ ಇನ್ನು ಬರಿ ಕೈಲಿ ಮನೆಗೆ ಹೋಗಿ ಹೇಳಿದ್ರೆ ಆ ಗಯ್ಯಾಳಿ ಹೆಂಡ್ತಿ ಬುಟ್ವಾಳ ಅಂತ ಅಂಜಿ ಎತ್ತಾಗೋ ಹೋದ್ನಂತೆ" ಎಂಬ ನಾನಾರ್ಥರದ ಮಾತುಗಳು ಗಂಡ ಹೋದುದಕ್ಕೆ ಊರಿನೋರು ಕೊಟ್ಟ ಕಾರಣಗಳು.

ಗ್ರಾಮೀಣ ಪ್ರದೇಶದಲ್ಲಿ ಗಂಡನಿಲ್ಲದ ಬಾಳು ತುಂಬ ಕಷ್ಟಗಳಿಂದ ಕೂಡಿದ್ದು, ಜನರ ಚುಚ್ಚು ಮಾತುಗಳಿಗೆ ತಾಳಲಾರದೇ ಅನೇಕ ಸ್ತ್ರೀಯರು ತಮ್ಮ ಪ್ರಾಣವನ್ನೆ ಬಲಿಯಾಗಿಸಿಕೊಂಡಿದ್ದಾರೆ. ಆದರೆ ಇಲ್ಲಿನ (ಒಡಲುರಿ) ಸಣ್ಣಿಂಗಿ ಅದ್ಯಾವುಕ್ಕು ಎದೆಗೂಡದೆ ಧೈರ್ಯದಿಂದ ಇದ್ದು, ಗಂಡನ ದಾರಿಯನ್ನೇ ಎದುರು ನೋಡುತ್ತಿದ್ದಾಳೆ.

ಕೂಲಿನಾಲಿ ಮಾಡಿ ಬದುಕು ಸಾಗಿಸುತ್ತಿರುವ ಸಣ್ಣಿಂಗಿ ಪಳ್ಳಿಯ ಪೂಜಾರಪ್ಪ ಹೇಳಿದಂತೆ ಊರ ಹೊರಗಡೆ ತನ್ನ ಗಂಡನು ಮರಳಿ ಬರುವುದಕ್ಕಾಗಿ ವಿಶೇಷ ಪೂಜೆ ಮಾಡಿಸಲು

ಸಿದ್ಧಳಾಗುತ್ತಾಳೆ. ತಡವಾಗಿ ಬಂದದ್ದಕ್ಕೆ ಪೂಜಾರಪ್ಪ "ಏನ್ ಸಣ್ಣಿಂಗಕ್ಕ ಇಷ್ಟೊತ್ತಾಗ ಬರೋದು?" ಎಂದು ಪೂಜಾರಪ್ಪ ಗಡುಸಾಗಿ ಇವಳಿಗೆ ಬೈಯುತ್ತಾನೆ.

"ಓ! ಇಲ್ಲೆ ಇದ್ದೀಯಾ ಪೂಜಾರಪ್ಪ, ಬುಡು ಅತ್ಲಾಗಿ ಯಾರಾದ್ರು ಕಂಡಾರು ಅಂತ್ಲೇಳಿ ಎಲ್ಲ ಮನ್ಗೆ ಹೊಕ್ಕೊಂಡ್ಮೇಲೆ ಬಂದೆ, ಆಮ್ಯಾಲೆ ಯಾವ ಗಾಚಾರ ಅಂತ"[೨] ಅಂದಳು. ಅವನು "ಹೊಗ್ಲಿ ನಡಿ ಹೊತ್ತಾಯ್ತು" ಅಂದ. ಹೀಗೆ ಸಣ್ಣಿಂಗಿಗೆ ಸಹಜವಾಗಿ ದೊರೆತ ಸಮಾಧಾನ ಪೂಜಾರಪ್ಪನನ್ನು ಹೆಚ್ಚು ಆಪ್ತನನ್ನಾಗಿಸಿತ್ತು. ಅವನ ಜೊತೆ ಮನಬಿಚ್ಚಿ ಮಾತಾಡುತ್ತಾ ಸಾಗಿದಳು.

ಪೂಜಾರಪ್ಪ ತೋರಿಸಿದ ನೀರಿದ್ದ ಗುಂಡಿ ಹತ್ರ ಅವಳನ್ನು ಕೂರಿಸಿ, ತಾನೂ ಕುಕ್ಕರಗಾಲಲ್ಲಿ ಕೂತುಕೊಂಡು ತಡೆ ಒಡಿಯೊಶಾಸ್ತ್ರ ಆರಂಭಿಸಿದ. ಶಾಸ್ತ್ರ ಮುಗಿಯೊ ಹೊತ್ತಿಗೆ ಸಮಸಮ ಹೊತ್ತಾಗಿತ್ತು.

"ಯಾರೋ ತಡೆಕಟ್ಟಿದ್ದು ನಿಜಯಿತು ಸಣ್ಣಿಂಗಕ್ಕಾ. ಅದ್ಕೆ ನೋಡು ಹೆಂಗೆ ಕಾಯಿ, ಹಣ್ಣು, ಮಟ್ಟೆಯಲ್ಲ ಅಳ್ಳಾಡದಂಗೆ ಕೂತು ಒಂದೇ ಏಟಿಗೆ ತುಂಡಾದೊ. ಈಗ ಬುಡು ನಮ್ ಕಾರ್ಯ ಜಟನಾಯ್ತು. ಇನ್ನು ನಿನ್ನ ಗಂಡ ನೆಟ್ಟಂಗೆ ಹಟ್ಟಿಗೆ ಬರುತ್ತಾನೆ." ಎಂದು ಹೇಳಿ ಇಬ್ಬರು ಊರ ಕಡೆಗೆ ಹಿಂದೆ ಪೂಜಾರಪ್ಪನು ಮುಂದೆ ಸಣ್ಣಿಂಗೆ ಬರುತ್ತಿದ್ದರು. ಸಣ್ಣಿಂಗಿಗೆ ಭಾಳ ನಿರಾಳಗಿತ್ತು. ಇಷ್ಟು ದಿನ ಕೊರೀತ್ತಿದ್ದ ಕೊರಗು ಈಗ ತಾನೇ ಕಡಿಮೆಯಾಗ ತೊಡಗಿದಂತಾಗಿತ್ತು.

ಇಬ್ಬರೂ ಊರ ಹತ್ತಿರ ಬರುತ್ತಿದ್ದರು. ಪೂಜಾರಪ್ಪ ಇನ್ನು ಇಂಥ ಅವಕಾಶ ಬುಟ್ರೆ ಸಿಗಲ್ಲವೆಂದು, ಒಂಥರ ನೋವಿನಲ್ಲಿ 'ಸಣ್ಣಿಂಗೀ' ಅಂತ ನರಳುತ್ತ ತಬ್ಬಿಕೊಂಡೇಬಿಟ್ಟ, ಅವಳಿಗೆ ಪೂಜಾರಪ್ಪ ಯಾಕಿಂಗೆ ಆಡ್ತಿದ್ದಾನೆ ಅಂತ ತಿಳಿದೆ ಗಾಬರಿಗೊಂಡು ಏ ಏನು? .....ಏ...... ಏನಾಯ್ತು ಪೂಜಾರಪ್ಪ ಎಂದೇ ತೊದಲಿದಳು.

ಪೂಜಾರಪ್ಪ ಈಗ ಹೂಟದಲ್ಲಿ ತಬ್ಬಿಕೊಂಡು "ನಿನ್ನ ಗಂಡ ಬರಂಗೆ ಮಾಡೋದು ನನ್ ಕೆಲ್ಸ. ನೀನೇನೂ ಕ್ವರಗ್ಬ್ಯಾಡ ಸಣ್ಣಿಂಗೀ"[೩] ಅಂದ. ಹೀಗೆ ಸಮಾದಾನ ಮಾಡಿದ ಪರಿಸ್ಥಿತಿಯ ಪೂರ್ಣ ಅರಿವಿಗೆ ಬಾರದಿದ್ದ ಅವಳ ತಬ್ಬಿಬ್ಬುತನವನ್ನು ಒಪ್ಪಿ ನಾಚಿಕೊಂಡಿರೋದೆ ಅಂತ ಬಗೆದು, ಈಗ ಬಲೇ ಹುರುಪಿಂದ ಅನಾಮತ್ತು ಎತ್ಕೊಂಡು ಹೋಗಿ ಹಾದಿಯಾಚೆಗೆ

ಮಲಗಿಸಿಕೊಂಡ. ಅವಳ ಊಹೆಗೂ ಮೀರಿ ಇಷ್ಟೆಲ್ಲ ಸರಸರನೆ ನಡೆದು ಹೋಯ್ತು. ಹೀಗೆ ಪೂಜಾರಪ್ಪ ಪೂಜೆಯ ನೆಪದಲ್ಲಿ ಇವಳೊಂದಿಗೆ ಕೂಡಿಕೆಗೆ ಅತ್ಯಾಚಾರವೆಸಗಲು ಬಲಾತ್ಕಾರಿಸಲು ಮುಂದಾಗುವನು.

ಈಗ ಸಣ್ಣಿಂಗಿ ಚುರುಕಿನ ಕೆಂಡವಾದಳು. ಏನಿದೆಂದೂ ಗೊತ್ತಾಗಿತ್ತು. ಪೂಜಾರಪ್ಪ ತಡೆ. ದೊಡ್ಡಮ್ಮ, ಹರಕೆ ಇತ್ಯಾದಿಯೆಲ್ಲ ಒಂದೇ ಸಲಕ್ಕೆ ಚಕಚಕನೆ ಸುತ್ತಿ ಸೀರೆ ಎತ್ತುತ್ತಿದ್ದ ಪೂಜಾರಪ್ಪನ ಕಡೆಗೆ ಮುಷ್ಠಿಯಿಂದ ಕಾಲು ಝಾಡಿಸಿದಳು. ಈ ಒದೆತಕ್ಕೆ ಪೂಜಾರಪ್ಪ ದೂರ ಬಿದ್ದ. ಮೇಲೆದ್ದು ಸಣ್ಣಿಂಗೀ ಸಡ್ಲಾಗಿದ್ದ ಸೀರೆ ನಿಗಿಸಿಕೊಳ್ಳುತ್ತ 'ಅಯ್ಯೋ ಪಾಪರ, ನೀನ್ಯಾರು, ನೀನ್ ಮಾಡ್ತಿರೊ ಕಸುಬೇನು? ನಾಚ್ಗಾಗಕ್ಕಿಲ್ಲ ನಿಂಗೆ? ಪೂಜಾರಿ ಅಂತ ಮಾತ್ರ ಬುಟ್ಟಿವ್ನಿ ಇಲ್ದೆ ಇದ್ದಿದ್ರೆ ಇವತ್ ನಿನ್ನ...." ಎಂದು ಹಲ್ಲು ಕಡಿದು ಊರು ಕಡೆಗೆ ಹೊರಟು ಬಿಟ್ಟಳು.

ಮುಂದೆ, ಊರ ಜಾತ್ರೆಯ ಸಂದರ್ಭದಲ್ಲಿ 'ದೇವರ ಮೈಮೇಲೆ ಬಂದ ಪೂಜಾರಪ್ಪ, ಊರಿನ ಕಷ್ಟಗಳಿಗೆಲ್ಲಾ ಇವಳನ್ನೇ ಕಾರಣಳನ್ನಾಗಿಸಿದಾಗ, ಸಣ್ಣಿಂಗಿಗೆ ದೇವರು, ಪೂಜಾರಿ ವ್ರತಾಚರಣೆಗಳು ಇವೆಲ್ಲವುಗಳ ಪೊಳ್ಳುತನ ಅರಿವಾಗುತ್ತದೆ. "ಕಂಡಿದ್ದೀನಿ ಕಂತೆ ಮುಚ್ಚೋ ನಿನ್ನ ಸರಾನ.... ದೇವ್ರು ಬತ್ತಾನೆ ದೇವ್ರು ಬತ್ತಾನೆ ಅಂತ ನಂಬ್ಸಿ ನಡು ಹೊಳೇಲಿ ಕತ್ತುಕುಯ್ಯಾಕೆ ನೋಡ್ತೀರೇನ್ರೋ ಮನೆಹಾಳ ನನ್ಮಕ್ಕಳಾ...""ಎಂದು ಅಬ್ಬರಿಸುತ್ತಾಳೆ.'

ಕಿಡಿ: ತಂದೆ, ಮಗ, ಹೆಂಡ್ತಿ ಮತ್ತು ಒಬ್ಬ ತಾನೂ ಸೇರಿ ಒಟ್ಟು ೪ ಜನ ಮನೆಯಲ್ಲಿರುವ್ರು. ಇವರಿಗೆ ದಿನ ಒಂದಕ್ಕೆ ಊಟಕ್ಕೆ ಗಂಜಿನಾದ್ರೂ ಇಲ್ಲದೇ ಇರುವುದು ತುಂಬಾ ಕಷ್ಟವಾಗಿದೆ. ಹೀಗಿರುವಾಗ ಯಾರೋ ಒಬ್ಬರು ರೊಪ್ಪದಯ್ಯನ ಜಮೀನ್ದಾರರ ಮನೆಯಲ್ಲಿ ಒಬ್ಬ ಕೂಲಿಯಾಳು ಕೆಲಸ ಬಿಟ್ಟು ಹೋಗಿದ್ದನಂತೆ, ಅಲ್ಲಿ ಒಬ್ಬರಿಗೆ ಕೂಲಿ ಕೆಲಸ ಕಾಲಿ ಇದೆ ಅಂತ ತಿಳಿಸಿದ್ದೇ ತಡ. ಈ ಕೂಲಿಯಾಳು ತಂದೆ, ಹೆಂಡತಿಗೆ ಹೇಳಿ, ರಾತ್ರಿ ಎನ್ನದೆ ಕಲ್ಲು ಮುಳ್ಳಿನ ದಾರಿಯಲ್ಲಿ ನಡೆದುಕೊಂಡು, ಜಮೀನ್ದಾರರ ಮನೆಗೆ ಬಂದ. ಅಲ್ಲಿ ನಿರ್ದಾಕ್ಷಿಣ್ಯವಾಗಿ ಜಮೀನ್ದಾರ "ನಮಗ್ಯಾರು ಕೆಲಸ್ದೋರು ಬೇಕಾಗಿಲ್ಲ. ಸುಮ್ನೆ ಯಾಕೆ ಹೊತ್ತು ಗೊತ್ತಿಲ್ಲದೆ ಬಂದು ಹಿಂಗೆ ಪೀಡುತ್ತೀರಿ"[೫] ಎಂದು ಕಹಿಯಾಗಿ ಅಂದ. ಇದಕ್ಕೆ ಪ್ರತಿಯಾಗಿ ಕೂಲಿಯಾಳು– "ಹಂಗನ್ ಬೇಡಿ ಯಜಮಾನ್ರೆ; ಅಪ್ಪನ ಈಗಿನ ಸ್ಥಿತೀಲಿ ಕೆಲ್ಸ ಹುಡಿಕೊಂಡು ಇನ್ನೆಲ್ಲೂ ಹೋಗಲಾರೆವು. ನನ್ನ ಹೆಂಡ್ರು ಮಕ್ಳು ಮೂರು ದಿನದಿಂದ ಸರಿಯಾಗಿ ಹೊಟ್ಟೆಗೆ ಇಲ್ಲದೆ ಸೋತು ಹೋಗೌರೆ. ಕೆಲ್ಸ ಇಲ್ದೆ ನಾವು

ಇಲ್ಲಿ ಬದುಕೊ ಹಂಗಿಲ್ಲ. ಹೆಂಗಿದ್ರೂ ನಿಮ್ಮ ಹಟ್ಟೀಲಿ ಇದ್ದ ಆಳು ಬಿಟ್ಟು ಹೋದರಂತಲ್ಲ. ಅವರ ಬದ್ಲಿಗೆ ನಮ್ಮನ್ನೇ ಸೇರಿಸ್ಕೊಳ್ಳಿ. ನಿಮ್ಮ ನಂಬ್ಕೆಗೆ ರವಷ್ಟು ಯಾತ್ವಾಸ ಬರದಂತೆ ನಡ್ಕೊತ್ತೀವಿ. ನಮಗ್ಯಾವ ದಾರಿ ಇಲ್ಲದ್ದಕ್ಕೇ ಯಾರಾದ್ರೂ ಬಂದು ಸೇರ್ಕೊಂಡು ಬುಟ್ಟಾರು ಅಂತ ಇಷ್ಟೊತ್ನಲ್ಲಿ ಓಡಿ ಬಂದೆ" ಎಂದು ಅಂಗಲಾಚಿದ.

ಇವರ ಅಂಗಲಾಚಿಕೆಯು ಬಡವನ ಹಸಿವಿನ ಮನದಾಳದ ಮಾತುಗಳಾದ ಇವುಗಳಿಗೆ ಜಮೀನ್ದಾರನು ತಿರಸ್ಕರಿಸುತ್ತ ನಮ್ಮ ಹಟ್ಟೀಲೀ ಯಾವ ಆಳು ಹೋಗಿಲ್ಲ ಎಂದು ಗದರಿಸಿ ಕಳಿಸಿದರು. ಮತ್ತೆ ಕೂಲಿಯಾಳು ವಿನಮ್ರವಾಗಿ– "ಆಳು ಹೋಗದಿದ್ರೂ ಪರ್ವಾಗಿಲ್ಲ ನಮಗೆ ನಿಮ್ಮ ಹತ್ರದಲ್ಲೇ ಒಂಚೂರು ಸ್ಥಳ ಕೊಡಿ, ಕೆಲ್ಸ ಮಾಡ್ಕೊಂಡು ಹೆಂಗೊ ದಿನ ನೂಕ್ತೀವಿ. ಇಲ್ಲಾಂದ್ರೆ ಗತಿಯೇ ಇಲ್ಲ ಯಜಮಾನ್ರೆ..... ನೀವು ಹೇಳಿದ ಕೆಲಸ ಮಾಡ್ಕೊಂಡು ಇರ್ತೀವಿ. ಒಂದ್ಹೊತ್ತೆ ಗಂಜಿ ಸಿಕ್ರೆ ಸಾಕು. ಅದ್ಕಿಂತ ಇನ್ನೇನು ಬ್ಯಾಡ. ಅಷ್ಟು ದೂರ್ದಿಂದ ಕತ್ಲೆ ಕವಳ ಹಳ್ಳಕೊಳ್ಳ ಒಂದ್ನೂ ನೋಡ್ದೆ ಬಂದಿವಿನಿ ಸೋಮಿ ಹಂಗನ್ಬೇಡಿ" ಎಂದ್ರು, ರೊಪ್ಪದಯ್ಯ 'ಒಂದ್ಸಲ ಹೇಳಿದ್ದಲ್ಲವಾ' ಎಂದು ಗದರಿಸುತ್ತ ನಡೆದನು.

ಮತ್ತೆಲ್ಲಿ ಕೆಲಸ ಹುಟ್ಟಿಸಿ ಗಂಜಿ ಕಾಣುವುದು ಮೈ ಮನಸ್ಸು ಹಿಂಡಿ ಬಂದ ನೀರು ಕಣ್ತುಂಬಿ ತೊಟ್ಟಿಕ್ಕಿತ್ತು. ಒಳಗಿಂದ ಆವೇಶ ಬಂದಂತಾಯ್ತು. ಬಾಗಿದವನು ಒಂದು ಕಲ್ಲು ತಗೊಂಡು 'ರೊಪ್ಪದಪ್ಪ ಇಲ್ಲಾ ಅನ್ಬೇಡ ಕನೋ ನಮ್ಮನ್ನು ಹಿಂಗೆ ಅಗ್ಗ ಅಳಿಬ್ಯಾಡಿ ಕನೋ' ಎಂದು ಕವಣೆಯಷ್ಟು ಬಿರುಸಾಗಿ ಬೀರಿದ. ಅದು ನೇರವಾಗಿ ಹೋಗಿ ಮುಂಬಾಗಿಲ ಬಲ್ಬಿಗೆ ಬಡಿಯಿತು. ಬಲ್ಬು ಫಳಿರನೆ ಸಿಡಿದು ಚೂರು ಚೂರಾಗಿ ಜಗಲಿ ಮೇಲೆ ಕೂತಿದ್ದವರ ತಲೆ ಮೇಲೆಲ್ಲಾ ಉದುರಿತು. ರೊಪ್ಪದಪ್ಪನವರು ಗಟ್ಟಿಯಾಗಿ ಚೀರಿ, ಇವನನ್ನು ಹಿಡಿಯಲು ನಾಯಿಗಳಂತೆ ಬೆನ್ನತ್ತಿದ ಆಳುಗಳಿಗೆ ಸಿಗದೇ ಇವರ ಕಡೆ ಬೆನ್ನುಮಾಡಿ ಓಡ ತೊಡಗಿದ.

ಇಲ್ಲಿ ಕಥೆಗಾರರು ಬಡವರ ಹಸಿವು, ಕಷ್ಟಗಳಿಗೆ ಜಮೀನ್ದಾರರಿಗೆ ಅನುಕಂಪ, ಕರುಣೆಗಳೆಂಬುವು ಇರುವುದಿಲ್ಲ ಎಂಬುದನ್ನು ಈ ಕಥೆಯ ಮೂಲಕ ಹೇಳ ಹೊರಟಿದ್ದಾರೆ.

ಬೆಳ್ಳಕ್ಕಿ ಸಾಲು: ಬಾಲ್ಯದಲ್ಲಿ ತಾನು ಮಾಲಿಂಗ ಮತ್ತು ಮಾದೇವಿಯರು ಬೆಳ್ಳಕ್ಕಿಗಳನ್ನು ನೋಡಿ ಸಂತೋಷಪಡುವುದು, ಅವುಗಳನ್ನು ಹಿಡಿಯಲು ಹೋಗಿ, ಕೇಸರಲ್ಲೆ ಬಿದ್ದು, ಮೈಯಲ್ಲಾ ಮೆತ್ತಿಸಿಕೊಂಡ್ರು, ಅವುಗಳ ಸಮೀಪ ಹೋದಾಗ ಅವು ಮುಂದಕ್ಕೆ ನಡೆಯುತ್ತಿದ್ದವು. ಅಥವಾ

ಹಾರಿ ಹೋಗುತ್ತಿದ್ದವು. ಇದರ ಆಟದಲ್ಲೇ ಇಬ್ಬರು ಹೆಚ್ಚು ಕಾಲ ಕಳೆಯುತ್ತಿದ್ದರು. ಈ ಕೆರೆಗೆ ಬೆಳ್ಳಕ್ಕಿಗಳು ಬಂದು ಹೋಗುವುದರಿಂದ ಈ ಕೆರೆಗೆ ಬೆಳ್ಳಕ್ಕಿ ಕೆರೆ ಎಂದು ಹೆಸರಾಗಿತ್ತು.

ಬೆಳೆದು ದೊಡ್ಡವನಾದ ಮಾಲಿಂಗ ಕೆಲಸವಿಲ್ಲದೇ ಅಲೆಯುವಾಗ ನಿಂಗಾಚಾರಿ ಹೇಳಿದ– " ಹುಟ್ಟಿಸಿದವ ಹುಲ್ ಮೈಸಾನಾ?" ಎಂದು ಹೇಳಿದ್ರು ಮಾಲಿಂಗು ಕೇಳದಿದ್ದರಿಂದ "ಬದ್ಕೋ ದಾರಿ ಹೇಳ್ಕೊಟ್ರೆ ಬ್ಯಾಡ ಅಂತಿ. ಹೆಂಗಾದ್ರು ಹಾಳಾಗೋಗು" ಎಂದು ನಿಂಗಾಚಾರಿ ಹೋಗಿದ್ದನು. ಒಂಟಿಯಾದ ಮಾಲಿಂಗನು ದಾರಿಯಲ್ಲಿ ಮಾಡಿದ ಅನೇಕ ಚೇಷ್ಟೆಗಳನ್ನು ಹಿಂದೆ ಬರುವ ಹೆಂಗಸರ ಗುಂಪು ನೋಡುತ್ತಾ ನಕ್ಕರು. ಇವರನ್ನು ನೋಡಿ ಮಾಲಿಂಗನು ನಾಚಿಕೆಯಿಂದ ಬಚ್ಚಿಟ್ಟುಕೊಂಡನು. ಆಗ ಪೂಜಾರಪ್ಪ ಬಂದು ವಿಚಾರಿಸಿ, ಒಂದು ಕೆಲ್ಸ ಕೊಟ್ಟ. ಹಬ್ಬಕ್ಕೆ ಕಟ್ಟಿಗೆಗಳನ್ನು ಸೀಳು ಎಂದು ಹೇಳಿ, ಹೊಟ್ಟೆಗೆ ಏನಾದ್ರೂ ಕಳಿಸ್ತೀನಿ ಎಂದು ಹೋಗಿದ್ದ. ಇತ್ತ ಯಾರ, ಏನೂ ತರಲಿಲ್ಲ. ಹಸಿವು ತಾಳಲಾರದೆ ಮಾಲಿಂಗ ಅಲ್ಲೇ ಇದ್ದ ಹಲಸಿದ ಹಣ್ಣು ತಿಂದು, ಕಟ್ಟಿಗೆಗಳನ್ನು ಸೀಳಿದನು. ಪೂಜಾರಪ್ಪ ಬಂದು ಸೌದೆ ಹೊತ್ಕೊಂಡು ಇಬ್ಬರು ಮನೆಕಡೆಗೆ ಹೋರಟರು.

ಜನ ಊರ ಮುಂದೆ 'ಬಟ್ಟಲು ಸೇವೆ' ಸುತ್ತ ನೆರೆದಿದ್ದರು. ಅಲ್ಲಿಗೆ ಮಾಲಿಂಗು ಪೂಜಾರಪ್ಪ, ಮುದಿಮಲ್ಲಪ್ಪ, ಊರಿನ ಜನರು ತುಂಬಿ ಹೋಗಿದ್ದರು. ಮಾಲಿಂಗನನ್ನು ಅಲ್ಲಿಂದ ಹೊರ ಹಾಕಲು ಮುದಿಮಲ್ಲಿಪ್ಪ ಪಟ್ಟ ಶ್ರಮ ನಿರರ್ಥಕವಾಯಿತು. ಮಾಲಿಂಗ ತಾನೂ ತಮಟೆ ಬಡಿಯಲು ಆರಂಭಿಸಿದನು.

ಮಾಲಿಂಗನ ತಮಟೆಯ ಬಡಿತಕ್ಕೆ ತೂಕಡಿಸುತ್ತಿದ್ದವರ ಕಣ್ಣುಗಳು ಚುರುಕಿನ ಕೆಂಡವಾದವು. ಕೊನೆಗೆ ಪೂಜಾರಪ್ಪ ತಮಟೆ ತಗೊಂಡು ದೇವಿಗೆ ಮಂಗಳಾರತಿ ಮಾಡಿದರು.

ಮಾಲಿಂಗ ಇಡೀ ರಾತ್ರಿಯೆಲ್ಲಾ ಆ ಗುಡಿ ಮುಂದೆಯೇ ಮಲಗಿದ್ದನು. ಬೆಳಿಗ್ಗೆ ಸಾಕವ್ವ ಪರಿಚಯವಾದಳು. ಇವರಿಂದ ಈರಮ್ಮ ಮಗಳೂ ಗಂಗೀ/ಸಂಜೀವಿನಿ ಪರಿಚಯವಾದರು. ಈಗ ಮಾಲಿಂಗನ ಜೀವನ ಉತ್ಸಾಹ ಚಿಮ್ಮಿತು.

ಹೀಗೆ ತಂದೆ–ತಾಯಿಗಳು ಯಾರೆಂದು ಗೊತ್ತಿಲ್ಲದ ಪರದೇಶಿ ಮಾಲಿಂಗೂ ಮಾದೇವಿ ಯೊಡನೆಯೇ ಬೆಳೆದರೂ ತಾನು ದಿಕ್ಕುದೆಸೆಯಿಲ್ಲದವನು ಎಂಬ ಕಾರಣದಿಂದ ಅವಳನ್ನು ಮದುವೆಯಾಗಲಾರದೆ ದೇಶಾಂತರ ಬಂದು, ಎಲ್ಲೋ ಒಂದು ಅಪರಿಚಿತ ಊರಿನಲ್ಲಿ, ತಮಟೆ

ಬಡಿಯುತ್ತಾ ಕುಣಿಯುವ ತನ್ನ ಕಲೆಯನ್ನು ನೋಡಿ ಮೆಚ್ಚುವ ಮೂಕಿ ಗಂಗಿಯನ್ನು ಮದುವೆಯಾಗುತ್ತಾನೆ. ಈ ಮದುವೆಯ ಪೂರ್ವದಲ್ಲಿ ಮಾಲಿಂಗನು ಅನುಭವಿಸಿದ ಕಷ್ಟಗಳು, ಹಸಿವಿಗಾಗಿ ಕೆಲಸವನ್ನು ಹುಡುಕಿದ್ದು... ಇನ್ನೂ ಮುಂತಾದವುಗಳನ್ನು ದಾಟಿ ಈಗ ಸಂಸಾರವೆಂಬ ಬದುಕಿನ ಮಟ್ಟಕ್ಕೆ ಬಂದಿದ್ದಾನೆ.

ಕರಗವ್ವ: ಗಂಡನನ್ನು ಬಿಟ್ಟು ತಾನು ಮೆಚ್ಚಿದ ಕಲೆಗಾರನ ಹಿಂದೆ ಓಡಿ ಬಂದು, ಅನಂತರದ ದಿನಗಳಲ್ಲಿ ಅವನನ್ನೂ ಕಳೆದುಕೊಂಡು, ಮಕ್ಕಳೂ ಇಲ್ಲದೆ, ಏಕಾಕಿಯಾಗಿ ಉಳಿದ ಬಡ ಕರಗವ್ವ ತನ್ನ ಅಪಾರ ಪ್ರೀತಿಯನ್ನು ಇಡೀ ಊರಿನ ಮಕ್ಕಳಿಗೆ ಹಂಚುತ್ತಾ, ತನ್ನ ಬದುಕನ್ನು ನೀಗುತ್ತಾಳೆ.

ಈ ಕಥೆಗಳಲ್ಲಿ ಕರಗವ್ವಳು ಗಂಡನನ್ನೂ ಬಿಟ್ಟು, ಪ್ರೀತಿಸಿದವನ ಹಿಂದೆ ಓಡಿ ಬಂದದ್ದು, ಆಗ ಅವನ ಕೂಡ ಜೀವನ ಸಾಗಿಸಿದ್ದು, ಆಕಸ್ಮಿಕವಾಗಿ ಪ್ರೀಯತಮನನ್ನು ಮತ್ತು ಮಕ್ಕಳನ್ನು ಕಳೆದುಕೊಂಡಳು, ಕರಗವ್ವಳಿಗೆ ಇನ್ನೂ ತನ್ನವರು ಎಂದು ಹೇಳಿಕೊಳ್ಳಲು ಯಾರು ಇಲ್ಲ. ಇಂತಹವರ ಜೀವನ ಹೇಗೆ ಕಠಿಣವಾದದ್ದು ಎಂದು ಕಥೆಗಾರರು ಇಲ್ಲಿ ಗ್ರಾಮೀಣ ಸೊಗಡಿನ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

ಕವಳ: ಸಂಕ್ರಮಣ ಕಾಲದಲ್ಲಿ ಹೊಸತಿನ ಬಗ್ಗೆ ಇರುವ ಭೀತಿ, ತಲ್ಲಣಗಳನ್ನು ಆಸೆ-ಆಪೇಕ್ಷೆಗಳನ್ನು ಈ ಕಥೆಯು ಹೃದಯಸ್ಪರ್ಶಿಯಾಗಿ ಚಿತ್ರಿಸುತ್ತದೆ. ತನ್ನ ಹೆಂಡತಿಯ ಹಾಗೂ ಮಗನ ಹಠದಿಂದ ಮಗನನ್ನು ಸ್ಕೂಲಿಗೆ ಸೇರಿಸುವನು ನರಸಪ್ಪ ಎಂಬ ದಲಿತ. ಆಗ ಊರವರು ನಿನ್ನ ಹೆಂಡತ್ತಿ ಮತ್ತು ಸ್ಕೂಲಿನ ಮೇಸ್ಟ್ರುಗೆ ಸಂಬಂಧ ಇದೆ, ಅವಳಿಗೇನೇ ಆ ಮಗು ಹುಟ್ಟಿರೋದು.... ಎಂದೆಲ್ಲಾ ನರಸಪ್ಪನಿಗೆ ನಂಬಿಕೆ ಬರುವಂತೆ ಹೇಳುತ್ತಾರೆ. ಇವರ ಮಾತುಗಳನ್ನು ಕೇಳಿ ಕೆಂಪು ಕೆಂಡವಾದ ನರಸಪ್ಪ ಮನೆಗೆ ಬಂದು ಹೆಂಡತಿಯನ್ನು ಹೊಡೆಯುತ್ತಾನೆ. ಸ್ಕೂಲಿನಿಂದ ಮಗನನ್ನು ಮನೆಗೆ ಎಳೆತರಲು ಹೋಗುತ್ತಾನೆ. ಅಲ್ಲಿ ಮಗನನ್ನು ಕೈ ಹಿಡಿದು ಮೇಲೆತ್ತುತ್ತಾನೆ. ಆದರೆ ಅಲ್ಲಿಯೇ ತನ್ನ ಸುತ್ತ ಮಗನೊಡನೆ ಇತರ ಗ್ರಾಮದ "ಘನಂದಾರಿ ಜನರ ಎಲ್ಲಾರ ಮಕ್ಕಳೂ ಇಲ್ಲೇ ಇವೆಯಲ್ಲ"[೭] ಎಂದು ಅರಿತು, "ನೀನು ಬರ್ರೊ ಮಗಾ"[೮] ಎಂದು ಹೇಳಿ ಮನೆಕಡೆಗೆ ವಾಪಾಸು ಬರುತ್ತಾನೆ.

ಇಲ್ಲಿ ನರಸಪ್ಪನು ದಲಿತ ಜನಾಂಗಕ್ಕೆ ಸೇರಿದವನಾಗಿದ್ದಾನೆ. ಇವನ ಮಕ್ಕಳು ಗ್ರಾಮದ ಜನರ ಮಕ್ಕಳ ಜೊತೆ ಸೇರಿ ವಿದ್ಯೆ ಕಲಿಯಲು, ದಲಿತರಿಗೆ ಕಷ್ಟವಾಗುವುದನ್ನು, ಊರಿನವರು

ಹೇಗೆ ದಲಿತರನ್ನು ಶೋಷಣೆ ಒಳಪಡಿಸುತ್ತಿದ್ದರು ಎಂಬುವುಗಳನ್ನು ಕುರಿತು ಇಲ್ಲಿ ಕಥೆಗಾರರು ವಿವರಿಸಿದ್ದಾರೆ.

ಜಪದಕಟ್ಟೆ: ಶಂಕರಯ್ಯ ದಯಾದಿಗಳ ಕುತಂತ್ರದಿಂದ ತನ್ನ ಆಸ್ತಿಯೆಲ್ಲವನ್ನೂ ಕಳೆದುಕೊಂಡನು. ತಾನು ಬಾಲ್ಯದಲ್ಲಿನ ಅಸಭ್ಯ ವರ್ತನೆಯಿಂದಾಗಿ ಸೀತಾಲಕ್ಷ್ಮೀ ಆತ್ಮಹತ್ಯೆ ಮಾಡಿಕೊಂಡಿದ್ದಳು. ಊರು ಬಿಟ್ಟು ಹೋಗಿದ್ದ ಶಂಕರಯ್ಯ ೩೦ ವರ್ಷಗಳ ಅಲೆಮಾರಿ ಜೀವನ ನಡೆಸಿ, ಕೊನೆಗೆ ತನ್ನೂರಿಗೆ ಮರಳಿ ಬಂದನು. ಇಲ್ಲಿ ಊರಿನವರನ್ನು ಎದುರುಹಾಕಿಕೊಂಡು ರುಕ್ಮಿಣಿಯೆಂಬ ಅನ್ಯ ಜಾತಿಯವಳನ್ನು ಮದುವೆಯಾದುದಕ್ಕಾಗಿ ಊರಿನವರ ಬಹಿಷ್ಕಾರಕ್ಕೆ ಗುರಿಯಾಗಿದನು. ಇವರಿಗೆ ಜನಿಸಿದ ಮಗಳು ಕೂಡ ಅನ್ಯ ಜಾತಿಯವನನ್ನು ವಿವಾಹವಾಗಿ, ಪ್ರಸಾವಕಾಲದಲ್ಲಿ ಹೆಣ್ಣು ಮಗುವ ಹೆತ್ತು ಶಂಕರಯ್ಯನಿಗೆ ಕೊಟ್ಟು ನಿಧನಳಾದಳು. ಆಗ ಶಂಕರಯ್ಯ ತಾನು ಪ್ರೀತಿಸುವ ಕಾವೇರಿ ನದಿಯ ದಂಡೆಯಲ್ಲಿ ನಿಂತು "ಯಾವುದು ಸತ್ಯ ನೀರೋ, ನೆರಳೋ?"[೯] ಎಂದು ಚಿಂತಿಸುತ್ತಾನೆ.

ಹಳ್ಳಿಯಲ್ಲಿ ಅಂತರ್ ಜಾತಿ ವಿವಾಹಗಳು ಆಗುವುದರಿಂದ ಆಗುವ ಜಾತಿ ಕಲಹಗಳು, ಧಾರ್ಮಿಕ ಕಲಹಗಳನ್ನು ಕುರಿತು ಸೂಕ್ಷ್ಮವಾಗಿ ಈ ಕಥೆಯು ಪರಿಚಯ ಮಾಡಿಕೊಡುತ್ತದೆ. ಹೀಗೆ ಒಟ್ಟಾರೆಯಾಗಿ "ಅಗಾಂತರ" ಕಥಾ ಸಂಕಲನದ ಕಥೆಗಳು ಸಂಘರ್ಷಮಯ ಬದುಕನ್ನು ಹಾಗೂ ಆ ಬದುಕು ಕಟ್ಟಿಕೊಡುವ ಗಾಢ ಅನುಭವವನ್ನು ದಾಖಲಿಸುತ್ತದೆ.

ಒಂದೂರು ಬಂದ್ಕತೆ: ಇಲ್ಲಿ ಲೇಖಕರು ಗ್ರಾಮೀಣ ಭಾಗದಲ್ಲಿನ ವಯಸ್ಸಾದ ಮುದುಕರು, ಇವರ ಜವಾಬ್ದಾರಿಗಳನ್ನು ಕುರಿತು ಹೇಳುತ್ತಾ ಅವರು ಅನುಭವಿಸುವ ಕಷ್ಟಗಳನ್ನು ಹೇಳುತ್ತಾರೆ. ಪಕ್ಕದ ಊರಿನಿಂದ ಕಳೆದು ಹೋದ ಎಮ್ಮೆಯನ್ನು ಹುಡುಕಿಕೊಂಡು ಬಂದು, ಅಪರಿಚಿತವಾದ ಈ ಮುದುಕನ ಮನೆಯಲ್ಲಿ ಅವರ ಸಮ್ಮತಿಯಿಂದ ವಾಸ್ತವ್ಯವನ್ನು ಅಂದು ರಾತ್ರಿ ಕಳೆಯುವ ವ್ಯಕ್ತಿ, ಇಲ್ಲಿ ಮುದುಕ ಮತ್ತು ಆ ವ್ಯಕ್ತಿಯ ಮಧ್ಯೆ ನಡೆಯುವ ಸಂಭಾಷಣೆಯಲ್ಲಿ ಮುದುಕನು ತನ್ನ ನೋವು, ತನಗೆ ಇರುವ ಮೊಮ್ಮಗಳ ಮದುವೆಯ ಚಿಂತೆ, ತಮ್ಮೂರಿನ ಪೋಲಿ ಹುಡುಗರು ಇವಳಿಗೆ ನೀಡಿದ ಕಿರುಕುಳ ಮುಂತಾದವನ್ನು ಒಂದೂ ಬಿಡದೆ ಹೇಳುತ್ತಾನೆ. ಹಾಗೇ ಇವಳಿಗೆ ಒಂದು ಚೆನ್ನಾಗಿರೋ ಗಂಡು ಇದ್ದರೆ ತಿಳಿಸಿ ಎಂದು ವಿನಯದಿಂದ ಕೇಳಿಕೊಳ್ಳುವ ರೀತಿ ತುಂಬಾ ಹೃದಯಂಗಮವಾಗಿದೆ.

ಯಂಕಟ: ಮಲ್ಲಪ್ಪನ ಮನೆಯಲ್ಲಿ ಜೀತಗಿದ್ದ ಯಂಕಟನಿಗೆ ತನ್ನ ಅಣ್ಣ ಮಾದನು ಈ ರೀತಿ ಹೇಳುತ್ತಾನೆ. ಮಾದ ಮನೆ ಪುರಾಣದ ಪೊಟ್ಟಣ ಬಿಚ್ಚಿದ. ತಮ್ಮ ಕಷ್ಟ ಸುಖ ಹೇಳಿಕೊಂಡು, ಅತ್ತಿಗೆಯ ಸಂದೇಶನೂ ಮುಟ್ಟಿಸಿದ. ಮಲ್ಲಪ್ಪನ ಕಿರಿಕುಳ ಖಂಡಿಸಿದ. ನೀನು ದುಡೀತಿರೊ ಶ್ರಮಕ್ಕೆ ಅವನು ಕೊಡೊ ಸಂಬಳ ಏನೂ ಸಾಲ್ದು ಅಂತ ಹೇಳಿ– "ಚಿಟ್ಟಳ್ಳೀಲಿ ಒಬ್ಬ ಗೌಡ್ರ ಮನೆಗೆ ಒಂದಾಳು ಬೇಕಾಗಿದೆಯಂತೆ. ತಿಂಗಳಿಗೆ ನೂರು ರೂಪಾಯಿ ಕೊಟ್ಟು, ದಿನಕ್ಕೆ ಮೂರುಟ, ವರ್ಷಕ್ಕೆರಡು ಜೊತೆ ಬಟ್ಟೆ ಕೊಡ್ತಾರಂತೆ. ಅಲ್ಲಿಗೆ ನೀನೂ ಬಂದು ಬಿಡು. ನಮ್ಮೂರಿಗೂ ಹತ್ರ ಆಗ್ತದೆ. ಆಗಾಗ ನಾವೂ ಬಂದು ನಿನ್ನ ನೋಡ್ಕೊಂಡು ಬರಬಹುದು. ನೀನೂ ಹಬ್ಬ ಹರಿದಿನಗಳಲ್ಲಿ ಮನೆಗೆ ಬಂದು ಹೋಗಬೌದು. ಎಲ್ಕೂ ಅಲ್ಲಿ ಅನ್ಕೂಲವಾಗದೆ, ನನ್ನ ಜೊತೆ ಬಂದು ಬಿಡು" ಎಂದು ಮಾದನು ಹೇಳಿದನು. ಇದಕ್ಕೆ ಯಂಕಟ ನಿರುತ್ತರವಾಗಿ ಮುಂದೆ ಮುಂದೆ ನಡೆದನು. ಆಗ ಮಾದ "ನಾನು ಆ ಕಡೆಯಿಂದ ಬರೋಹೊತ್ತೊ ನೀನ್ಯಾವುದ್ನೂ ಹೇಳಬೇಕು"[೧೦] ಎಂದು ಹೇಳಿ ಹೋದನು."[೧೦]

ಹೊನ್ನಪ್ಪನು ಯಂಕಟನಿಗೆ ಹೇಳಿದ ನಿನ್ನ ಅಣ್ಣ–ಅತ್ತಿಗೆ ನೀನೂ ದುಡಿದ ಹಣವನ್ನೇ ಇಸ್ಕೊಂಡು ಹೋಗಿ ಮಜಾ ಮಾಡ್ತಾರೆ. ಅವರು ತುಂಬಾ ಮೈಗಳ್ಳರು. ನೀನು ಬದುಕೊದಿಕ್ಕೆ ನಿನ್ನ ಸಂಬಳವನ್ನು ಮಲ್ಲಪ್ಪನ ಹತ್ತಿರ ಬುಡು. ಮುಂದೆ ಏನಾದ್ರೂ ಒಂದು ವ್ಯವಸ್ಥೆ ಮಾಡಿಕೊವಂತೆ" ಎಂದು ಹೇಳಿದನು.

ಮಾರನೆ ದಿನ ಯಂಕಟನ ಅಣ್ಣ ಮಾದನು ಬಂದನು. ಹೊಲದಲ್ಲಿ ಮಾದ ಮತ್ತು ಯಂಕಟನಿಗೆ ತುಸು ಸಮಯ ಸಂವಾದ ನಡೆಯಿತು. ತನ್ನ ತನ, ತಂತ್ರ ಎಲ್ಲವೂ ಪತನವಾಗುವುದ ಕಂಡು ಮಾದ ಸಹಿಸದಾದ. ಯಂಕಟನನ್ನು ಎತ್ತಿ ಹೊಲದಲ್ಲಿ ಕುಕ್ಕರಿಸಿದ. ಆದರೆ ಯಂಕಟ "ನೀನೇನೆನೂ ಮಾಡಿದ್ರೂ ನಾನ್ ಬರೋದಿಲ್ಲ ಹೋಗು"[೧೧] ಎಂದು ಹೇಳುವುದನ್ನು ನೋಡಿದರೆ ಲೇಖಕರು ಯಂಕಟನಿಗೆ ಮಾದನಿಂದ ಆದ ತೊಂದರೆ ನೋವುಗಳು ಆತನ ಹಿಂದೆ ಭಾದಿಸುತ್ತಿರುವಂತೆ ಕಾಣುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಕೊನೆಗೆ ಯಂಕಟ "ನಾನು ಸತ್ರೂ ಬರೋದಿಲ್ಲ. ಇನ್ನು ನನ್ನ ಹೆಂಗೆ ಕರ್‍ಕೊಂಡು ಹೋಗ್ತಿಯಾ ಹೋಗು"[೧೨] ಎಂದು ಮಾದನ ಕಣ್ಣಿಗೆ ಮಣ್ಣು ಎರಚಿ ಕಿರುಚುತ್ತ ಓಡಿಹೋಗುವನು.

ಇಲ್ಲಿ ಲೇಖಕರು ಮಾದನು ಯಂಕಟನನ್ನು ಕರೆದೊಯ್ಯಲು ದೈಹಿಕವಾಗಿ ಅವನನ್ನು ಒಂಪಿಸುವುದನ್ನು, ಯಂಕಟನ ದೌರ್ಬಲ್ಯವನ್ನು, ಮಾದನ ಮೋಸ, ಕುತಂತ್ರಗಳನ್ನು ಗ್ರಾಮೀಣ ಸಮಾಜದಲ್ಲಿನ ದಯಾದಿಗಳ ದ್ವೇಷವನ್ನು ಕುರಿತು ಇಲ್ಲಿ ಪ್ರಸ್ತುತಪಡಿಸಿದ್ದಾರೆ.

ದಿಗಂಬರನೂ ಶ್ವೇತಾಂಬರಿಯೂ: ಮನುಷ್ಯನ ಹಾಗೂ ಪ್ರಾಣಿಗಳ ಪ್ರೀತಿಯ ಸಂಬಂಧದ ತೀಕ್ಷ್ಣತೆಯನ್ನೂ, ಸ್ವಾತಂತ್ರ್ಯದ ಹಂಬಲವನ್ನು ಅರ್ಥಪೂರ್ಣವಾಗಿ ಧ್ವನಿಸುವ ಇನ್ನೊಂದು ಕಥೆ "ದಿಗಂಬರನೂ ಶ್ವೇತಾಂಬರಿಯೂ"ದಲ್ಲಿ ಮುಖ್ಯ ಪಾತ್ರವಾದ ಕಥೆಗಾರ ದಾಸ ಹೇಳುವ ಕಥೆಗಳಿಗಿಂತಲೂ, ಹೇಳದೆ ಉಳಿದಿರುವ ಅನುಭವಗಳೇ ಹೆಚ್ಚು ಎಂದು ತೋರುವ ಸನ್ನಿವೇಶದಲ್ಲೂ, ಆತನ ಒಂಟಿತನದ ಪ್ರಜ್ಞೆ, ಆತ ಹಟ್ಟಿಯನ್ನು ಅದರಲ್ಲಿದ್ದ ದೊಡ್ಡೆ ಎಂಬ ಹಸುವನ್ನು ಪ್ರೀತಿಸಿದ ರೀತಿ, ಎಲ್ಲಿ ಸಂಬಂಧಗಳಿಗೆ ನಾವು ಅರ್ಥ ಹಚ್ಚುವುದು ಹೇಗೆ ಎಂಬ ಪ್ರಶ್ನೆಯನ್ನು ಓದುಗರ ಮುಂದಿರಿಸುತ್ತದೆ. ಗ್ರಾಮ ಜೀವನದ ಕಥೆಗಳನ್ನು ಬರೆದಿರುವ ಲೇಖಕರಲ್ಲಿ ಮನುಷ್ಯ ಹಾಗೂ ಪ್ರಾಣಿಗಳ ಸಂಬಂಧವನ್ನು ಇಷ್ಟು ಸೂಕ್ಷ್ಮವಾಗಿ, ಆಳವಾಗಿ ಕೆಣಕಿದವರು ಬೇರೆ ಯಾರೂ ಇಲ್ಲವೆಂಬಂತೆ ಲೇಖಕರು ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ.

ದುಡಿಮೆಗೆ ಮಾತ್ರ ತನ್ನನ್ನು ಬಳಸಿಕೊಂಡು, ಬೇರೆಲ್ಲದಕ್ಕೂ ಮರೆಯುತ್ತಿದ್ದ ಆಳು ನಿಂಗೀರನಲ್ಲಿ ಬೆಳೆದು ಬಂದ ಪರಕೀಯ ಪ್ರಜ್ಞೆಯ ಕಥೆ 'ಅನ್ಯ', ಬಡತನದ ಧಾರುಣ ಸ್ಥಿತಿಯನ್ನು ಬಣ್ಣಿಸುವ, ಕೆಲಸ ಕಳೆದುಕೊಂಡು ಲಂಚ ಪ್ರಪಂಚದಲ್ಲಿ ಬದುಕಿಗಾಗಿ ಸೆಣಸುವ ಡ್ರೈವರನ ಕರುಣಾಜನಕ ಕಥೆ "ನಿಶ್ಯಬ್ಧವಾದವನು ಹಳ್ಳಿಯ ಪರಿಸರದಲ್ಲಿ ನಿಯಂತ್ರಿಸಲು ಸಾಧ್ಯವಾಗದ ಕಾಮಕ್ಕೆ ಒದಗಿಸಿರುವ ಸನ್ನಿವೇಶಗಳನ್ನು ಸಮರ್ಥವಾಗಿ ಚಿತ್ರಿಸುವ ಕಥೆ 'ಪರೆ ಬಿಟ್ಟನು ಹುಡುಗ', ಇವೆಲ್ಲ ಸೂಕ್ಷ್ಮ ನಿರೀಕ್ಷಣೆಯ ಮನದಾಳದ ಚಿತ್ರಗಳು. ನಿಷ್ಠುರ ಬಡತನದಲ್ಲೂ ಅಕ್ಷರ ಕಲಿಯುವ ಆಸೆಯಿಂದ ಸ್ಲೇಟು ಪುಸ್ತಕ ಕದ್ದು ಪಡುವ ಬವಣೆಯ ಹೃದಯ ತಟ್ಟುವ ಕಥೆ 'ದಾವರ' ಇಂಥ ಕಥೆಗಳು ಹಳ್ಳಿಗಾಡಿನ ಜನರ ಬಡತನದ ನಿಷ್ಠುರ ಸತ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿವೆ ಎಂದು ವ್ಯಾಸರಾಯ ಬಲ್ಲಾಳರು ಕಂಡೇರಿ ಕೃತಿಯ ಬೆನ್ನುಡಿಯನ್ನು ಕುರಿತು ಬರೆದ 'ಬೆಳ್ಳಕ್ಕಿ ಚೆಲುವಿನ ಲಯವನ್ನರೆಸಿ"......ಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

"ನಿಜವಾಗಿ ಅವರ ಕಥೆಗಳ ವಸ್ತು ಶೋಷಣೆ; ಗ್ರಾಮ ಜೀವನದಲ್ಲಿ ಹಾಸು ಹೊಕ್ಕಾಗಿರುವ ಶೋಷಣೆ. ಈ ಶೋಷಣೆಯ ವಸ್ತುವನ್ನು ಅವರು ಸರಳಗೊಳಿಸುವುದಿಲ್ಲ ಎನ್ನುವುದು ಈ ಸಂಗ್ರಹದಲ್ಲಿ ನನಗೆ ಮಹತ್ವದ ಸಂಗತಿಯಾಗಿ ಕಾಣುತ್ತದೆ. ನೈಜವಾದ ಸಹಾನುಭೂತಿ ಇದ್ದರೂ ಹೊರಗಿನಿಂದ ಗ್ರಾಮ ಜೀವನದ ಶೋಷಣೆ ಕಾಣುವ ರೀತಿಯೇ ಬೇರೆ, ಆ ಜೀವನದ ಭಾಗವಾಗಿ ಅಲ್ಲಿನ ಜನರೊಂದಿಗೆ ಬೆರೆತು ಅದರಿಂದ ಸಾಕಷ್ಟು ದೂರ ನಿಂತು ನೋಡುವ ಶಕ್ತಿ ಬೆಳೆಸಿಕೊಂಡಾಗ ಅದು ಕಾಣುವ ರೀತಿಯೇ ಬೇರೆ...."[೧೩]

'ತಾವು' ಕಥೆಯಲ್ಲಿ ಮುದುಕ ಮುದುಕಿಯರ ಜೀವನ ಶೂನ್ಯವಾಗಿ ಬಿಟ್ಟಿದೆ. ಕಥೆ ಅವರಿಬ್ಬರಿಂದ ಅವರಿಬ್ಬರಂತೆ ಬಾಳನ್ನು ಬರಿದು ಮಾಡಿಕೊಂಡವರತ್ತ ಹೊರಳುತ್ತದೆ. ಎಲ್ಲ ಪ್ರವಾಹದಲ್ಲಿ ಕೊಚ್ಚಿಹೋಗುವುದನ್ನು ಚಿತ್ರಿಸುವಾಗ ಒಂದು ಅನಿರೀಕ್ಷಿತ ತಿರುವು ಬರುತ್ತದೆ. 'ನುಗ್ಗತ್ತ ನುಗ್ಗುತ್ತ ಮನೆಯೊಡೆಯ, ಒಡತಿ ಸಿಕ್ಕದವರ ತೋಳು, ತೊಡೆ, ರಟ್ಟೆ, ಸೊಂಟ, ಮುಖ, ಮೂಗು ಸಿಕ್ಕಿದ್ದನ್ನೇ ಬಿಗಿಯಾಗಿ ಹಿಡಿದು, ಕಾಲೂರಿ ಬದುಕಲೂ ಪಯಣ ತೊಡಗಬಹುದು....

'ಮನಸು ಮುಗಿಲು' ಸಂಕಲನದಲ್ಲಿ ಒಂದಾದ 'ಮುಂಗಾರು ಮಳೆಯ ಸಂಜೆ'ಯನ್ನಂತೂ ನವ್ಯೋತ್ತರ ಶ್ರೇಷ್ಠ ಕಥೆಗಳಲ್ಲಿ ಒಂದೆಂದು ಪರಿಗಣಿಸಬಹುದು. ಈ ಕಥೆಯಲ್ಲಿ ಆರೋಗ್ಯ ಇಲಾಖೆಯ ಕಿರು ಅಧಿಕಾರಿಯೊಬ್ಬ ಹಳ್ಳಿಯೊಂದರಲ್ಲಿ ಮನೆ ಬಿಟ್ಟು ಹೋದ ಮಗ ಕೊರಗಿನಲ್ಲಿ ಸಾಯಲು ಮಲಗಿರುವ ಮುದುಕಿಯೊಬ್ಬಳನ್ನು ಭೇಟಿ ಮಾಡುತ್ತಾನೆ. ತನಗೆ ಅವಳ ಮಗ ಗೊತ್ತೆಂದೂ, ಬೇಗ ಅವನು ಹಿಂತಿರುಗುವಂತೆ ತಾನು ಪ್ರಯತ್ನಿಸುತ್ತೇನೆಂದೂ ಅವನು ಅಜ್ಜಿಗೆ ಸುಳ್ಳು ಹೇಳುತ್ತಾನೆ; ಮತ್ತೆ ಮಗನಂತೆ ಅವಳನ್ನು ಪ್ರೀತಿಸುತ್ತಾನೆ. ಆದರೆ ಆ ಸುಳ್ಳಿನ ಕಾರಣದಿಂದಲೇ (ಮತ್ತು ಅವನ ಪ್ರೀತಿಯಿಂದ) ಮತ್ತೆ ಬದುಕಿಗೆ ಅಂಟಿಕೊಳ್ಳುತ್ತಾಳೆ ಆ ಅಜ್ಜಿ. ಕಥೆ ಹೀಗೆ ಮುಗಿಯುತ್ತದೆ. "ತಲೆ ಮಾರುಗಳ ಇತಿಹಾಸ ಹೇಳುತ್ತಿದ್ದ ಅಜ್ಜಿಯ ಮೋರೆಯ ಸುಕ್ಕುಗಳೂ ಸೆಟೆದು ನಿಂತಂತೆ ಕಂಡವು. ಬಹು ಕಿಚ್ಚಿನಲ್ಲಿ ಆ ಹೊಲದವನ ಹಿಕ ಮತ್ತು ಹೇಡಿತನಗಳನ್ನೆಲ್ಲಾ ಗೇಲಿ ಮಾಡುತ್ತಾ ಅದು (ಅಜ್ಜಿ) ಹೇಳುತ್ತಿತ್ತು."[೧೪] ಸುಕ್ಕುಗಳನ್ನು ಸೆಟೆದು ನಿಲ್ಲುವಂತೆ ಮಾಡುವ ಕಾರ್ಯಕ್ಕಿಂತ ಹೆಚ್ಚಿನ ಶ್ರೇಷ್ಠ ಕೆಲಸ ಬೇರಾವುದೂ ಇಲ್ಲ ಎಂದು ಈ ಕಥೆ ಸಮರ್ಥವಾಗಿ ದರ್ಶಿಸುತ್ತದೆ.

ಜೀತ: ಬೀರ ಎಂಬ ಜೀತದಾಳು. ಗೌಡ್ರು ಮನೆಯಲ್ಲಿ ೩೦ ವರ್ಷ ಜೀತದಾಳು ಆಗಿದ್ದನು. ಗೌಡ್ರು ತಾವು ಏನೇ ತಪ್ಪು ಮಾಡಿದ್ರೂ ಅದು ಬೆಟ್ಟದಷ್ಟು ಇದ್ರೂ ಅವರ ದೊಡ್ಡಸ್ತಕ್ಕೆಯಲ್ಲಿ ಮುಚ್ಚಿಕೊಂಡು ಹೋಗುತ್ತಿತ್ತು. ಆದರೆ ಈ ಬೀರ ಒಂದು ಸಣ್ಣ ತಪ್ಪು ಮಾಡಿದ್ರೂ ಅದನ್ನು ಕೆದಕಿ ದೊಡ್ಡದು ಮಾಡುತ್ತಿದ್ದರು.

ಇಲ್ಲಿ ಶ್ರೀಮಂತ ಜಮೀನ್ದಾರು ಬಡವರನ್ನು ಜೀತಕ್ಕೆಂದು ಮನೆಯಲ್ಲಿ ಇಟ್ಟುಕೊಂಡು, ಸುಮಾರು ೩೦ ವರ್ಷಗಳ ಕಾಲ ನಿರಂತರವಾಗಿ ದುಡಿಸಿಕೊಂಡು, ಅವರಿಗೆ ಏನೂ ಹಣ/

ಕೂಲಿ ಕೊಡದೇ ಅವರ ಜೀವನ ಬದುಕನ್ನು ಹಾಳು ಮಾಡುತ್ತಿದ್ದರು ಎಂಬುದನ್ನು ಈ ಕಥೆಯು ತಿಳಿಸುತ್ತದೆ. ಜಮೀನ್ದಾರರು ಜೀತದಾಳುಗಳ ಮೇಲೆ ನಿರಂತರವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು.

ಕೊಂಡಿಮುಳ್ಳುಗಳು: ಕೊಪ್ಪಲು ಗ್ರಾಮದಲ್ಲಿ ದೊಡ್ಡಾಟವಾದ 'ಶನಿ ಮಾಹಾತ್ಮೆ'ಯ ಬಯಲಾಟದ ಸಂದರ್ಭದ ಸಿದ್ಧತೆ, ಆಟ ನಡೆಯುವ ರೀತಿಗಳು ಇಲ್ಲಿ ಚಿತ್ರಿತವಾಗಿವೆ. ಇಲ್ಲಿನ ಮೇಲಿಟ್ರು ನಾಗಯ್ಯನು ಬಯಲಾಟ ನೋಡಲು ಕರೆತಂದಿರುತ್ತಾರೆ. ಬಯಲಾಟದ ಮೇಸ್ಟ್ರುವಿಗಿಂತ ಇಸ್ಕೂಲಿನ ನಾಗಯ್ಯ ಸರ್‌ಗೆ ಊರಿನ ಜನ ಹೆಚ್ಚಿನ ಗೌರವ ಕೊಡುತ್ತಿದ್ದರು.

ನಾಗಯ್ಯನಿಗೆ ಗಂಗಪ್ಪನು ತಮ್ಮಣ್ಣಯ್ಯ ಸತ್ತೊ ಹೋಗಿರೋದನ್ನು ತಿಳಿಸಿದನು. ಆ ನಾಟಕ ಮೇಸ್ಟ್ರು ಇವನ್ನು ಹಾಳ್ ಮಾಡಿಬುಟ್ಟು ಅಂತ ಹೇಳಿದನು. ಮೇಸ್ಟ್ರೇ ನಿಮ್ಮ ಸಹವಾಸ ಆ ನಾಟಕದ ಮೇಸ್ಟ್ರು ಮಾಡಿ, ನಮ್ಮ ತಮ್ಮಣ್ಣಯ್ಯ ಸತ್ತು ಹೋದ. ನೀವು ಏನು ಆ ನಾಟಕದ ಮೇಸ್ಟ್ರುಗೆ ಮಾಡ್ಡಿರೋ? ಆ ಊರಿನ ಛೇರ್ಮಾನರು ಬಂದು "ಮೇಸ್ಟ್ರೇ ನಿಮ್ಮ ಕೆಲಸ ನೀವು ನೋಡುಕೊಳ್ರೀ ಅಂದ್ರೆ ಊರೋರ ತಂಟೆ ನಿಮಗೆ ಯಾಕ ಬೇಕು...?" ಎಂದು ಪ್ರಶ್ನೆ ಮಾಡಿದನು. ಈ ರೀತಿ ಊರಿನ ಅನೇಕರು ಮೇಸ್ಟ್ರೆ, ನಿಮ್ಮ ಸ್ನೇಹ ಮಾಡಿ ಆ ನಾಟಕಕಾರ ಕೆಟ್ಟು ಹೋದ. ಅವನು ನಮ್ಮ ತಮ್ಮಣ್ಣಯ್ಯನ ಸಾಯಿಸ್ದ. ನಾವು ನಿಮಗೆ ಏನು ಮಾಡಿವ್ರಿ ಎಂದು ವ್ಯಂಗ್ಯದ ಮಾತುಗಳನ್ನು ಹಾಡುತ್ತಿದ್ದರು.

ಮಾರನೇಯ ದಿನ ಶಾಲೆಗೆ ಬಂದ ಕೆಲವು ಮಕ್ಕಳು, ಅನಂತರದ ಮಾರನೇಯ ದಿನದಿಂದ ಒಬ್ಬರೂ ಮಕ್ಕಳು ಶಾಲೆಗೆ ಬರಲಿಲ್ಲ. ಊರಿನ ಮುಖ್ಯ ಗಣ್ಯರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿಲ್ಲ. ಈ ವಿಷಯವು ಕ್ಯಾತನ್‌ಹಳ್ಳಿ ಛೇರ್ಮಮಾನ್‌ರು ಮೇಲಾಧಿಕಾರಿಗಳಿಗೆ ತಿಳಿಸಿರುವ ವಿಷಯ ಮೇಸ್ಟ್ರು ನಾಗಯ್ಯನಿಗೆ ತಿಳಿಯಿತು.

ಇಲ್ಲಿ ಜಾತೀಯತೆ, ಶೋಷಣೆಗಳು ಎದ್ದು ಕಾಣುತ್ತವೆ. ಅಕ್ಷರಜ್ಞಾನವಿಲ್ಲದ ಸಮಾಜವು ಹೇಗೆ ವರ್ತಿಸುತ್ತದೆ ಎಂಬುದಕ್ಕೆ ಈ ಕ್ಯಾತನ ಹಳ್ಳಿಯ ಜನರೇ ಸಾಕ್ಷಿಯಾಗಿ ಕಾಣುತ್ತಾರೆ.

ಕಟ್ಟುಗಳು: ಓದಿ ವಿದ್ಯಾವಂತನಾದ ಹುಡುಗ, ಉದ್ಯೋಗವಿಲ್ಲದೇ ಮನೆಯಲ್ಲೇ ಇದ್ದು, ಚಿಂತಿಸುವುದನ್ನು, ಇವನ ತಂದೆ-ತಾಯಿ, ಅಣ್ಣ-ಅತ್ತಿಗೆಯರು ಧೈರ್ಯ ತುಂಬುವುದು ಹಾಗೂ ಉದ್ಯೋಗ ಇಲ್ಲದಿದ್ದರೂ ಜೀವನ ಮಾಡುವುದಕ್ಕೆ ನಮಗೆ ಬೇಕಾದಷ್ಟು ಆಸ್ತಿ ಇದೆ ಎಂದು

ಹೇಳುತ್ತಾ ಅವನಿಗೆ ಉದ್ಯೋಗದ ಚಿಂತೆಯನ್ನು ಬಿಡಿಸಲು ಮದುವೆ ಮಾಡುಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು.

ಹೀಗೆ ನಿರುದ್ಯೋಗಿಯಾದವರಿಗೆ ಮನೆಯಲ್ಲಿ ಸಿಗುವ ಪ್ರೋತ್ಸಹಗಳನ್ನು (ಸಾಂತ್ವನ) ಕುರಿತು ಈ ಕಥೆಯು ಹೇಳುತ್ತದೆ.

ತೆರೆ ತೆರೆ ಸರಿದಂತೆ: ದುರ್ಬಲನಾದ ಸತ್ವವಿಲ್ಲದ, ಪುರುಷತ್ವದಿಂದ ಕೂಡಿರುವ ಪತಿಯೊಂದಿಗೆ ಪತ್ನಿಯು ಸಂಸಾರವನ್ನು ಮಾಡುತ್ತಿರುವಾಗ, ಪತ್ನಿಯು ಮನೆಯ ಪಕ್ಕದ ಯಲ್ಲಪ್ಪನೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಳ್ಳುವಳು. ಒಂದು ದಿನ ಇಬ್ಬರು ಮನೆಯಲ್ಲಿರುವಾಗ ಕೂಲಿ ಕೆಲಸ ಮುಗಿಸಿಕೊಂಡು ಗಂಡ ಮನೆಗೆ ಬರುವನು. ಇವರನ್ನು ನೋಡಿ ಹೆಂಡತಿಯನ್ನು ರಕ್ತ ಬರುವಂತೆ ತಲೆಗೆ ಹೊಡೆದು, ಪ್ರಜ್ಞೆ ತಪ್ಪಿ ಬಿದ್ದದನ್ನು ನೋಡಿ ಓಡಿ ಹೋಗಿದ್ದನು. ಅತ್ತ ಯಲ್ಲಪ್ಪ ಇವನು ಬಂದಾಗಲೇ ಓಡಿಹೋಗಿದ್ದನು.

ಆಸ್ಪತ್ರೆಯಿಂದ ಗುಣಮುಖಳಾಗಿ ಮನೆಗೆ ಬಂದಾಗ ಪತಿಯ ಮನೆ ಬಾಗಿಲು ಹಾಕಿತ್ತು. ಆ ಕಡೆ ಇದ್ದ ಯಲ್ಲಪ್ಪನ ಮನೆಗೆ ಹೋಗಿ ನೋಡಿದಳು. ಅದು ಬಾಗಿಲು ಹಾಕಿ ಬೀಗ ಹಾಕಿಕೊಂಡು ಊರಿಗೆ ಹೋಗಿದ್ದನೆಂದು, ಬೀಗ ಯಾರಿಗೂ ಕೊಡಬಾರದೆಂದು ಹೇಳಿದ್ದನೆಂದು ಹುಡುಗರಿಂದ ತಿಳಿಯಿತು.

ಇತ್ತ ಯಲ್ಲಪ್ಪನಿಲ್ಲದೆ ನನಗೆ ಮುಂದಿನ ಆಸರೆ ನನ್ನ ಪತಿ. ಆತನೊಂದಿಗೆ ನಾನು ಸಂಸಾರ ಮಾಡಬೇಕೆಂದು ದುಃಖಿತಳಾಗಿ, ತನ್ನ ಪಾಪದ ಪಿಂಡವನ್ನು ಸಾಯಲೆಂದು ಹಿಸಿಕಿಕೊಂಡು ಮನೆ ಕಡೆಗೆ ಬಂದಳು.

ಇಲ್ಲಿ ಸ್ತ್ರೀಯು ಗಂಡನನ್ನು ಬಿಟ್ಟು ಪರ ಪುರುಷನೊಂದಿಗೆ ಇಟ್ಟುಕೊಂಡ ಅನೈತಿಕ ಸಂಪರ್ಕದಿಂದಾಗಿ ಎದುರಿಸಿದ ಕಷ್ಟಗಳನ್ನು, ಹೆಣ್ಣಿನ ಜಾರ ತನವನ್ನು ಕುರಿತು ಇಲ್ಲಿ ವಿವರಿಸಲಾಗಿದೆ.

ವಂಶಸ್ಥರು: ಹಳ್ಳಿಗಳಲ್ಲಿನ ಪೂಜಾರಿಗಳು ಮಾಡುವ ವಿವಿಧ ಶೋಷಣೆ, ಅನೈತಿಕ ಚಟುವಟಿಕೆಗಳನ್ನು ಕುರಿತು ಈ ಕಥೆಯು ವಿವರಿಸುತ್ತದೆ.

ಗ್ರಾಮದೇವತೆಯ ಪೂಜಾರಿಯ ಹೆಸರು ಶೊಂಭಯ್ಯನೆಂದು. ದೇವಿಯ ನಿಷ್ಠೆ ಹೆಚ್ಚಿದಂತೆಲ್ಲ ಭಕ್ತಾದಿಗಳ ಕಾಣಿಕೆ ಕೂಡಿ ಕೂಡಿ ಅವಳ ಹೆಸರಿನಲ್ಲಿ ದೊಡ್ಡ ಆಸ್ತಿಯಾಗಿ ಆ ಆಸ್ತಿಯ

ಅನುಭೋಗ ಪೂಜಾರಿಯ ಹಕ್ಕಾಯಿತು. ಹೀಗೆ ದೇವಿಯ ಮಂಗಳಾರತಿ ತಟ್ಟೆಗೆ ಹಾಕಿದ ಹಣ ವಸ್ತುಗಳೆಲ್ಲವು ಪೂಜಾರಿಯು ತನಗೆ ಸೇರಿದವು ಎಂದು ಬಾಚಿಕೊಳ್ಳುತ್ತಿದ್ದನು.

ಈ ಪೂಜಾರಿ ಶೊಂಭಯ್ಯ ಎಂತ ನೀಚನಿದ್ದನೆಂದರೆ ಊರಿನ ಹಿರಿಯರು, ಗೌಡ್ರು, ಮುಖ್ಯಸ್ಥರು, ಜನರು ರೋಸಿ ಹೋಗಿದ್ದು, ಇವನನ್ನು ಪೂಜಾರಿಯ ಹುದ್ದೆಯಿಂದ ತೆಗೆದುಹಾಕಲು ಗ್ರಾಮದವರೆಲ್ಲರು ಒಂದು ಸಭೆ ಸೇರಿದರು. ಇಲ್ಲಿ ಅಂತಿಮವಾಗಿ ಈತನ ತೆಗೆಯಲು ಸಾರ್ವಜನಿಕರು ಒಪ್ಪಿದರು. ಇದಕ್ಕೆ ಕಾರಣಗಳು ಅನೇಕ ಇದ್ದವು.

ಅಂತ್ರಗಿಂತ್ರ ಅಂತ ಹೆಣ್ಣುಮಕ್ಕಳನ್ನು ಅಮವಾಸೆಯ ದಿನ ರಾತ್ರಿ ಒಬ್ಬರನ್ನು ಕೂಡಿಸಿ ಮಂತ್ರದಿಂದ ಬೂದಿಹಾಕುವುದು, ಹಣ ವಸೂಲಿ ಮಾಡುವುದು, ದೇವಿಗೆ ಹಾಕಿದ ಹರಕೆಯ ಮುಡಿಪನ್ನು ತಾನೇ ಇಟ್ಟುಕೊಳ್ಳುವುದು. ಒಂಟಿ ಸಿಕ್ಕ ಹೆಣ್ಣನ್ನು ಮುತ್ತುಗದ ಹಳ್ಳದಲ್ಲಿ ಬಲಾತ್ಕರವಾಗಿ ಅವಳ ಮೇಲೆ ಅತ್ಯಾಚಾರ ಮಾಡಿದ್ದನು. ಇಂತಹ ಅಯೋಗ್ಯ ಪೂಜಾರಿಯನ್ನು ತೆಗೆದು ಹಾಕಲು ಊರಿನ ಯುವಕರು ಅಂದರೆ ಹೊಸ ತಲೆ ಮಾರಿನವರು ಉತ್ಸುಕರಾಗಿದ್ದಾರೆ. ಊರಿನ ಹಿರಿಯರು ಇದಕ್ಕೆ ಸ್ಪಂದಿಸದೇ ಇರುವುದರಿಂದ ಯುವಕರು ಅವರ ಮೇಲೆ ತಿರುಗಿಬಿದಿದ್ದಾರೆ.

ಆದರೆ ಹೀಗೆ ಪೂಜಾರಿ ಶೊಂಭಯ್ಯ ಗ್ರಾಮದ ಜನರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಕೆಲವೊಂದು ಸಲ ಅವಕಾಶ ಸಿಕ್ಕಾಗ ಸ್ತ್ರೀಯರನ್ನು ಲೈಂಗಿಕವಾಗಿ ಶೋಷಣೆ ಮಾಡುತ್ತಾನೆ. ಊರಿನ ಜನರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಕೊನೆಗೆ ತನ್ನನ್ನು ತೆಗೆಯಲು ಮಾಡಿದ ಪ್ರಯತ್ನವನ್ನು ವಿಫಲಗೊಳಿಸಿ, ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳುತ್ತಾನೆ.

ಸುಮ್ಮಾನ: ಇಲ್ಲಿ ಮಾನವ ಮತ್ತು ಪ್ರಾಣಿಗಳಿಗೆ ಇರುವ ಸಂಬಂಧಗಳನ್ನು ಕುರಿತು ವಿವರಿಸಲಾಗಿದೆ. ಕಟಿರ ತಾನು ಬೆಳೆಸಿದ ಥೈರಾನನ್ನು ಕಟುಕರ ಕೈಗೆ ಕೊಡುವುದನ್ನು ಬೇಡ ಎಂದು ಪರಿಪರಿಯಾಗಿ ಗೌಡನಲ್ಲಿ ಹೇಳಿದ್ರು ಕಿರಚಿಕೊಂಡು– ಈ ತಗ್ರಕೊಡ್ ಬ್ಯಾಡಿ ಅಯ್ಯಾ, "ಅಯ್ಯೊ ಬ್ಯಾಡಿ ಈ ಥೈರ್ನಾಕೊಡಬ್ಯಾಡ್ರಿ" ಎಂದನು. ಈ ಮಾತುಗಳು ಕಟಿರನ ಹೃದಯದ ಮಾತುಗಳು ಥೈರ್ನ ಮೇಲೆ ಸಹಾನುಭೂತಿ ಬಂದು ಅದನ್ನು ಹಿಡಿದು ದುಃಖಿಸುತ್ತಾನೆ. ಅದಕ್ಕೆ ಮುದ್ದೆ ಊಟ ತಿನ್ನಿಸುವುದು, ಸ್ನಾನ ಮಾಡಿಸುವುದು ಮುಂತಾದವುಗಳನ್ನು ನೆನೆಸಿಕೊಂಡು ದುಃಖಿಸುತ್ತಾನೆ. ಈ ಕಟಿರನಿಗೆ ಥೈರ್ನ ಮೇಲೆ ಇರುವಷ್ಟು ಪ್ರೀತಿ, ಅನುಕಂಪ ಈ ಗೌಡ್ರುಗೆ, ಸಾಬರಿಗೆ ವ್ಯಾಪರಿ ಕಮಕಿರಿಗೆ ಇಲ್ಲದಿರುವುದೇ ಇಲ್ಲಿ ದುರಂತ.

ಕೊನೆಗೆ ಕಟಿರನನ್ನು ಕಮಕರು ಎಳೆದೊಯ್ಯುತ್ತಿರುವಾಗ, 'ಥೈರಾ' ಎಂದು ಕೂಗಿದ ತಕ್ಷಣ ಅವರಿಂದ ಕೊಸರಿಕೊಂಡು ಥೈರ ಕಟಿರನ ಪಕ್ಕಕ್ಕೆ ಬಂದು ನಿಂತು "ಇದೊಳ್ಳೆ ಆಟ ಆಯ್ತಲ್ಲ" ಎಂದು ರೇಗಿದ ಕಮಕ ಸಾಬಣ್ಣ ಇಬ್ಬರೂ ಮತ್ತೆ ಹಿಡಿಯಲು ಬರುತ್ತಿರುವುದನ್ನು ಕಂಡು ಕಟಿರ ಈಗ ಒಂದೇ ಮನಸ್ಸು ಮಾಡಿದವನಂತೆ 'ಮಾರಿನೇಗ್ಲು ನೋಡಾಕ್ಕೆ ಹೋಗಾನೆ ಬಂದ್‌ಬುಡು' ಎಂದು ಕಾಯುತಿದ್ದ ಬೈರನ ಹಟ್ಟಿಯತ್ತ ಓಟಕಿತ್ತ. ಅವನ ಹಿಂದೆ ಥೈರನೂ ಓಡುತ್ತಿತ್ತು. ಬಹಳ ಸಮಯದ ನಂತರ ತಿಳಿದ ಈ ವಿಷಯದಿಂದ ಗೌಡ್ರುಗೆ ಮಾತೆ ಹೊರಡಲಿಲ್ಲ.

ಹೀಗೆ ಈ ಕಥೆಯು ಮಲತಾಯಿಯೊಡನೆ ಬಾಳಲಾಗದೆ, ತಂದೆ ಜೀತಕ್ಕೆಂದು ಕುರಿಕಾಯುವ ಹಟ್ಟಿಯೊಳಗಿರಿಸಿದ್ದ ಕಟಿರ, ತನ್ನ ಬದುಕಿಗೆ ಹೊಂದಿಕೊಂಡರೂ, ಗೌಡರ ದಾಯಾದಿ ತರಿಸಿದ್ದ ಮಾರಿನೇಗ್ಲನ್ನು ಇತರ ಹೈದರಂತೆ ತನಗೆ ನೋಡಲು ಸಾಧ್ಯವಾಗಿಲ್ಲವೆಂದು ನೋವು ಕಾಡುತ್ತಿದ್ದು, ಹಟ್ಟಿಗೆ ಹೊಸದಾಗಿ ಬಂದ ಬನ್ನೂರು ಟಗರನ್ನು ಆತ ಕಟ್ಟಿಕೊಂಡು ಬೆಳೆಸಿ, ಟಗರು ದಷ್ಟ ಪುಷ್ಟವಾದಾಗ ಗೌಡರು ಅದನ್ನು ಲಾಭಕ್ಕಾಗಿ ಕಟುಕರ ಕೈಗೆ ಒಪ್ಪಿಸುವ ಸಂದರ್ಭ ಬಂದಾಗ, ಆತನ ಸುಪ್ತ ಪ್ರಜ್ಞೆಯಲ್ಲಿ ಅಡಕವಾಗಿದ್ದ ಸ್ವಾತಂತ್ರ್ಯದ ಹಂಬಲ ಒಡೆದೇಳುತ್ತದೆ. ತಾನು ಮಾರಿನೇಗ್ಲನ್ನು ನೋಡಿಯೇ ಸಿದ್ದ ಎಂದು, ತನ್ನನ್ನು ಹಿಂಬಾಲಿಸಿಕೊಂಡು ಬಂದ ಟಗರು ಥೈರನ ಜತೆಗೆ ಓಡುತ್ತಿದ್ದಾಗ ಸಾಂಕೇತಿಕವಾಗಿ ವ್ಯಕ್ತವಾಗುವ ಆತನ ಬಿಡುಗಡೆ ಬಯಸುವ ಪ್ರಜ್ಞೆ ತುಂಬ ಧ್ವನಿಪೂರ್ಣವಾಗಿ 'ಸುಮ್ಮಾನ' ಕಥೆಯ ಆಳಕ್ಕಿಳಿಯುತ್ತದೆ.

ನೆನಪುಗಳೇ ಹೀಗೆ:

'ನೆನಪುಗಳೇ ಹೀಗೆ' ಎಂಬ ಕಥೆಯು 'ವಾಸನಾಮಯ ಬದುಕಿನ ಆಚೆ ಈಚೆ' ಎಂಬ ಕಥಾ ಸಂಕಲನದಲ್ಲಿನ ಪ್ರಮುಖ ಕಥೆಗಳಲ್ಲಿ ಒಂದು. ನಗರೀಕರಣದ ಪ್ರಭಾವದಿಂದ ಕುಗ್ರಾಮವೊಂದರ ಮೇಲಾದ ಸಾಮಾಜಿಕ ವಿಘಟನೆಯಂತಹ ಪರಿಣಾಮಗಳನ್ನು ಇದು ಬಿಡಿ ಬಿಡಿಯಾಗಿ ಕಣ್ಣೆದುರು ತರುತ್ತದೆ. ಕಥೆಯ ನಿರೂಪಕ ಸ್ವತಃ ತಾನೇ ಕಥಾ ನಾಯಕನಾಗಿದ್ದು, ಸರಕಾರಿ ಕಚೇರಿಯಲ್ಲಿ ಉದ್ಯೋಗಸ್ಥನಾಗಿದ್ದು, ಹಳ್ಳಿಯಿಂದ ಬಂದ ಅವನಿಗೆ ಸಹಜವಾಗಿಯೇ ಬಾಲ್ಯದ ಅನೇಕ ನೆನಪುಗಳು, ಅಲ್ಲಿನ ಪರಿಸರ ಅಲ್ಲಿನ ಜನರ ಮುಗ್ಧತೆ ಅವನ ಮನಸನ್ನು ಕಾಡುವಂತೆ ಮಾಡಿವೆ. ತಾನು ಬಾಲ್ಯದಲ್ಲಿ ನೋಡಿದ್ದ ಹಳ್ಳಿಯ ಬದುಕಿನ ಕ್ರಮಕ್ಕೂ ಈಗಿರುವ ಸ್ಥಿತಿ-ಗತಿಗೂ ಅನೇಕ ವ್ಯತ್ಯಸಗಳಾಗಿವೆ.

ತನ್ನ ಸುತ್ತಲ್ಲಿದ್ದ ಆದರ್ಶಗಳು ಮೌಲ್ಯಗಳು, ನಂಬಿಕೆಗಳು ಇಂದು ಕಣ್ಮರೆಯಾಗಿವೆ. ಇದಕ್ಕೆ ಕಾರಣ ಒಂದಲ್ಲ. ಹಲವಾರು ಇದನ್ನು ಗ್ರಾಮದೇವತೆಯ ಕಿರೀಟ ಕಳವಾಗಿರುವುದು ಮತ್ತು ಊರಿಗೆ ಮಳೆ ಬಾರದೇ ಇರುವುದು ಈ ವಿಷಯಗಳೇ ಇದಕ್ಕೆ ನಿದರ್ಶನಗಳು.

ತಾನು ಬಾಲ್ಯದಲ್ಲಿ ಕಂಡಿದ್ದ ತೋಟಗಳು ಗಿಡಮರಗಳು, ಪಕ್ಷಿ, ಪ್ರಾಣಿ ಸಂಕುಲಗಳ ಅಳಿವಿನಿಂದ ಮಳೆಯಾಗದಿರಲು ಹೇಗೆ ಕಾರಣವೋ! ಹಾಗೆಯೇ ಆದರ್ಶ ಮೌಲ್ಯರಹಿತ ಜನರ ನಡಾವಳಿಗಳು ವಿಗ್ರಹದ ಕಳವಿಗೆ ಕಾರಣವಾಗಿವೆ. ಆದರೆ ಇದೇ ಘಟನೆಗೆ ನಿರೂಪಕನ ತಂದೆ ದೈವಿಸ್ವರೂಪದ ಕಾರಣಗಳನ್ನು ಕೊಡುತ್ತಾನೆ. ಆದರೆ ಇಲ್ಲಿ ಪರಂಪರೆ ಮತ್ತು ಆಧುನೀಕತೆಯು ಘರ್ಷಣೆಗೆ ಒಳಗಾಗುತ್ತವೆ. ಒಟ್ಟಾರೆಯಾಗಿ ಈ ಕಥೆಯ ಆಶಯವೆನೆಂದರೆ ಇಲ್ಲಿ ಕಥಾನಿರೂಪನ ತಂದೆಯು ಊರಿನ ಗ್ರಾಮದೇವತೆಯ ಕಿರೀಟವು ಕಳವಾದುದರಿಂದಲೇ ನಮ್ಮ ಊರಿಗೆ ಬರಗಾಲ ಬಂದಿರುವುದೆಂದು ಮಗನಿಗೆ ಪತ್ರದ ಮೂಲಕ ತಿಳಿಸುತ್ತಾನೆ. ಆದರೆ ಮಗ ವಿದ್ಯಾವಂತ ಇದನ್ನು ಅಲ್ಲಗಳೆದು ವೈಜ್ಞಾನಿಕ ಕಾರಣಗಳನ್ನು ನೀಡುತ್ತಾನೆ.

ತಂದೆಯು ನೀಡಿದ ಬರಗಾಲಕ್ಕೆ ಕಾರಣವಾದ ಅಂಶಗಳನ್ನು ಒಪ್ಪದೇ ನಿರೂಪಕ (ಮಗ)ನು ವೈಜ್ಞಾನಿಕವಾದ ಅಂಶಗಳನ್ನು ಕಾರಣಗಳಾಗಿ ನೀಡಲು ಪ್ರಾರಂಭಿಸುತ್ತಾನೆ.

ಪತ್ರ ಓದಿದ ಮೇಲೆ ಮಗನಿಗೆ ತನ್ನ ಹಳ್ಳಿಯ ಬಾಲ್ಯದ ನೆನಪುಗಳು, ಗೆಳೆಯರೊಂದಿಗೆ ಆಟ, ಜಾತ್ರೆಗಳಲ್ಲಿನ ಪಾಲ್ಗೊಳ್ಳುವಿಕೆ, ತೋಟಗಳ, ಮರ–ಗಿಡಗಳ ಪ್ರಾಣಿ ಪಕ್ಷಿಗಳೊಂದಿಗೆ ಆಡುತ್ತಿದ್ದ ಅನೇಕ ಆಟಗಳು ಸವಿನೆನಪುಗಳು ನೆನಪಿಗೆ ಬಂದವು. ಅಂದಿನ ಜನರ ಮುಗ್ಧತೆಗಳು ಅವನ ಮನಸ್ಸನ್ನು ಕಾಡುವಂತೆ ಮಾಡಿವೆ. ಇಂದು ಹಳ್ಳಿಯಲ್ಲಿ ಪರಿಸರ ನಾಶವಾಗಿದೆ. ತಾನು ಬಾಲ್ಯದಲ್ಲಿ ನೋಡಿದ್ದ ಹಳ್ಳಿಯ ಬದುಕಿನ ಕ್ರಮಕ್ಕೂ ಈಗಿರುವ ಸ್ಥಿತಿ–ಗತಿಗೂ ಅನೇಕ ವ್ಯತ್ಯಾಸಗಳಿವೆ.

ನಾನು ಹಳ್ಳಿಯಲ್ಲಿದ್ದಾಗ ನಮ್ಮ ಗ್ರಾಮದೇವತೆಯ ಹಬ್ಬದ ಆಚರಣೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದೇವು. ಊರಿನ ಸಕಲ ಜನರು ಹಬ್ಬಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ತಮ್ಮ ಬಂಧುಗಳನ್ನು ಕರೆತಂದಿರುತ್ತಿದ್ದರು. ಅಲ್ಲದೇ ನಮ್ಮ ಸುತ್ತಲೂ ಊರುಗಳ ಜನರು ಅಂದು ಸೇರುತ್ತಿದ್ದರು. ಅವರುಗಳೆಲ್ಲರ ಎದುರಿಗೆ ನಮ್ಮ ಗ್ರಾಮದೇವತೆಗೆ ಕಿರೀಟವನ್ನು ತೊಡಿಸುವುದು. ಇದನ್ನು ನೋಡಲು ಸಕಲ ಗ್ರಾಮದ ಜನರು ತವಕದಿಂದ ಕಾದಿರುತ್ತಿದ್ದರು.

ಇಂತಹ ಹಬ್ಬದ ವಿಜೃಂಭಣೆಯ ಸಂದರ್ಭದಲ್ಲಿ ನಾವು ನಮ್ಮ ಬಾಲ್ಯ ಗೆಳೆಯರು ಜಾತ್ರೆಯಲ್ಲಿ ತಿರುಗಾಡುವುದು ಒಂದು ರೀತಿಯ ಸಂತೋಷವಾಗಿರುತ್ತಿತ್ತು.

ಆದರೆ ಇಂದು ಆಧುನಿಕರಣದ ಪ್ರಭಾವದಿಂದ ತನ್ನ ಸುತ್ತಲಿದ್ದ ಆದರ್ಶಗಳು, ಸಂಪ್ರದಾಯಗಳು, ಮಡಿವಂತಿಕೆಗಳು, ಧಾರ್ಮಿಕ ಕಟ್ಟು ಪಾಡುಗಳು, ನೀತಿಗಳು, ಆಚಾರ-ವಿಚಾರಗಳು, ಜನರ ಆದರ್ಶ ಮೌಲ್ಯಗಳು, ನಂಬಿಕೆಗಳು ಇಂದು ಕಣ್ಮರೆಯಾಗಿವೆ. ಇದಕ್ಕೆ ಕಾರಣಗಳು ಒಂದಲ್ಲ... ಹಲವಾರು ಇವೆ.

ತಾನು ಬಾಲ್ಯದಲ್ಲಿ ಕಂಡಿದ್ದ ಗಿಡ ಮರಗಳು, ಪ್ರಾಣಿಪಕ್ಷಿಗಳು, ತೋಟಗಳು, ಪರಿಸರವು ನಾಶವಾಗಿರುವುದರಿಂದಲೇ ನಮ್ಮ ಗ್ರಾಮಕ್ಕೆ ಬರಗಾಲ ಬಂದಿದೆ ಎಂದು ವೈಜ್ಞಾನಿಕ ಕಾರಣಗಳನ್ನು ಕೊಡುತ್ತಾನೆ. ಹಾಗೆಯೇ ಇಂದಿನ ಆದರ್ಶ ಮೌಲ್ಯರಹಿತ ಜನರ ನಡಾವಳಿಗಳು, ಜನರ ಜೀವನ ಮಟ್ಟದಲ್ಲಿನ ಬದಲಾವಣೆಗಳು, ವಿಗ್ರಹದ ಕಳವಿಗೆ ಕಾರಣವಾಗಿವೆ ಎಂದು ತಂದೆಯ ದೈವಿ ಸ್ವರೂಪದ ಕಾಣಗಳನ್ನು ಅಲ್ಲಗಳೆಯುತ್ತಾನೆ.

ಇಲ್ಲಿ ತಂದೆಯು ಗ್ರಾಮದ ಬರಗಾಲಕ್ಕೆ ಧಾರ್ಮಿಕ, ನಂಬಿಕೆಗಳು, ಪರಂಪರೆ ಮತ್ತು ಮಗನು ಕೊಡುವ ಆಧುನಿಕತೆಯ ಅಂಶಗಳೆರಡು ಘರ್ಷಣೆಗೆ ಒಳಗಾಗುತ್ತಿವೆ. ಮಗನು ವಿದ್ಯಾವಂತ ಆಧುನಿಕರಣದ ಪ್ರಭಾವದಿಂದ ಬರಗಾಲಕ್ಕೆ ವೈಜ್ಞಾನಿಕ ಕಾರಣಗಳನ್ನು ನೀಡುತ್ತಾನೆ. ಅಲ್ಲದೆ, ಜನರಲ್ಲಿನ ಬದಲಾವಣೆ ನಗರೀಕರಣದಿಂದಾದ ಪರಿಣಾಮಗಳಿಂದಾಗಿ ಗ್ರಾಮದೇವತೆಯ ಕಿರೀಟದ ಕಳವಿಗೆ ಕಾರಣಗಳಾಗಿವೆ ಎಂದು ನಿರೂಪಿಸುತ್ತಾನೆ.

ಹೀಗೆ ಈ ಕಥೆಯು 'ನೆನಪುಗಳೇ ಹೀಗೇ' ಎಂಬ ಕಥೆಯಲ್ಲಿ ಹಳ್ಳಿಯಲ್ಲಿನ ಜನರ ಜೀವನ, ಬದುಕಿನ ಆಸರೆ, ಅನಕ್ಷರತೆ, ಮೋಸ, ವಂಚನೆ, ಜನರ ಮೂಢನಂಬಿಕೆಗಳು, ಆಚಾರ- ವಿಚಾರಗಳು, ಗ್ರಾಮದೇವತೆಯ ಹಬ್ಬದ ಸಡಗರಗಳು, ಆಚರಣೆಯ ವಿಶೇಷತೆಗಳನ್ನು ಕುರಿತು ತಮ್ಮ ಬಾಲ್ಯದ ನೆನಪುಗಳನ್ನು ನಿರೂಪಕರು ಇಲ್ಲಿ ಒಂದೊಂದಾಗಿ ಬಿಚ್ಚಿಡುತ್ತಾರೆ. ಆದರೆ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳಿಂದಾಗಿ ಜನರು ಬದಲಾಗಿದ್ದಾರೆಂದು, ಸಾಮಾಜಿಕ ಬದಲಾವಣೆಯಿಂದಾಗಿ, ಗ್ರಾಮದೇವತೆಯ ಕಿರೀಟವು ಕಳವಾಗಿದೆ ಎಂದು ನಿರೂಪಕನು ತಂದೆಗೆ ಹೇಳುತ್ತಾ, ಮಳೆ ಬಾರದಿದ್ದಕ್ಕೆ ವೈಜ್ಞಾನಿಕ ಕಾರಣಗಳನ್ನು ನೀಡುತ್ತಾನೆ. ಒಟ್ಟಾರೆಯಾಗಿ ಈ ಕಥೇಯಲ್ಲಿ ನಾವು ತಂದೆ-ಮಕ್ಕಳಿಬ್ಬರ ನಡುವೆ ನಡೆಯುವ

ಸಂವಾದ ಅಂದರೆ ಸಂಪ್ರದಾಯಕ ಕಟ್ಟಳೆಗಳು ಮತ್ತು ಆಧುನಿಕ, ಅಂಶಗಳಿಗೆ ನಡೆಯುವ ಘರ್ಷಣೆಯನ್ನು ಕಾಣುತ್ತೇವೆ. ಅಂತಿಮವಾಗಿ ಇಲ್ಲಿ ಆಧುನಿಕ, ವೈಜ್ಞಾನಿಕ ಅಂಶಗಳಿಗೆ ಜಯವಾಗುವುದು. ಕಥೆಯು ಪೂರ್ವಿಕರು ನಂಬಿರುವ ಬರಗಾಲದ ಅಸತ್ಯದ ಕಾರಣಗಳನ್ನು ಬಿಟ್ಟು ಇದಕ್ಕೆ ಸತ್ಯವಾದ ವೈಜ್ಞಾನಿಕ ಅಂಶಗಳನ್ನು ತೆರೆದಿಡುತ್ತದೆ.

ಕಾಲಾಯ: ಇಲ್ಲಿ ಕಥೆಗಾರರು 'ಬಡತನ' ಮತ್ತು 'ಹಸಿವು' ಪತಿಯಿಂದ ದೂರವಿದ್ದ ಪತ್ನಿ ಮತ್ತು ಇವರ ಬಾಲ ಮಕ್ಕಳು ಇವರ ಬದುಕಿನ ಜೀವನದ ಚಿತ್ರಣವನ್ನು ಹೃದಯ ಸ್ಪರ್ಶಿಯಾಗಿ ವಿವರಿಸಿದ್ದಾರೆ.

ಬಾಲ ಮಗುವಿಗೆ ಕುಡಿಸುವುದಕ್ಕೆ ತನ್ನ ಮೊಲೆಯಿಂದ ಹಾಲು ಬರುವುದಿಲ್ಲ. ಹಸಿದುಕೊಂಡ ಮಗು ಹಾಲಿಗಾಗಿ ಕಿರುಚುತ್ತದೆ. ತಾಯಿ ತನ್ನ ಬತ್ತಿದ ಮೊಲೆಯನ್ನು ಮಗುವಿನ ಬಾಯಿಗೆ ಇಡುವುದು, ಅದು ಆ ಬತ್ತಿದ ಮೊಲೆಯನ್ನು ಹಿಂಜಿ ಹಿಂಜಿ ಸೋತು ನಿದ್ರೆ ಹೋಗುತ್ತೆ.

ಇಂತಹ ಸ್ಥಿತಿಯಲ್ಲಿ (ಉತ್ತಮ ವ್ಯಕ್ತಿ) ಶ್ರೀಮಂತನಾದ ಸುಬ್ಬಣ್ಣ ಬಂದು ತನ್ನ ಮಗನನ್ನು ಸಿಮ್ಲಾಗೆ ಕಳಿಸೋ ವ್ಯವಸ್ಥೆ ಮಾಡಿದ್ದು ಹೇಳ್ತಾನೆ. ಆ ಖುಷಿಯಲ್ಲೇ ನಗ್ತಾನೆ. ನಾವು ಸುಮ್ಮನಿರೋದು ಕಂಡು ತನ್ನ ಕೈಲಿ ಹರೀಲಾರ್ದಕ್ಕೆ ಸಹಾನೂಭೂತಿಯ ಎರಡು ಮಾತಾಡುತ್ತಾನೆ. ನೋಡಾನೆ ತಾಳು ಅಂದು ಬರ್ತಿನಿ ಎಂದು ಹೇಳಿ ಹೋಗ್ತಾನೆ.

ಇಂತಹ ಕಿತ್ತು ತಿನ್ನುವ ಬಡತನ ಇರುವಾಗ ವ್ಯರ್ಥದ ಉಪಯೋಗವಿಲ್ಲದೆ ದೇವಾಲಯದಲ್ಲಿ ದೇವರ ಪ್ರತಿಷ್ಠಾಪನೆಗೆ ಅಪಾರ ಹಣ ವೆಚ್ಚ ಮಾಡುತ್ತಾರೆ. ಅಲ್ಲಿ ಮಧ್ಯಾಹ್ನದ ಉಚಿತ ಊಟಕ್ಕೆ ರಾಶಿ ಊಟದ ಎಲೆಗಳು ಬಿದ್ದವೆ. ಅವಕ್ಕೆ ಮುತ್ತಿರುವ ನಾಯಿ, ನೋಣ, ಕಾಗೆ, ಎದ್ದು ಕಾಣುವ ಕರಿ ಹುಡಗರು. "ಈಗ ಪ್ರತಿಷ್ಠಾಪನೆ ನೆರ್ವೆರೋದಿಕ್ಕೆ ಮಂತ್ರಿ ಬರ್ತಾರಂತೆ. ಅದಕ್ಕೇ ಪೋಲೀಸ್ನೋರ ಸಾಲು, ಕಾವಲು!"[೧೫]

ಇಂತಹ ನಿರ್‌ಉಪಯುಕ್ತ ಕೆಲಸಗಳಿಗೆ ಮಾಡುವ ವೆಚ್ಚವನ್ನು ಬಡತನದ ಹಸಿವಿನಿಂದ ಬಳಲುವವರಿಗೆ ಖರ್ಚು ಮಾಡಿದರೆ ಒಂದೊತ್ತಿನ ಊಟಕ್ಕಾದರೂ ಹಾಕಬಹುದು. ಅಲ್ಲವೇ?

ಇಂತಹ ಬಡತನದ ವಿಕೃತ ರೂಪಗಳು, ಪರಿಣಾಮಗಳು ಸರ್ಕಾರ ಮಂತ್ರಿಗಳ ವ್ಯರ್ಥ ಖರ್ಚುಗಳನ್ನು ಕುರಿತು ಕಥೆಗಾರರು ಇಲ್ಲಿ ವ್ಯಂಗ್ಯವಾಗಿ ವ್ಯಕ್ತಪಡಿಸಿದ್ದಾರೆ. ಹಾಗೂ ಇಂತಹ

ಖರ್ಚು ಮತ್ತು ವೆಚ್ಚಗಳು ಬಡತನದ ನಿರ್ಮೂಲನೆಗೆ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾಗಿರಬೇಕೆ ಹೊರತು ಮಾರಕವಾಗಿರಬಾರದು ಎಂಬುದು ಈ ಕಥೆಯ ಧ್ವನಿಯಾಗಿದೆ.

ಪರೆ ಬಿಟ್ಟನು ಹುಡುಗ: ಈ ಕಥೆಯು ಕಿಶೋರ ಪ್ರಜ್ಞೆಯ ನೆಲೆಯಿಂದ ನಿರೂಪಿಸಲ್ಪಟ್ಟಿದೆ. ಈ ಕಥೆಯಲ್ಲಿ ಕಿಶೋರಾವಸ್ಥೆಯಲ್ಲಿ ಲೈಂಗಿಕತೆಯ ಪ್ರಥಮ ಅನುಭವದ ಭೀತಿ ತಲ್ಲಣಗಳನ್ನು ಸೂಕ್ಷ್ಮವಾಗಿ ದಾಖಲಿಸುತ್ತದೆ.

ಮಧ್ಯಾವನು ಬಾಲಕನಾಗಿದ್ದು, ತನ್ನ ಬಡತನದ ಬೇಗೆಯ ಹಸಿವನ್ನು ನೀಗಿಸಿಕೊಳ್ಳಲು ರಾಜಕ್ಕನ ಹೊಟೆಲಿನಲ್ಲಿದ್ದು, ಅವಳು ಹೇಳುವ ಎಲ್ಲಾ ಕೆಲಸಗಳನ್ನು ಮಾಡುತ್ತಾ ಅಲ್ಲಿ ತಿಂಡಿ, ಕಾಫಿ, ಊಟ ಮಾಡುತ್ತಾ ಇರುವನು. ಇಲ್ಲಿ ಅಮಾಯನಾದ ಮಧ್ಯಾವನನ್ನು ರಾಜಕ್ಕಳು ಬಳಸಿಕೊಳ್ಳುವ ರೀತಿ, ಇವರನು ಒಂದು ರೀತಿಯ ಶೋಷಣೆಗೆ ಒಳಗಾಗಿರುವನೆಂದು ತಿಳಿದುಬರುತ್ತದೆ.

ಊರಿನ ಮರೀಗೌಡ್ರರು ರಾಜಕ್ಕ ನೊಂದಿಗೆ ವರ್ತಿಸುವ ರೀತಿ, ಅನೇಕ ಸಲ ಇವರ ರಾಸಲೀಲೆಗಳನ್ನು ನೋಡಿದ್ದ ಮಧ್ಯಾವ, ಊರಿನ ಪೋಕರಿಗಳು ಹೇಳಿದ ಮಾತುಗಳನ್ನು ಕೇಳಿ, ರಾಜ ಅವರಂತೆ ರಾಜಕ್ಕನನ್ನು "ಅದೇ ಕನಕ್ಕ ನಿಂದೊಂದು ಚೂರು ಒಳಸುಂಟಿ ಬೇಕಿತ್ತು ನಂಗೆ."[೧೬] ಎಂದು ಪರಿಣಾಮವಾಗಿ ರಾಜಕ್ಕನಿಂದ ಒದೆ ತಿಂದು ಬರುವನು. ಇವನಿಗೆ ಆದ ಉದ್ರೇಕದಿಂದ ತಾಳಲಾರದೇ ಮರಳಿನಲ್ಲಿ ತಗ್ಗು ಮಾಡಿ, ಅದರ ಮೇಲೆ ಮಲಗಿ ಅದರಿಂದ ಆದ ಸುಖ, ಆನಂತರ ಆರಂಭವಾದ ಉರಿಯಿಂದ ತತ್ತರಿಸಿ, ಪಾಶ್ಚಾತ್ತಾಪ ಪಟ್ಟು, ಕೊನೆಗೆ ನೀರಿಗೆ ಬಿದ್ದು, ಅದನ್ನು ತೊಳೆದುಕೊಂಡು, ಇನ್ನೊಮ್ಮೆ ಇಂತಹ ಕೆಟ್ಟ ಕೆಲಸ ಮಾಡುವುದಿಲ್ಲವೆಂದು ಆಣೆ ಮಾಡಿ ಮನೆ ಕಡೆಗೆ ಬರುವನು.

ಇಲ್ಲಿ ಮಧ್ಯಾವನು ತನ್ನ ಅರಿವಿಗೆ ಬರದೇ ರಾಜಕ್ಕನನ್ನು ಮರೀಗೌಡ್ರರಂತೆ ಆಸೆಪಡುವುದು, ಕೊನೆಗೆ ರಾಜಕ್ಕಳಿಂದ ಅವಮಾನಿತನಾಗಿ, ಕೊನೆಗೆ ತಾನು ಮಾಡಿದ ತಪ್ಪಿನ ಅರಿವಿನಿಂದಾಗಿ ಪಶ್ಚಾತ್ತಾಪ ಪಡುವನು.

ಅನ್ನ: ನಿಂಗೀರನು ಹನ್ಮೇಗೌಡ್ರ ತೋಟದಲ್ಲಿ ಕೆಲಸದಾಳಾಗಿ ದುಡಿಯುತ್ತಿದ್ದನು. ಇಲ್ಲಿ ನಿಂಗೀರ ನಿರ್ದಯೆಯಿಂದ ಹನ್ಮೇಗೌಡ್ರರಿಂದ ಶೋಷಣೆಗೆ ಒಳಗಾಗಿದ್ದನು. ತೋಟದಲ್ಲಿ ಕೆಲಸ ಮಾಡುತ್ತಾ ಇದ್ದಾಗ ಒಂದು ದಿನ ಬಹಳ ಹಸಿವಿನಿಂದಾಗಿ ತಾಳಲಾರದೆ ಪ್ರಜ್ಞೆ ತಪ್ಪಿ ಬಿದ್ದನು.

ನಂತರ ಎಚ್ಚರವಾದಾಗ ನೀರು ಅನಿವಾರ್ಯವಾಗಿ ಆಗ ಕುಡಿಯಲೇಬೇಕು ಅಲ್ಲಿದ್ದ ಎಳೆಯ ನೀರು ಕುಡಿಯದೇ(ಗೌಡ್ರ ಭಯದಿಂದ) ಬಾವಿಗೆ ಇಳಿದು ನೀರು ಕುಡಿಯುತ್ತಾನೆ. ಇಲ್ಲಿ ಕೂಲಿಯಾಳು ಆಗಿ ತೋಟದಲ್ಲಿ ಕೆಲಸ ಮಾಡಿದ್ರು ಅಲ್ಲಿನ ಫಲಗಳನ್ನು ಅನುಭವಿಸದಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಬೆಂದು ಹೋಗಿದ್ದನೆಂಬುದನ್ನು ಇಲ್ಲಿ ನಾವು ಕಾಣಬಹುದು.

ನಿಶ್ಚಯ: ಇಲ್ಲಿ ಜಾತಿ ಪದ್ಧತಿಯು ಮಿತಿ ಮೀರಿ ಬೆಳೆದಿರುವುದು, ಸಂಪ್ರದಾಯದ ಕಟ್ಟಳೆಗಳೇ ಮುಖ್ಯವೆಂದು ಊರಿನ ಶಾನುಭೋಗ, ಗೌಡ್ರು ಹೇಳುತ್ತಾರೆ. ಶಾನುಭೋಗರ ಮಗಳು ಗೀತಾಳನ್ನು ಚಲುವಾದಿಯ ಹುಡುಗನೊಬ್ಬ ಕೈಹಿಡಿ ಮುಟ್ಟಿ, ಅಪ್ಪಿಕೊಳ್ಳುತ್ತಾನೆ. ಇದರಿಂದ ಅವಳು ಹೆದರಿ– "ಛೀ ಹೊಲೆ ಸೂಳೆಮಗನೆ ಇಷ್ಟಕ್ಕೆ ತೋರಿಸ್ತಿಯಲ್ಲ ನೀನ್ ಬುದ್ಧಿ ಬಿಡು ಬಿಡು ನಿನ್ ಮುಖಕ್ಕೆ ಮಂಗಳಾರ್ತಿ ಎತ್ತ" ಎಂದಳು. 'ಎನ್ ಮುಟ್‌ಬಿಟ್ರೆ ಕುಲ್‌ಕುಂಚೋಯ್ತಾ? ನಾನೇನು ಮನ್ಸಾ ಅಲ್ವಾ ಹಂಗಾದ್ರೆ ಇಷ್ಟೇನಾ' ಎಂದು ಅವಳನ್ನು ಗಟ್ಟಿಯಾಗಿ ಅಪ್ಪಿಕೊಳ್ಳುವಳು. ಅವಳು ಇವನಿಂದ ಪಾರಾಗಲು ಕಿಟ್ಟನೆ ಕಿರಿಚಿಕೊಂಡು, ಕೈ ಬಿಡಿಸಿಕೊಂಡಳು. ಚಲುವಾದಿ "ಆ ಶಾನುಭೋಗ, ನಿಮ್ಮ ಕೇರಿಯೋರು ಆದ್ರೆ ನಮ್ಮೋರ್ನ ಹೆಂಗಬೇಕಾದ್ರು ಮಜಾ ಮಾಡಬಹುದು. ನಾವು ಮಾತ್ರ ನಿಮ್ಮನ್ನು ಮುಟ್ಟಿಸಿಕೊಳ್ಳೊ ಹಂಗೂ ಇಲ್ವಾ, ಮಂತೆ ನೀನೇ ಬೆದೆಗೆ ಬಂದಂಗಾಡ್ತಿದೆ ಆಂ."[೧೭] ಎಂದು ಜನರು ಬರುವುದನ್ನು ನೋಡಿ ಹಳ್ಳದ ಗುಂಟೆ ಪರಾರಿಯಾದನು.

ಇದು ಊರಲ್ಲಿ ಶಾನುಭೋಗರ ಮಗಳು ಗೀತಾಳನ್ನು ಚಲುವಾದಿಯ ಹುಡುಗ ಕೆಡಿಸಿದನೆಂದು ಸುದ್ದಿಯಾಯಿತು. ಗೀತಾಳನ್ನು ಮನೆಯಲ್ಲಿ ಯಾರು ಮುಟ್ಟಿಸಿಕೊಳ್ಳದೇ ಪ್ರತ್ಯೇಕವಾದ ಕೋಣೆಯಲ್ಲಿ ಇಟ್ಟು, ಅವಳಿಗೆ ಊಟಕ್ಕೆ ತಾಟು, ಲೋಟಗಳನ್ನು ಪ್ರತ್ಯೇಕವಾಗಿ ಇಟ್ಟರು. ಅದರಂತೆ ಕೊಡುತ್ತಿದ್ದರು. ಈ ಸರಳುಗಳ ಕೋಣೆಯ ಒಳಗೆ ಬಂದಿಯಾಗಿದ್ದ ಗೀತಾಳು ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದಳು.

ಮುಂದೆ ತಂದೆ-ಗೌಡ್ರು ಬಂದು ಪೋಲಿಸ್‌ರ ಮುಂದೆ ಚಲುವದಿಯವನು ನನ್ನ ಕೆಡಿಸಿದನೆಂದು ಸುಳ್ಳು ಹೇಳು ಎಂದು ಒತ್ತಾಯಿಸಿ ಒಪ್ಪಿಸಿ ಹೋದರು. ಇದರಿಂದಾಗಿ ಗೀತಾಳ ಬಾಳು ಮುರಿದು ಹೋಗಿತ್ತು. ಇದನ್ನು ಸರಿದೂಗಿಸಿಕೊಳ್ಳಲು ಈ ಬಂಧಿಯಾಗಿರುವುಕ್ಕಂತ ಆ ಚಲುವಾದಿಯೊಂದಿಗೆ ಕೂಡಿ ಬಾಳುವುದು ಲೇಸು ಇಲ್ಲವೇ ಸಾಯುವುದೇ ಮೇಲೆಂದು ಈ ರೀತಿ ಹೇಳಬೇಕೆಂದು ನಿಶ್ಚಯ ಮಾಡಿಕೊಂಡಳು.

ಇಲ್ಲಿ ಮೇಲುವರ್ಗದವರು ಮತ್ತು ಕೆಳವರ್ಗದವರ ನಡುವಿನ ಜಾತಿ ಸಮಸ್ಯೆ ಎದ್ದು ಕಾಣುವುದು. ಕೇವಲ ಚಲುವಾದಿಯವರು ಗೀತಾಳನ್ನು ಕೈ ಹಿಡಿದು ಅಪ್ಪಿಕೊಂಡಿದ್ದಕ್ಕೆ ಅವಳನ್ನು ಬಂಧಿಯಾಗಿಸಿರುವುದು. ಅಂದರೆ ಅವಳು ಕೀಳು ಕುಲದವರನ್ನು ಮುಟ್ಟಿಸಿಕೊಂಡು ಮೈಲಿಗೆಯಾದಳು ಎಂದು, ಆದರೆ ಊರಿನ ಆ ಶಾನುಭೋಗ ಕೇರಿಯ ಹಿರಿಯರು, ದಲಿತರ ಹೆಣ್ಣು ಮಕ್ಕಳೊಂದಿಗೆ ಲೈಂಗಿಕ ಸಂಭೋಗ ಹೊಂದುವಾಗ, ಇವರು ದಲಿತರು, ಇವರನ್ನು ಮುಟ್ಟಿದರೆ ನಾವು ಮೈಲಿಗೆಯಾಗುತ್ತೇವೆ ಎಂಬ ಪ್ರಜ್ಞೆ ಇರುವುದಿಲ್ಲವೇ? ಅಥವಾ ಮೇಲುವರ್ಗದವರು ಏನು ಮಾಡಿದರೂ ನಡೆಯುತ್ತದೆ ಎಂಬ ದೌರ್ಜನ್ಯ, ಬಲಾತ್ಕಾರ, ಶೋಷಣೆ, ಮುಂತಾದವುಗಳನ್ನು ಮಾಡುವ ಸರ್ವಾಧಿಕಾರವೇ? ಎಂಬ ಅಂಶಗಳೇಳುವುವು.

ಮೇಲುವರ್ಗದವರಿಂದ ಆಗುವ ಅನೇಕ ಶೋಷಣೆಯ ಸಂದರ್ಭದಲ್ಲಿ, ಈ ಚಲುವಾದಿಯ ಹುಡುಗನಂತೆ ಪ್ರತಿಭಟನೆಯ ಮಾತುಗಳು, 'ನಾವು ನಿಮ್ಮಂತೆ ಮನುಷ್ಯರು' ಎಂದು ವ್ಯಂಗ್ಯದ ಮಾತುಗಳು ಬರುವುದನ್ನು ನಾವು ಇಲ್ಲಿ ನೋಡಬಹುದು.

ಮನಸು ಮುಗಿಲು:

ಅವಲಂಬನೆ: ಬಡತನ ಮತ್ತು ನಿರುದ್ಯೋಗದ ಸಮಸ್ಯೆ, ಹಸಿವಿನ ಸ್ಥಿತಿ-ಗತಿಗಳನ್ನು ಕುರಿತು ಈ ಕಥೆಯು ಚಿತ್ರಿಸುತ್ತದೆ.

ಬಡತನದಲ್ಲಿ ಹುಟ್ಟಿ ಉದ್ಯೋಗವಿಲ್ಲದೆ ಇರುವ 'ಚಲುವನು ಮಾಲೀಕ ಪುಟ್ಟಪ್ಪನ ಬಳಿ ಇದ್ದು, ಅವರು ಕೊಡುವ ಇಡ್ಲಿಗಳನ್ನು ನಸಿಕಿನ ಜಾವ ಬೆಳಿಗ್ಗೆ ರೈಲು ಹೋಗುವ ಮುಂಚೆ ಸ್ಟೇಷನ್‌ಗೆ ಬಂದು, ಅಲ್ಲಿ ಆಟೋ ಡ್ರೈವರ್‌ಗಳಿಗೆ, ಜಟಕಾ ಹೊಡೆಯವರಿಗೆ ಇಡ್ಲಿಗಳನ್ನು ಮಾರಿಕೊಂಡು ಬಂದು, ಮಾಲೀಕನಿಗೆ ಕೊಟ್ಟು, ತಾನೂ ಅವರಿಂದ ಕಮೀಷನ್ ತಗೊಂಡು ಮನೆಗೆ ಹೋಗುತ್ತಿದ್ದನು. ಇದರಿಂದ ಮನೆಯಲ್ಲಿ ತಾನು, ತಂದೆಯವರು ಜೀವನ ಸಾಗಿಸುತ್ತಾ ಇದ್ದರು.'

ಹೀಗಿರುವಾಗ ಒಂದು ದಿನ ತಾನು ಇಡ್ಲಿ ಮಾರುವುದಕ್ಕೆ ಬರುವ ಮುಂಚೆ ರೈಲು ಹೋಗಿದ್ರು ತನಗೆ ಇದು ಗೊತ್ತಾಗದಿದ್ದರಿಂದ ಸ್ಟೇಷನ್‌ಗೆ ಬಂದಿದ್ದನು. ಅಂದು ಇಡ್ಲಿ ಖಾಲಿಯಾಗಲಿಲ್ಲ. ಆಗ ಅಲ್ಲಿ ಇದ್ದ ಗಾರ್ಡ್, ಮುದುಕಿಯರು ವಿನಂತಿಯಿಂದ ಕೇಳಿ ತಿಂದರು. ಮುದುಕಿ ನಾಳೆ ನಿನ್ನ ಸಾಲ ತೀರಿಸುವೆನು ಎಂದು ಹೇಳಿದಳು. ಗಾರ್ಡ್ ಹಣಕೊಡದೆ ಹಾಗೇ ಹೋದನು.

ಇಲ್ಲಿ ಪ್ರಮಾಣಿಕನಾಗಿರುವ ಚಲುವನಿಗೆ ಗಾರ್ಡು ತನ್ನ ಅಧಿಕಾರವನ್ನು ದೌರ್ಜನ್ಯದಿಂದ ಬಳಸುವುದನ್ನು ಕಾಣಬಹುದು. ಹಾಗೆಯೇ ಚಲುವನು ಆ ಇಡ್ಲಿ ಪೆಟ್ಟಿಗೆಯನ್ನು ಹೊತ್ತುಕೊಂಡು ರಸ್ತೆ ರಸ್ತೆಯಲ್ಲಿ ಅನೇಕ ಜನರನ್ನು ಇಡ್ಲಿ ತಗೊಳ್ಳಿ ಎಂದು ಕೇಳುವುದು– ಇವನ ಬಡತನ ಹಸಿವಿನ ತೀವ್ರತೆಗಳನ್ನು ವ್ಯಂಗ್ಯವಾಗಿ ತಿಳಿಸುವುದಲ್ಲದೆ ಅವನ ಸೂಕ್ಷ್ಮತೆಯನ್ನು ತಿಳಿಸುವುದು.

ಹಮೀದಾಯಣ: ದೂರ್ದಳ್ಳಿಯ ಹಮೀದನು ಬೇರೆ ಜಾತಿಯ ಹೆಣ್ಣನ್ನು ವಿವಾಹವಾಗಿದ್ದನು. ಇದರಿಂದ ಊರಲ್ಲಿ ಆಗುವ ಗಲಬೆಗಳಿಂದ ತಪ್ಪಿಸಿಕೊಳ್ಳಲು ಹಮೀದನ ತಾಯಿ ಅವರನ್ನು "ಎಲ್ಲಾರ ಹೋಗಿ ಬದುಕೊಳ್ಳಿ"[೧೮] ಎಂದು ಕಳಿಸಿದಳು.

ಹಾಗೆಯೇ ಇವರು ಜೀವನ ಸಾಗಿಸುತ್ತಾ ನಗರಕ್ಕೆ ಬಂದಿದ್ದರು. ನಗರದಲ್ಲಿನ ಒಂದು ಕಾರ್ಯಕ್ರಮದ ಬಳಿ ಸಹಾಯಕರಾಗಿ ಕೂಲಿಗೆ ಸೇರಿಕೊಂಡರು. ಮೂರು ದಿನದ ತರುವಾಯ ಕೂಲಿಯನ್ನು ಕೊಡುತ್ತೇವೆಂದು ಅಲ್ಲಿನ ಹಿರಿಯ ಅಧಿಕಾರಿ ಹೇಳಿದ್ದನ್ನು ನಂಬಿ ಅಲ್ಲಿಯೇ ಮೂರು ದಿನ ತಂಗಿದ್ದರು.

ಕಾರ್ಯಕ್ರಮ ನಡೆಯುವಾಗ ನೀರಿನ ಮಡಿಕೆಯು ಬೀಳುವುದನ್ನು ಹಮೀದನು ಹೋಗಿ ಹಿಡಿದುಕೊಂಡನು. ಇದರಿಂದ ಭಾಷಣಾಕಾರ ಮುಖ್ಯ ಅತಿಥಿಗೆ ಮಾತೇ ಬರದೇ ನಿಂತೋಯಿತು. ಪೋಲಿಸರು ಹಮೀದನ್ನು ಹೊಡೆಯುತ್ತಾ ಕಾರ್ಯಕ್ರಮದ ಹೊರಗಡೆ ಎಳೆದೊಯ್ದರು. ಕಾರ್ಯಕ್ರಮ ಮುಗಿದ ನಂತರ ಹಮೀದ ಮತ್ತು ಹೆಂಡತಿ, ಚಿಕ್ಕ ಮಗಳು ತಮ್ಮ ಕೂಲಿಗಾಗಿ ಹೊರಗಡೆ ಆ ಬೆಂಗಳೂರಿನ ಹಿರಿಯ ಅಧಿಕಾರಿಯನ್ನು ಕಾಯುತ್ತಾ ಕುಳಿತರು.

ಇಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅನ್ಯ ಜಾತಿಯವಳನ್ನು ವಿವಾಹವಾದ ಹಮೀದನು. ಇದರಿಂದಾಗಿ ಅನುಭವಿಸಿದ ತೊಂದರೆಗಳು, ಜೀವನ ಸಾಗುವ ರೀತಿಗಳನ್ನು ಕುರಿತು ಇಲ್ಲಿ ನಾವು ಕಾಣುತ್ತೇವೆ.

ಕಿವಿ ಮೇಲಿನ ಕೂದಲು: ಉದ್ಯೋಗವಿಲ್ಲದೇ ಅಲೆದು ಕೊನೆಗೆ ಒಂದು ಸೆಲ್ಯೂನ್ ಅಂಗಡಿಯಲ್ಲಿ ಕೂಲಿ ಕೆಲಸಕ್ಕೆ ಸೇರಿಕೊಂಡಾಗ, ಅಲ್ಲಿಗೆ ಬಂದ ಒಬ್ಬ ಅಧಿಕಾರಿಗೆ ಹೇರ್ ಕಟ್ಟಿಂಗ್ ಮಾಡಿ ಗುರುತು ಪರಿಚಯವಾದನು. ಈ ಆಫೀಸ್‌ನೋರು ನಿರುದ್ಯೋಗಿಗಳಿಗೆ ಉದ್ಯೋಗ ಕೈಗೊಳ್ಳಲು ಸಾಲ ಕೊಡುತ್ತೇವೆಂದು ಪತ್ರಿಕೆಯಲ್ಲಿ ಪ್ರಕಟಿಸಿದ ವಿಷಯವನ್ನು ತಿಳಿದು, ಆ ಕ್ಷೌರಿಕ ಹುಡುಗ ಈ ಸರ್ ಕಡೆ ಬಂದು ವಿನಯದಿಂದ ಸಾಲ ಕೇಳುತ್ತಾನೆ.

ತಾನೂ ಎಂ.ಎಸ್ಸಿ ಮುಗಿಸಿ ೦೫ ವರ್ಷಗಳಾಗಿವೆ. ಸರ್ ಕೆಲಸವಿಲ್ಲದೆ ಈಗ ನಾನು ಒಂದು ಸ್ವಂತ ಸೆಲ್ಯೂನ್ ಶಾಪ್ ಇಡಬೇಕೆಂದು ತಮ್ಮಿಂದ ಸಹಾಯ ಕೇಳಲು ಬಂದಿರುವೆ ಎಂದು ವಿನಯದಿಂದ ಕೇಳಿಕೊಳ್ಳುವನು.

ಇಲ್ಲಿ ವಿದ್ಯೆಗೆ ತಕ್ಕಂತ ಉದ್ಯೋಗವಿಲ್ಲದೆ, ಇರುವ ಸ್ಥಿತಿಯನ್ನು ನೋಡುತ್ತೇವೆ. ಇಂತಹ ಅದೆಷ್ಟೋ ವಿದ್ಯಾವಂತ ನಿರುದ್ಯೋಗ ಯುವಕ ಯುವತಿಯರು ಗಾರೆಕೆಲಸಗಳಿಗೆ, ಗಾರ್ಮೆಂಟ್‌ಗಳಲ್ಲಿ, ಹೋಟಲ್ ಸೇವೆಕಿರಾಗಿ, ಕಂಪನಿಗಳಲ್ಲಿ ಜವಾನರಾಗಿ ಅನೇಕ ಹೊಲಗಳಲ್ಲಿ ರೈತರಾಗಿ ದುಡಿಯುತ್ತಾ ಇರುವುದರಿಂದ ಅವರ ವಿದ್ಯೆಯ ನೈಪುಣ್ಯತೆಯು ನಾಶವಾಗುವುದನ್ನು ನಾವು ನಮ್ಮ ಭಾರತದೇಶದಲ್ಲಿ ಕಾಣುತ್ತಿದ್ದೇವೆ.

ಈ ಕಥೆಯಲ್ಲಿನ ಎಂ.ಎಸ್ಸಿ. ಸ್ನಾತಕೋತ್ತರ ಪದವಿದರನಾಗಿದ್ದು ಉದ್ಯೋಗವಿಲ್ಲದೇ, ತನ್ನ ಬಡತನ ಹಸಿವು ನೀಗಿಸಿಕೊಳ್ಳಲು ಕ್ಷೌರದ ಅಂಗಡಿಯಲ್ಲಿ ಕೂಲಿ ಕೆಲಸಕ್ಕೆ ಸೇರುವುದನ್ನು ಕಾಣುತ್ತೇವೆ.

ಆಮೆಮಣ್ಣಿನಂಗಣದ ಅಂಗಾರ: ಈ ಕಥೆಯು ಗ್ರಾಮೀಣ ಜನರ ಮೆಚ್ಚಿನ ಆಟವಾದ ಬಯಲಾಟವನ್ನು ಕುರಿತು ತಿಳಿಸುವುದು.

ಸೂರಸೇಕರ ಮತ್ತು ಲಕ್ಷ್ಮೀ, ಮೊಗಣ್ಣ ಮಲ್ಲಾಜೀಯವರು ದಂಪತಿಗಳು ಇದರಲ್ಲಿ ಸೂರಸೇಕರನು ಮಲ್ಲಾಜೀಯನ್ನು ಅವಳ ಮದುವೆಯಲ್ಲಿ ಮೆರವಣಿಗೆ ಕೂಲಿ ಕೆಲಸಕ್ಕೆ ಬಂದಾಗ ಇವಳನ್ನು ಆಸೆ ಪಟ್ಟಿರುತ್ತಾನೆ.

ಊರಿನಲ್ಲಿ ಎಲ್ಲಾರು ಸೇರಿ ಬಯಲಾಟ ಆಡಲು ತೀರ್ಮಾನಿಸಿ ಅದರಲ್ಲಿ ಕೀಚಕನ ಪಾರ್ಟು ಸೂರಸೇಕರನು, ಮೊಗಣ್ಣನು ಸೈರೇಂಧ್ರಿಯ ಪಾರ್ಟು ಮಾಡುತ್ತಾರೆ. ಬಯಲಾಟದಲ್ಲಿ ಮಲ್ಲಾಜೀಯ ಸೀರೆಯನ್ನು ಉಟ್ಟುಕೊಂಡು ಬಂದಿದ್ದರಿಂದ ಕೀಚಕನಿಗೆ ಮಾತುಗಳೇ ಬದಲಾದವು. ಆ ಮಾತುಗಳೆಂದರೆ– "ಓ! ಲಲನಾಮಣಿ, ವರ್ಸವೊಪ್ಪತ್ತಿನಿಂದಲೂ ನನ್ನ ಮನದೋಳಗೆ ಕೀಡೆ ಹುಳುವಿನಂಗೆ ಹೊಕ್ಕಿಕೊಂಡ ನಿನ್ನ ರೂಪಕ್ಕೆ ಮಾರುಹೋಗಿ ಇಲ್ಲೀವರೆಗೆ ಸೈಸಿಕೊಂಡೆ, ಇನ್ನು ಅದಾಗದು ನೀರೆ; ಬಾ ಹೆಣ್ಣೆ; ಬಾ ಸುಂದರಿ.... ಸನಿಹ ಬಂದು ನಿನ್ನಾಸೆ ಪೂರೈಸು" ಎಂದಾಗ ಮೊಗಣ್ಣ ಕಕ್ಕಾ ಬಿಕ್ಕಿಯಾದ. "ಅಯ್ಯಯ್ಯೋ ಸೂರಣ್ಣ, ಇದೇನು ಮಾತಾಡ್ತ ಇದ್ದೀಯಣ್ಣ.... ಹಂಗಲ್ಲ ಕನಣ್ಣ...." ಮತ್ತಷ್ಟು ಆಪ್ತವಾಗಿ "ಓ ಮಲ್ಲಾಜಿ.... ಇನ್ನೇನು

ಹೇಳ್‌ಬ್ಯಾಡ್...ನಿನ್ ಮುಂದೆ ಎಲ್ರುನೂ ನೀವುಳಿಸಿ ಹಾಕ್‌ಬೇಕು. ಅಥವಾ ಹೆಣ್ಣು ನೀನು. ನನ್ ಮನ್ಸು ಹೆಂಗೆ ಅಂತ ಇನ್ನೂ ನಿಂಗೆ ಹೆಂಗೆ ವರ್ಣಸ್ಲಿ ಹೇಳು.... ಬಾ ನಿನ್ನೋಟು ಚೆಂದಾಗಿರೊ ಹೆಣ್ಣ ನನ್ನಪ್ಪನಾಣೆಗೂ ನಾನು ಕಾಣ್ನಿಲ್ಲ. ಹಿಂಗೇ ನಿನ್ನಾ.... ನಿನ್ನಾ.....”[೧೯]

ಇದರಿಂದಾಗಿ ನಾಟಕದ ಮೇಸ್ತ್ರು ಕೆಂಗಣ್ಣು ಬಿಟ್ಟರು. ಮೇಲಕ್ಕೆ ಓಡಿ ಬಂದರು, ಸೂರಸೇಕರ ಬೆವತು ಹೋಗಿದ್ದನು. ನಾಟಕ ಅನಂತರ ಮುಂದುವರೆಯಿತು.

ವಾಸನಾಮಯ ಬದುಕಿನ ಆಚೆ–ಈಚೆ:

ದಾವರ: ಜವರನನ್ನು ಅವನ ತಂದೆ ಊರಿನ ಹನುಮಂತಪ್ಪನ ಮನೆಯಲ್ಲಿ ಎಮ್ಮೆ ಕಾಯುವುದಕ್ಕೆ ಇಟ್ಟಿರುತ್ತಾನೆ. ಆದರೆ ಜವರನಿಗೆ ಊರಿನ ಇತರ ಹುಡುಗರಂತೆ ತಾನು ಶಾಲೆಗೆ ಹೋಗಬೇಕು. ಅಕ್ಷರಗಳನ್ನು ಕಲಿಯಬೇಕು ಎಂಬ ಆಸೆಯಿಂದ ಎಮ್ಮೆಯನ್ನು ಶಾಲೆಯ ಹಿಂದಗಡೆ ಮೇಯಿಸಲಿಕ್ಕೆ ಬಿಡುವುದು. ತಾನು ಶಾಲೆ ಓಳ ಹೋಗಿ ಆ ಮಕ್ಕಳೊಂದಿಗೆ ಬೆರೆಯುವುದು. ಹೀಗೀರುವಾಗ ದ್ಯಾವ್ರಾಜನು– ‘ಇಸ್ಕೂಲಿಗೆ ಸೇರ್ದೆ ಒಳಕ್ಕೆ ಕಾಲಿಡಬೇಡ’ ಅಂತೇಳಿ ಹೊರಗಡೆ ನೂಕಿದನು. ಈ ವಿಷಯವನ್ನು ಜವರನು ಮನೆಗೆ ಬಂದು, ತಂದೆ–ತಾಯಿಯರಿಗೆ ತಿಳಿಸಿದನು. ಹಾಗೂ ನನ್ನನ್ನು ಇಸ್ಕೂಲ್ಗೆ ಸೇರಿಸಿ ಅಂತಾ ಕೇಳಿಕೊಂಡನು. ಆದರೆ ಇದಕ್ಕೆ ತಂದೆ ಒಪ್ಪದೆ ಮಗನನ್ನು ಹೊಡೆಯುತ್ತಾ ಹೊರ ಹೋದನು. ಇತ್ತ ತಾಯಿ ಸಮಾದಾನಿಸುತ್ತ ಮಗನನ್ನು ತಬ್ಬಿಕೊಳ್ಳುವಳು.

ಜವರ ಎಮ್ಮೆ ಹೊಡೆದುಕೊಂಡು ಶಾಲೆ ಮುಂದೆ ಬರುವಾಗ, ಒಂದು ದಿನ ದ್ಯಾವ್ರಜನ ಸಿಲೇಟು–ಪುಸ್ಕ ಕದ್ದು ತಂದನು. ದ್ಯಾವ್ರಜನು ಜವರನ ಮನೆಗೆ ಬಂದು ಜಗಳ ಮಾಡಿ, ನಿಮ್ಮ ಜವರನು ನನ್ನ ಸಿಲೇಟು–ಪುಸ್ಕ ಕಳ್ಳತನದಿಂದ ತಂದಿರುವನು ಎಂದು ಪರಿಪರಿಯಾಗಿ ಹೇಳಿದರು. ಮಗನ ಮೇಲಿನ ವಾತ್ಸಲ್ಯದಿಂದ ಒಪ್ಪದ ಜವರನ ತಾಯಿ ಕೊನೆಗೆ ಜವರನ್ನೇ ಕೇಳಿದಾಗ, ಅವನು ತಾಯಿಯನ್ನು ತಬ್ಬಿಕೊಂಡು “ಹೂಕನೌವ್ವ”[೧೯] ಎಂದನು. ಅವರಿಬ್ಬರೂ ಕಳ್ಳನ ಹಿಡಿದ ಭರದಲ್ಲಿ ‘ಕೇಳ್ದಾ ಮಾ ಮಂತಾನಸ್ತಳಂಗೆ ಮಾತಾಡ್ತಿದ್ದೆ ಕೇಳು ಕೇಳು...!’ ಅಂತ ಒಟ್ಟಿಗೇ ಅರಚಿಕೊಂಡರು. ಜವರನು “ಇನ್ನೊಂದ್ಕಿತ್ತೆ ಹಿಂಗೆ ಮಾಡಾಕ್ಕಿಲ್ಲ ಕನವ್ವ”[೨೦] ಎಂದು ತಾಯಿಯನ್ನು ತಬ್ಬಿಕೊಂಡ.

ಈ ಕಥೆಯು ಬಾಲಕ ಜವರನ ಶಾಲೆಗೆ ಸೇರಬೇಕು ಎಂಬ ಆಸಕ್ತಿಯನ್ನು ತೋರಿಸುತ್ತದೆ. ತನ್ನ ತಂದೆಯು ತನ್ನನ್ನು ಬೇರೆಯವರ ಮನೆಯಲ್ಲಿ ಎಮ್ಮೆ ಕಾಯುವುದಕ್ಕೆ ಬಿಟ್ಟಿದ್ದರು, ತಾನು ಶಾಲೆಯ ಹತ್ತಿರ ಎಮ್ಮೆ ಮೇಯಿಸುತ್ತಾ, ತಾನು ಶಾಲೆಯ ಒಳಗಡೆ ಹೋಗಿ ಮಕ್ಕಳೊಂದಿಗೆ ಬೆರೆತುಕೊಳ್ಳುತ್ತಿದ್ದನು. ಕೊನೆಗೆ ಇವನಲ್ಲಿ ಶಾಲೆಗೆ ಹೋಗಬೇಕು, ನಾನು ಆ ಮಕ್ಕಳಂತೆ ಅಕ್ಷರ ಕಲಿಯಬೇಕೆಂದು, ದ್ಯಾವ್ರಜನ ಇಂದಿಗೂ ಸಿಲೇಟು-ಪುಸ್ತಕಗಳನ್ನು ಕದ್ದು ಮನೆಗೆ ತರುವನು. ಇಂತಹ ಎಷ್ಟೋ ಮಕ್ಕಳು ನಮ್ಮ ದೇಶದಲ್ಲಿ ಇಂದಿಗೂ ಇದ್ದು, ಅವರಿಗೆ ಒಂದು ದಿನಕ್ಕೆ ಒಂದೊತ್ತಿನ ಊಟಕ್ಕೆ ಇಲ್ಲದೇ ಇವರು ಶಾಲೆಗೆ ಹೋಗದೆ ಇರುವರು. ಇವರು ಇಂದು ಕಾರ್ಖಾನೆಗಳ ಕೆಲಸಗಳಲ್ಲಿ, ಹೋಟೆಲ್‌ಗಳಲ್ಲಿ, ಭಿಕ್ಷಾಟನೆಗಳಲ್ಲಿ, ಗಾರೆ ಕೆಲಸಗಳಲ್ಲಿ, ಜೀತದಾಳುಗಳಾಗಿ ಇನ್ನು ಮುಂತಾದ ಕೆಲಸಗಳಲ್ಲಿ ತಮ್ಮ ಹಸಿವಿನ ನೀಗತೆಗಾಗಿ ಕೈಗೊಂಡಿದ್ದಾರೆ.

ಈ ಕಥೆಯು ಒಂದು ಹಳ್ಳಿಯ ಅವಿದ್ಯಾವಂತ ಕುಟುಂಬದ ಬದುಕಿನ ಚಿತ್ರಣದ ಜೊತೆ ಜೊತೆಗೆ ಈ ಕುಟುಂಬದಲ್ಲಿ ಒಬ್ಬನಾದ ಬಾಲಕ ಜವರನಿಗೆ ಶಾಲೆಗೆ ಸೇರಬೇಕೆಂದು ಇರುವ ಆಸಕ್ತಿಯನ್ನು ಕುರಿತು ಚಿತ್ರಿಸುತ್ತದೆ. ಜವರನ ಬಡತನವೇ ಅವನಿಗೆ ಶಾಲೆಗೆ ಹೋಗಲು ಸಾಧ್ಯವಾಗದಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಅಲ್ಲದೇ ನಮ್ಮ ದೇಶದ ಅಸಂಖ್ಯಾತ ಮಕ್ಕಳು ಅವರ ಪೋಷಕರ ಅಜ್ಞಾನ, ಬಡತನದ ಕಾರಣದಿಂದ ಇಂತಹ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ.

ಹುಚ್ಚೀರಿಯ ಎಸರಿನ ಪ್ರಸಂಗ: ಈ ಕಥೆಯು ಹಳ್ಳಿಯಲ್ಲಿನ ಅತ್ತೆಯ ಕಿರುಕುಳದಿಂದಾಗಿ ಮಗನು ತನ್ನ ಹೆಂಡತಿ ಹುಚ್ಚೀರಿ ಮತ್ತು ಮಗಳು ಲಚುಮಿಳನ್ನು ಬೇರೆ ಮನೆಯಲ್ಲಿಟ್ಟು ಮಗ-ತಾಯಿಯರು ಒಂದು ಕಡೆ ವಾಸಿಸುವ, ಹುಚ್ಚೀರಿಯ ಮಗಳ ಆಸೆಯ ಈಡೇರಿಕೆಗೆ ತಾಯಿಯು ಪಡುವ ಕಷ್ಟಗಳು, ಅನುಭವಿಸುವ ತೊಂದರೆಗಳನ್ನು ಕುರಿತು, ಕಥೆಗಾರರು ಒಂದು ಹಳ್ಳಿಯ ನೈಜ ಬದುಕಿನ ಚಿತ್ರಣವೇ ನಮ್ಮ ಮುಂದೆ ನಡೆಯುತ್ತಿದೆಂಬಂತೆ ಇಲ್ಲಿ ಚಿತ್ರಿಸಿರುವುದನ್ನು ನಾವು ಕಾಣುತ್ತೇವೆ.

ತಾಯಿಯ ಕಿರುಕುಳವನ್ನು ತಾಳಲಾರದೆ ಮಗ ತನ್ನ ಹೆಂಡತಿಯನ್ನು ಬೇರೆ ಹಾಕಿದನು. ಬೇರೆ ಇರುವ ಹುಚ್ಚೀರಿಯ ಬಡತನ, ಕಿತ್ತು ತಿನ್ನುವಂತೆ ಹಸಿವು ಮತ್ತು ಚಿಕ್ಕ ಮಗಳು ಲಚುಮಿಯನ್ನು ಕಟ್ಟಿಕೊಂಡು ಕೂಲಿ ಮಾಡಿ ಜೀವನ ಸಾಗಿಸುತ್ತಿರುವಳು.

ಹಟ್ಟಿಗೌಡ್ರ ಮನೆಯಲ್ಲಿ ನೋಡಿದ ಕೋಳಿ ಕುಯ್ತಾವದನ್ನು ತಾಯಿಗೆ ಲಚುಮಿ "ಅವ್ವಾ ಅವ್ವಾ ಮಂತೆ ಮಂತೆ ಹಟ್ಟಿಗೌಡರ ಮನೇಲಿ ಕೋಳಿ ಕುಯ್ತಾ ಅವ್ರೆ"[೨೧] ಎಂದು ಹೇಳಿದಕ್ಕೇ ತಾಯಿ ಮೋರೆಯಲ್ಲಿ ಸಂತೋಷ ಉಂಟಾಯಿತು. ಕೋಳಿ ಎಸರು ಉಂಡು ಎಷ್ಟೋ ಕಾಲವಾಗಿತ್ತು. ತಿನ್ನೋಣ ಎಂದು, ಅದಕ್ಕೆ ಅಕ್ಕಿಯನ್ನು ಮಾಟಪ್ಪ ಮನೆಯಲ್ಲಿ ಅರ್ಧಸೇರು ಅಕ್ಕಿ ತಂದಳು. ("ಅಕ್ಕ ಒಂದ್ ಪಾವು ಅಕ್ಕಿ ಕೊಡು ಇಲ್ಲದಿದ್ರೆ ಬತ್ತನಾದ್ರು ಕೊಡು. ನಾಳಿಕ್ಕೆ ತೋಟದ ಕೆಲ್ಸಕ್ಕೆ ಬಂದು ತೀರುಸ್ತೀನಿ. ಇಲ್ಲಾಂದ್ರೆ ಮಂಗಳಾರದ ಸಂತಿಂದಾದ್ರೂ ತಂದ್ಕೊಡ್ತೀನಿ")

ಅತ್ತ ಮಗಳು ಲಚುಮಿ ಸೌದೆಪುಳ್ಳೆ ತಂದಿದ್ದಳು. ಮೊದಲು ಅನ್ನ ಮಾಡಿದರು. ರಾಗಿ ಮುದ್ದೆ ಮಾಡಿದರು. ಮುಸ್ಸಂಜೆ ಯಾಗೊ ಹೊತ್ತಿಗೆ ಅವ್ವ ಮಗಳಿಬ್ಬರೂ ಹಟ್ಟಿಗೌಡರ ಮನೆ ಕೋಳಿ ಎಸರಿಗಾಗಿ ಎಲ್ಲವನ್ನು ಸಿದ್ಧಮಾಡಿಕೊಂಡರು. ಹುಚ್ಚೀರಿ ಎಸರು ತರಲು ಬಟ್ಟಲನ್ನು ತಗೊಂಡು ಗೌಡ್ರ ಮನೆ ಕಡೆಗೆ ಹೊರಟಳು.

ಹಟ್ಟಿಗೌಡರದು ಮಕ್ಕಳು ಮರಿ ಸೊಸೆಯರು ಅಂತ ಸುಮಾರು ಇಪ್ಪತ್ತೈದು ಜನ ಇರುವ ದೊಡ್ಡ ಸಂಸಾರ. ಇವರ ಮನೆಯಲ್ಲಿ ಊಟಕ್ಕೇನು ಕೊರತೆ ಇಲ್ಲ. ಹುಚ್ಚೀರಿ ತನಗೆ ಏನಾದರು (ಎಸರು, ಬೆಂಕಿ ಮಜ್ಜಿಗೆ) ಬೇಕಾದರೆ ಇಲ್ಲಿಗೆ ಬರುವಳು. ಹಿರಿಯೋರು ಅಯ್ಯೋ ಗಂಡ ಬಿಟ್ಟ ಹೆಣ್ಣು ಅಂತ ಬಂದಾಗೆಲ್ಲ ಕೇಳಿದ್ದು ಕೊಡ್ತಾರೆ. ಆದರೆ ಸೊಸೆಯರು, ಮಕ್ಕಳು ಮಾತ್ರ ಕೊಂಕು ನುಡಿ ನುಡಿದೇ ಕೊಡೋದು. ಮನೆಯೊಳಗಡೆ ಬಂದ ಹುಚ್ಚೀರಿ ಬಾಗಿಲ ಬಳಿ ನಿಂತಿದ್ದನ್ನು ನೋಡಿ, ಗೌಡ್ರ ಕಿರಿಸೊಸೆ ಹೆದರಿ "ಅಯ್ಯೊ ನಿನೌವುಸ್ಸಾಳಾಗ ಇಲ್ಲ್ಯಾಕೆ ನಿಂತಿದ್ದಿ ಒಳ್ಳೆ ಭೂತದಂತೆ? ಯಾಕೆ ಬಂದಿದ್ದೆ?"[೨೨] ಎಂದು ಕೇಳಿದಾಗ ಹುಚ್ಚೀರಿ "ಒಂಚೂರು ಎಸರಾದ್ರು ಈಸ್ಕೊಂಡು ಹೋಗಾನೇ ಅಂತ ಬಂದೆಕನೆ ಪುಣ್ಯಾತ್ಗಿತ್ತಿ ಅದ್ಕೆ ಯಾಕಿಂಗೆ ರೇಗಿತಿ" ಅಂದಳು. ಆಗ ಕಿರಿಸೊಸೆ ಇನಷ್ಟು ರೇಗಿ "ನಿಂಗೇನು ಕೇಮಿಲ್ವಾ? ಯಾವತ್ತು ಏನೇನು ಮಾಡ್ತಿರ್ತಾರೆ ಅಂತಲೇ ಕಾಯ್ತೀರ್ತಿಯೋ ಹೆಂಗೆ? ಯಾಲೆ ಎಸರು ಮಾಡಿ ಮಡಗವ್ರೆ ನಿಂಗೆ, ಅಡ್ರುಸ್ತಾರೆ ತಾಳು" ಅಂದಳು, ಮತ್ತೆ ಅಬ್ಬರಿಸಿದರಿಂದ ಹುಚ್ಚೀರಿಯ ಮುಖ ಚಿಕ್ಕದಾಯಿತು. ಆದರೆ ಹಜಾರದವರೆಲ್ಲಾ ಇತ್ತಲಾಗೇ ನೋಡುತ್ತಿದ್ದರು. ಇದರಿಂದ ಸಿಟ್ಟಿಗೆ ಬಂದ ಹುಚ್ಚೀರಿ "ಗತಿಗೆಟ್ಟದ್ದು ಬಂತು ಅಂತ ಬಾಯಿಗೆ ಬಂದಂಗೆ ಯಾಕೆ ಅಂತಿ? ಇಲ್ಲನ್ನು ಅದ್ಕೇನಂತೆ ಹೋಯ್ತಿನಿ" ಎಂದಾಗ ಗೌಡ್ರು ಒಳಗಿಂದ "ಒಂಚೂರು ಕೊಡು ಬಾ" ಎಂದುದರಿಂದ ಎಸರು

ಕೊಟ್ಟರು. ಅದನ್ನು ತಗೊಂಡು ಹುಚ್ಚೀರಿ ಮನೆ ಕಡೆಗೆ ಬಂದಳು. ಅವ್ವ ಬರುವುದನ್ನು ನೋಡಿ ಲಚುಮಿ ಉತ್ಸಾಹದಲ್ಲಿ ಬಂದವಳೇ "ಕೊಟ್ರವ್ವ? ಎಲ್ಲಿ ಏಟು ಕೊಟ್ಟವ್ರೆ ನೋಡ್ತಿನಿ" ಎಂದವಳೇ ಅವ್ವನ ಕೈಯಿಂದ ಬಟ್ಟಲು ಕಿತ್ತುಕೊಳ್ಳಲು ಹೋದಾಗ ಕೈಯಿಂದ ಎಸರು ಜಾರಿ ಕೆಳಕ್ಕೆ ಬಿತ್ತು.

ಬಿದ್ದ ಒಂದೇ ಮಣ್ಣಿನ ಚೂರು ಚೂರಾಗಿ ಹೋಯಿತು. ಎಸರು ಮನೆ ತುಂಬ ಚೆಲ್ಲಿತು. ಇಬ್ಬರೂ ಮಗಳು ನಿರಾಶೆಯಿಂದ, ತಾಯಿ ಅವಮಾನದಿಂದ ಇರುವಾಗ ಕತ್ತಲು ಆವರಿಸಿತು.

ಹಸಿವು: ಈ ಕಥೆಯ ಮಲತಾಯಿಯು ಯಲ್ಲನನ್ನು ಹೇಗೆ ನೋಡಿಕೊಳ್ಳುತ್ತಿದ್ದಳು, ಈ ಯಲ್ಲನು ಮಲತಾಯಿಯಿಂದ ಅನುಭವಿಸಿದ ತೊಂದರೆಗಳನ್ನು ಕುರಿತು ಇಲ್ಲಿ ವಿವರಿಸಲಾಗಿದೆ.

ನಾಲೆಯ ಗುಂಡಿಯ ತೋಡಲು ಹೋಗಿದ್ದ ಯಲ್ಲನು ರಾತ್ರಿ ಮಿಕ್ಕಿದ ಹಿಟ್ಟಿನ ಬುತ್ತಿ ತಂದಿದ್ದ. ಅದು ಹಳಸಿ ನೀರಾಗಿತ್ತು. ಶಕ್ತಿಯಿಲ್ಲದೆ, ಮಣ್ಣು ಹೊತ್ತುಕೊಂಡು ಮೇಲೆರಲಾಗದೇ ಕುಳಿತನು. ಉಸಿರು ತೆಗೆದುಕೊಳ್ಳೋದು ಕಷ್ಟವಾಯಿತು. ಇವನನ್ನು ನೋಡಿ ನಂಜಿ ಬಂದು "ಯಾಕಪ್ಪ ಯಲ್ಲ, ಏನಾದ್ರು ಪೆಟ್ಟಾಯ್ತಾ? ಯಾಕೆ ನಡುಗ್ತಾ ಇದ್ದಿ?" ಎಂದು ಕೇಳಿದಳು. ಅವನು ನೀರು ಅಂತ ಕೇಳಿದನು. ಅವಳು ನೀರು ತಂದವನ್ನು ಕುಡಿದು ನಿಧಾನವಾಗಿ ಉಸಿರು ತಗೊಂಡು; ಇನ್ನೂ ಎಷ್ಟೋತ್ತಾಯ್ತದೆ ಕೆಲ್ಸ ಮುಗಿಯಾಕ್ಕೆ ನಂಜವ್ವ" ಎಂದ. ನಂಜಿ ಮೇಸ್ತ್ರಿ ಇವತ್ತು ಎದುರಿಗೆ ಕುಂತಾನ ಎಂದಳು. ನೀನಗೆ ಮಣ್ಣು ಹೊರಾಕ ಆಗಲ್ಲ, ಮನೆಗೆ ಹೋಗು ಎಂದದ್ದಕ್ಕೆ, 'ನಮ್ಮ ಚಿಕ್ಕಮ್ಮ...' ಎಂದು ಅಳತೊಡಗಿದನು.

ಎಲ್ಲರೂ ಕೆಲ್ಸ ಬಿಟ್ಟರು "ಏಳು ಏನ್ತಂದಿದ್ದಿ ಒಂಚೂರು ತಿನ್ನಡಿ" ಅಂದು ಅವನ ಡಬ್ಬಿ ತಗೆದಳು. ಅದರಲ್ಲಿ ರಾತ್ರಿ ಮಿಕ್ಕಿದ ತಂಗಳ ಹಿಟ್ಟು, ಹಳಸಿ ಹೋಗಿತ್ತು. ಇದನ್ನು ತಿಂದ್ರು ವಾಕರಿಕೆ ಆಯಿತು. ಇದನ್ನು ಎಲ್ಲರು ಬಂದು ನೋಡಿ ಇವನ ಮಲತಾಯಿ, ತಂದೆ ಈರ ನನ್ನ ಬೈದರು. ಈರಾ ಮೊದಲನೆಯವಳಿಗೆ ಒಂದು ಗಂಡು, ಒಂದು ಹೆಣ್ಣು ಇರುವಾಗ ಇನ್ನೊಂದು ಯಾಕೆ ಮದುವೆಯಾದ? ಇವಳ ತನ್ನ ಮಕ್ಕಳಿಗೆ ಆದ್ರೆ ಈ ರೀತಿ ಹಳಸಿದ್ದು ಇಡುತಾಳ. ಇವನೇನು ತನಗೆ ಮಗಾ ಅಲ್ಲಾ ಎಂದು ರೇಗಿದರು. ಅದೇನಂತರಲ್ಲ "ಕಲ್ತಿದ್ದು ಬುಡೆಕಲಕೇತಿ ಅಂದ್ರೆ ನನ್ನ ಗಂಡನ ಬುಟ್ಟೇನು ಕಲ್ತಿದ್ದು ಬುಡೆ" ಅಂತೋಳು ಅವಳು ಎಂದು ಲೊಟಿಗೆ ಮುರಿದರು.

ನಂಜಿ ಮೇಸ್ತ್ರೀಯ ಬಳಿ ನಾಕಾಣೆ ಇಸ್ಕೊಂಡು, ಯಲ್ಲನಿಗೆ ಕೊಟ್ಟು, ಊರೊಳಕ್ಕೆ ಹೋಗಿ ಕಡ್ಲಿ ಪುರಿನಾದ್ರು ತಿಂದು ಬಾ ಎಂದು ಕಳಿಸಿದಳು. ಹರಿದ ಅಂಗಿಯ ಜೋಬಿನಲ್ಲಿ ಕಿಡ್ಲಿ ಪುರಿ ಹಾಕಿಕೊಂಡು ತುಸು ತನ್ನುವುದರಲ್ಲೇ ಖಾಲಿ ಆಗಿದ್ದನ್ನು ಕಂಡು, ಒಳ ಜೇಬಿ ಸವರಿದಾಗ ಸಿಕ್ಕ ತೂತಿನಿಂದ ಹಿಂದಕ್ಕೆ ತಿರುಗಿ ನೋಡಿದಾಗ, ದಾರಿಯುದ್ದಕ್ಕೆ ಕಡ್ಲೆಪುರಿ ಬಿದ್ದಿದ್ದವು. ಅವನ್ನು ನೋಡಿ ನಂಜಿ ಆವೇಶ ಬಂದನಂತೆ. ಅವನ್ನ ಎತ್ತಲು ಹೋದ ಅವು ಗಾಳಿಗೆ ಮುಂದೆ ಮುಂದೆ ಹೋದಾಗ ಎದ್ದು ಬಿದ್ದು ಒಂದು ಇಪ್ಪತ್ತು ಕಾಳು ಹೊಟ್ಟೆಗೆ ಬಿದ್ದರು ಸೊಂಟ ನೋವಾಯಿತು. ಅಂಗಿ ಮೇಲಿನ ನಿಟ್ಟಿನಿಂದ ಹಿಡಿದು ಕುತಾಗ ಅದು ಅಂಗಿಯೂ ಪರ್ರನೆ ಹರಿಯಿತು. "ಅಯ್ಯಯ್ಯೋ ಇದು ಬ್ಯಾರೆ ಆಯ್ತಾ? ಇನ್ನು ಚಿಕ್ಕವ್ವ ಬುಡ್ತಾಳಾ?" ಎಂದು ಬಸರಿಮರಕ್ಕೆ ಕುಳಿತ.

ಮೇಸ್ತ್ರಿ ಇವನನ್ನು ನೋಡಿ "ನಿನ್ನ ಸವಾಸ ಸಾಕು. ಇನ್ಮೇಲೆ ನನ್ನ ಕೆಲಸಕ್ಕೆ ಬರಬ್ಯಾಡ ತೊಲಗು ಇಲ್ಲಿಂದ" ಅಂತ ಆಚೆಗೆ ದಬ್ಬೇಬಿಟ್ಟ. ಮನೆಗೆ ಬಂದಾಗ ಚಿಕ್ಕವ್ವನಿಂದ ಬಾರಿಸಿಕೊಂಡು ಬಿದ್ದು ಮರದ ಹತ್ತಿರ ಅಳತೊಡಗಿದ. ಇಲ್ಲಿಗೆ ಬಂದ ನಂಜವ್ವ ಯಲ್ಲನನ್ನು ಮಗನಂತೆ ಸಮಾಧಾನಿಸ ತೊಡಗಿದಳು.

ಇಲ್ಲಿ ಯಲ್ಲನಿಗೆ ಮಲ ತಾಯಿಂದ ಆದ ದೈಹಿಕ ಮತ್ತು ಮಾನಸಿಕ ಹಿಂಸೆಗಳನ್ನು ನೋಡುವುದಲ್ಲದೇ ನಂಜವ್ವಳು ತಾಯಿ ಇಲ್ಲದ ಈ ಯಲ್ಲನನ್ನು ಸ್ವಂತ ಮಗನಂತೆ ಇವನನ್ನು ಉಪಚರಿಸಿದ ರೀತಿಯನ್ನು, ಇವಳ ಸಹಾನುಭೂತಿ, ವಾತ್ಸಲ್ಯಗಳನ್ನು ಕಾಣುತ್ತೇವೆ. ಆದರೆ ಈ ನಂಜವ್ವಳಿಗೆ ಇರುವ ಸಹಾನುಭೂತಿ, ವಾತ್ಸಲ್ಯ, ಮಮತೆ, ಕರುಣೆ ಇನ್ನೂ ಮುಂತಾದ ಗುಣಗಳು ಯಲ್ಲನ ಚಿಕ್ಕಮ್ಮಳಿಗೆ ಅಥವಾ ಇಂದಿನ ಮಲತಾಯಿಯಂದಿರಿಗೆ ಇದ್ದರೆ, ಇಂದು ಯಲ್ಲನಂತೋರು ಈ ಯಲ್ಲ ನಂತಹ ಕಷ್ಟಗಳನ್ನು ಅನುಭವಿಸಲು ಸಾಧ್ಯವಿಲ್ಲ.

ಇಲ್ಲಿ ನಂಜವ್ವ ಹಂತವರಿಂದಲೇ ಯಲ್ಲನ ಕಷ್ಟಗಳು ಪರಿಹಾರವಾದ್ರೂ ಇದಕ್ಕೆ ಯಲ್ಲನ ತಂದೆ ಈರನು ಮುಖ್ಯವಾಗಿ ಮಗನ ಹಾರೈಕೆಯಲ್ಲಿ ಗಮನ ಇಡಬೇಕು. ಅಂದರೆ ಇಲ್ಲಿ ತಂದೆಯರ ಪಾತ್ರವು ನಂಜವ್ವಳಿಗಿಂತ ಮುಖ್ಯವೆಂದು ನನಗೆ ಅನಿಸುವುದು... ಎಂಬುದು ನನ್ನ ಅಭಿಪ್ರಾಯವಾಗಿದೆ.

ವಾಸನಾಮಯ ಬದುಕಿನ ಆಚೆ ಈಚೆ: ಪರಸ್ತ್ರೀಯ ಒಂಟಿಯಾಗಿ ಹೊಲದಲ್ಲಿ ಸಿಕ್ಕಾಗ ಪುಟ್ಟ ಸಾಮಿಯ ಮಗ ಕೆಂದನು ಬಲಾತ್ಕಾರದಿಂದ ಅವಳನ್ನು ಸಂಭೋಗಿಸಿದ್ದು, ಇದರಿಂದಾಗಿ ಕೆಂದನು ಅನುಭವಿಸಿದ ಕಷ್ಟಗಳು ತೊಂದರೆಗಳನ್ನು ಕುರಿತು ಈ ಕಥೆಯು ವಿವರಿಸುತ್ತದೆ.

ಒಂದು ದಿನ ಪುಟ್ಟಸ್ವಾಮಿ ತನ್ನ ತೋಟದ ಬಳಿ ಕೆಂದನೊಡನೆ ಆಟವಾಡುತ್ತಿದ್ದನು. ಆಗ ಪಾರ್ವತಿ ಹುಲ್ಲಿಗೆಂದು ಬಂದು, ಪಕ್ಕದ ಜೋಳದ ಹೊಲಕ್ಕಿಳಿದೋಳ ಬೆನ್ಹತ್ತಿ ಹೋಗಿ ಕೆಂದ ಹಿಡಿದಾಗ ಅವಳು ಪ್ರತಿಭಟಿಸಿದಳು. ಈ ಕುದುರೆ ಜಾತಿಯ ಹೆಣ್ಣು ಬಿಟ್ಟರೆ ತಾನೆಂಥ ಗಂಡಸು ಎಂಬ ಆತ್ಮ ಪ್ರತ್ಯಯ ಹೆಡೆ ಎತ್ತಿತ್ತು. ಹೋರಾಡಿ ಬೀಳಿಸಿದ್ದಾಯ್ತು. ಆದರೆ ಆ ಹೆಣ್ಣು ತನ್ನ ಪೌರುಷವನ್ನು ನಾಶಮಾಡಿದ್ದಳು. ಆದರೆ ಜನ ಮುತ್ತಿಕೊಳ್ಳೋ ಮುನ್ನ ಕೆಂದ ತಪ್ಪಿಸಿಕೊಂಡನು.

ಹೀಗಿರುವಾಗ ಕೆಂದನಾ ಊರಿನವರು, ಪಾರ್ವತಿ ಕಡೆಯವರು ಸೇರಿ ಕೆಂದನನ್ನು ಸಾಯಿಸಿ ಊರಿನ ಆಚೆ ಹುಣಸಿಮರದ ಪಕ್ಕದದಲ್ಲಿ ಬಿಸಾಕಿದ್ದರು. ಈ ವಿಷಯವನ್ನು ನಿಂಗಜ್ಜನು ಬಂದು ಪುಟ್ಟಸಾಮಿಗೆ ತಿಳಿಸಿದ ನಂತರ ಈ ಪುಟ್ಟಸಾಮಿ ರಾತ್ರಿಯೋ ಹೋಗಿ ಹುಡುಕಿ ಅಳುತ್ತಾನೆ. ಲಕ್ಕನಿಂದ ಗುದ್ದಲಿ, ಆರೆ ತರಿಸಿ, ಮಗನಿಗೆ ತಾನೇ ಕುಣಿ ತೋಡಿ ತನ್ನ ಶಾಲು ಹೊದಿಸಿ ಇಬ್ಬರು ಸೇರಿ ಮುಚ್ಚುತ್ತಾರೆ. ಮಗನ ಸಮಾಧಿಯ ಮೇಲಿನ ಮಣ್ಣನ್ನು ಒಂದೇ ಸಮನೆ ತಿನ್ನುತ್ತಾ, ನನ್ನ ಮಗನನ್ನು ಕೊಂದವರನ್ನು ಸುಮನ್ನೆ ಬಿಡಬಾರದು ಎಂದು ಮೇಲೆ ಎದ್ದು ಆರೆ ತಗೊಂಡು ಅಲ್ಲಿಗೆ ಬಂದಿರುವ ಊರಿನ ಜನರಿಗೆ ಪಟೇಲರಿಗೆ ಹೊಡೆಯಲು ಹೋಗಲು ಆಗದೆ ಕುಸಿದು ಬಿಳುತ್ತಾನೆ.

ಕೊನೆಗೆ ಪಟೇಲರಿಂದ ಸಮಾನಕ್ಕೆ ಒಳಗಾಗಿ ಚಿಕ್ಕ ಮಗುವಿನಂತೆ ಪುಟ್ಟಸ್ವಾಮಿಯ ಅದನು. ಇಲ್ಲಿ ಮೊದಲು ಮಗನ ಸಾವಿಗೆ ಸೇಡು ತೀರಿಸಿಕೊಳ್ಳಬೇಕೆಂದು ಆವೇಶದಿಂದ ವರ್ತಿಸಿದ್ದು ಪುಟ್ಟಸಾಮಿಗೆ ತನ್ನ ಮಗ ಮಾಡಿದ್ದು ತಪ್ಪೆಂದು ಗೊತ್ತಾದುದ್ದರಿಂದ ಕೊನೆಗೆ ಪಟೇಲ್‌ರ ಬಳಿ ಬಂದು ದುಃಖದಿಂದ ತಬ್ಬಿಕೊಂಡು ಚಿಕ್ಕ ಮಗುವಿನಂತಾದನು.

ಒಂದು ಮುಂಜಾನೆ ಹೊತ್ತು: ರೈತನಾದ ಹೊನ್ನಪ್ಪನ ಬದುಕಿನ ಚಿತ್ರಣ ಇಲ್ಲಿದೆ. ಹೊನ್ನಪ್ಪನು ಜೋಳದ ಹೊಲ ಕಾಯುತ್ತಾ ತನ್ನ ಹೆಂಡತ್ತಿಯೊಂದಿಗೆ ಕೂಡಿಕೊಳ್ಳುವನು. ಹೊನ್ನಪ್ಪ ತಾನೂ ಈ ಸುಖ ಅನುಭವಿಸುವುದಕ್ಕಾಗಿಯೇ ಆಳುಗಳನ್ನು ಮನೆಗೆ ಕಳಿಸಿದ್ದನು. ಹೊನ್ನಪ್ಪರ ಕೃಷಿಯ ಕೆಲಸ ಕಾರ್ಯಗಳನ್ನು ಕುರಿತು ವಿವರಿಸಲಾಗಿದೆ.

ಆದರೆ ಹೊನ್ನಪ್ಪನಿಗೆ ಹತ್ತು ತಲೆಮಾರುಗಳು ಕುಂತು ತಿಂದ್ರೂ ಸವಿಲಾರದಷ್ಟು ಆಸ್ತಿ ಇದ್ರೂ ಒಂದೂ ಮಕ್ಕಳಿಲ್ಲ, ಮಕ್ಕಳಾಗಿಲ್ಲ. ಮಕ್ಕಳನ್ನು ಹುಟ್ಟಿಸಲು ತನ್ನಿಂದ ಸಾಧ್ಯವಾಗುತ್ತಿಲ್ಲವಲ್ಲ ಎಂದು–ಕಣ್ಣಿದ್ದೂ ಕುರುಡನಾಗಿ, ಬಾಯಿದ್ದೂ ಮೂಗನಾಗಿ, ಹೀಂಗೇ ಇನ್ನೂ ಎಷ್ಟು ದಿನಗಂಟ ಅಂತಾ? ಇರಲಿ. ಇವರ ಮನೆ ಕಾಯಕ್ಕೆ ಇರುವ ಒಳ್ಳೆಯ ನಾಯಂಗೆ. "ಉಹುಂ, ಇನ್ನು ಹಿಂಗಾಗಕ್ಕಿಲ್ಲ. ನಾನೇನು ಗೊಡ್ಡಲ್ಲ, ನಂಗೂ ಆಸೆ ಅವೆ, ಕನಸೂ ಬೀಳ್ತವೆ, ಮೀಸೆ ನಿಮಿರಿ ಏಳ್ತವೆ, ಬದುಕಾಕ್ಕೆ ಬಲ ಅದೆ ಅಂತ ತೋರುಸ್ಬೇಕು"[೨೩] ಎಂದು ಹೊರಗಡೆ ಬಂದನು.

ಹೆಂಡತಿ ದ್ಯಾವ್ರಿಗೆ ಹೋಗಲು ಮಡಿಯಾಗಿ ಹೊರಗಡೆ ನಿಂತಿದ್ರೂ ಗಂಡ ನಿಲ್ಲದ್ದನ್ನು ನೋಡಿದಳು. ಹೊನ್ನಪ್ಪ ಮಡಿಯಾಗಿಲ್ಲದೇ ಬೇರೆ ಕೆಲಸಲ್ಲಿ ತಲ್ಲೀನನಾಗಿದ್ದನು. ಆಗ ಹೆಂಡತಿ "ಅಯ್ಯೋ ನಿನ್ನ ಮಕ್ಕಾಕಕ್ಕಷ್ಟು? ಅದೇನಂಗೆ ಮಾಡ್ತಿದ್ದಿ ಇಲ್ಲಿ? ಅಲ್ಲಿ ಗಾಡಿ ಹೊಂಟು ನಿಂತದೆ" ಎಂದಳು.

ಹೆಂಡತಿ ಸುಂದರವಾಗಿ ಕಾಣುತ್ತಿದ್ದಳು. ಅಲ್ಲದೇ ಒಬ್ಬಳೇ ಸಿಕ್ಕಿದ್ದು ಅವನಿಗೆ ಇಡೀ ಅಗಾಂತರವೇ ಅಂಗೈಯೊಳಗೆ ಬಂದಂಗಾಯ್ತು. ಒಂದೇ ನೆಗೆತಕ್ಕೆ ಬಂದು ಹಿಡಿಕ್ಕೊಂಡದನ್ನು ಅವಳು "ಅಯ್ಯಯ್ಯೋ ಮಡಿ ಮಾಡ್ಕೊಂಡು ದ್ಯಾವ್ರಿಗೆ ಹೊಂಟಿವಿ ಮಕಮಾರೆ ತೋಳಿದೆ ಮುಟ್ಟುಸ್ಕೊತ್ತಿಯಲ್ಲೋ ನಿನ್ನ ಹಡಾಳಾಗ, ಇದೇನು ಬಂದು ನಿಂಗಿವತ್ತು...." ಅವನು... "ರಾತ್ರಿಯೇನು ನೀವು ಬೊಗುಳ್ತಿದ್ದು ಆಂ? ಬಾ ನಾನೂ ಗಂಡ್ಸೇ ಅಂತ ತೋರುಸ್ತೀನಿ..."[೨೪] ಎಂದು ಎಮ್ಮೆಗೊಂತಿಯಲ್ಲಿ ಅವಳನ್ನು ಮಲಗಿಸಿ ಬೆತ್ತಲೆ ಮಾಡಿದನು. ಅವಳು ಕೈಕಾಲು ಒದರ್ತಾ ಲಬಲಬ ಬಡಕೊಂಡ್ರೂ ಬಿಡದೆ ಹಿಡಕ್ಕೊಂಡು ಮಲಗಿದನು.

ಮಗಳ ಗದ್ದಲ ಕಿರುಚಾಟ ಕೇಳಿ ಬಂದಿದ್ದ ಅಪ್ಪನಿಗೆ ಇವರನ್ನು ನೋಡಿ ನಾಚಿಕೆಯಾಯಿತು. ಇವನಿಗೆ ಅಳಿಯನ ರೋಷ ಭಲೆ ಅನ್ನಂಗೆ ಅನ್ನಿಸ್ತು. ಹಿಂದೆ ಸರಿದವ ಥುತ್ ಅಂದ್ಕೊಂಡು ಕೊಟ್ಟೆ ಬಾಗಿಲು ಎಳೆದು ಆಚೆ ಹೊದ್ರು.

ಇಲ್ಲಿ ಮಕ್ಕಳಿಲ್ಲದ ಹೊನ್ನಪ್ಪನು ಒಳಗೊಳಗೆ ಅನುಭವಿಸುವ ಮಾನಸಿಕ ಹಿಂಸೆ, ತಳಮಳ ಒಂದು ರೀತಿಯ ಕೊರತೆ... ಮುಂತಾದವುಗಳನ್ನು ಕಥೆಗಾರರು ತೋರಿಸಿದ್ದಾರೆ. ತನಗೆ ಒಬ್ಬ ಮಗ/ಮಕ್ಕಳು ಬೇಕು ಎಂಬ ಆಸೆ ಅಥವಾ ಕಾತುರ ಇವನಲ್ಲಿ (ಹೊನ್ನಪ್ಪ) ತುಂಬಿ ಉಕ್ಕುತ್ತಿರುವುದು ಇಲ್ಲಿ ಕಂಡುಬರುತ್ತದೆ.

ಮಕ್ಕಳಾಗಬೇಕಾದರೆ ಮಡಿಯಾಗಿ ದ್ಯಾವ್ರಿಗೆ ಹೋದರೆ ಆಗುತ್ತವೆಂದು ತಿಳಿದು ಹೊನ್ನಪ್ಪನ ಹೆಂಡತಿ ಹೋಗಲು ಸಿದ್ಧವಾದಾಗ ಗಂಡ ತಡೆದು "ಮಕ್ಕಳನ್ನು ನಾನು ಕೊಡದೆ, ಆ ದ್ಯಾವ್ರು ನಿನಗೆ ಕೊಡತಾನ....?" ಎಂದು ಪ್ರಶ್ನೆ ಹಾಕುವುದರ ಮೂಲಕ ದೇವರು ಮಕ್ಕಳನ್ನು ಕೊಡಲಾಗುವುದಿಲ್ಲ. ಮಕ್ಕಳನ್ನು ಕೊಡಲು ಸಾಧ್ಯವಾಗುವುದು ಅವಳ ಗಂಡನಿಂದ ಮಾತ್ರ ಸಾಧ್ಯ ಎಂಬುದನ್ನು ಸೂಕ್ಷ್ಮವಾಗಿ ಇಲ್ಲಿ ಕಥೆಗಾರರು ತಿಳಿಸಿದ್ದಾರೆ. ಹಾಗೆಯೇ ಇವರು ಮೂಢನಂಬಿಕೆಗಳನ್ನು ಅಲ್ಲಿಗಳೆಯುತ್ತಾರೆ.

ಹೀಗೆ ಕಾದಂಬರಿಕಾರರು ಒಟ್ಟಾರೆಯಾಗಿ ತಮ್ಮ ಇಡಿ ಕಥಾಸಾಹಿತ್ಯದಲ್ಲಿ ಗ್ರಾಮೀಣ ಜನರ ಜೀವನ-ಬದುಕುಗಳು, ಇವರು ಅನುಭವಿಸುವ ಕಷ್ಟ-ತೊಂದರೆಗಳು, ಮನೋರಂಜನೆ-ವಿನೋದಗಳು, ರಸಿಕತೆಗಳು, ಬಡತನ, ಶೋಷಣೆಗಳು, ಜಾತೀಯತೆ ಇನ್ನೂ ಮುಂತಾದವುಗಳನ್ನು ಕುರಿತು ಗ್ರಾಮೀಣ ಪರಿಸರದಲ್ಲಿ ತುಂಬಾ ಹತ್ತಿರದಿಂದಲೇ ಕಂಡು ಚಿತ್ರಿಸಿದ್ದಾರೆ.

ಕೊನೆಟಿಪ್ಪಣಿಗಳು:

೧. ಒಡಲುರಿ, ಕಾ.ತ.ಚಿಕ್ಕಣ್ಣ, ೧೯೮೪, ನಲ್ಮೆ ಪ್ರಕಾಶನ, ಬೆಂಗಳೂರು, ಪು.ಸಂ:೪೨.

೨. ಅದೇ, ಪು.ಸಂ: ೪೩

೩. ಅದೇ, ಪು.ಸಂ: ೪೬

೪. ಬಯಲು-ರೂಪ, ಪ್ರೊ. ಸಿ.ಎನ್.ರಾಮಚಂದ್ರನ್, ಸ್ವಪ್ನ ಬುಕ್ ಹೌಸ, ಬೆಂಗಳೂರು, ಪು.ಸಂ. ೨೯೧.

೫. ಕಂಡೇರಿ, ಕಾ.ತ.ಚಿಕ್ಕಣ್ಣ, ೨೦೦೪, ಸುಂದರ ಪ್ರಕಾಶನ, ಬೆಂಗಳೂರು, ೧೯೩.

೬. ಅದೇ, ಪು.ಸಂ: ೨೫

೭. ಬಯಲು-ರೂಪ, ಪು.ಸಂ. ೨೯೫.

೮. ಕಂಡೇರಿ, ಪು.ಸಂ. ೬೬.

೯. ಬಯಲು-ರೂಪ, ಪು.ಸಂ. ೨೯೪.

೧೦. ಕಂಡೇರಿ, ಪು.ಸಂ. ೩೬೪.

೧೧. ಅದೇ, ಪು.ಸಂ: ೩೬೭.

೧೨. ಅದೇ, ಪು.ಸಂ: ೩೬೭.

೧೩. ‘ಒಡಲುರಿ’ಗೆ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರು ಬರೆದ ಮುನ್ನುಡಿ, ಪು.ಸಂ; ೮ (ii)

೧೪. ಬಯಲು-ರೂಪ, ಪು.ಸಂ. ೨೯೩

೧೫. ಕಂಡೇರಿ, ಪು.ಸಂ. ೩೫೧

೧೬. ಅದೇ, ಪು.ಸಂ: ೨೪೦

೧೭. ಅದೇ, ಪು.ಸಂ: ೨೭೪-೨೭೫

೧೮. ಅದೇ, ಪು.ಸಂ. ೧೦೮.

೧೯. ಅದೇ, ಪು.ಸಂ. ೧೫೪-೧೫೫

೨೦. ಅದೇ, ಪು.ಸಂ. ೧೬೯.

೨೧. ಅದೇ, ಪು.ಸಂ. ೧೭೦-೧೭೧.

೨೨. ಅದೇ, ಪು.ಸಂ. ೧೭೩

೨೩. ಅದೇ, ಪು.ಸಂ. ೨೨೪.

೨೪. ಅದೇ, ಪು.ಸಂ. ೨೨೫.

ಅಧ್ಯಾಯ ೪

ಕಾದಂಬರಿ ಸಾಹಿತ್ಯ ಮತ್ತು ಗ್ರಾಮೀಣ ಸಂವೇದನೆ

ಅಧ್ಯಾಯ ೪

ಕಾದಂಬರಿ ಸಾಹಿತ್ಯ ಮತ್ತು ಗ್ರಾಮೀಣ ಸಂವೇದನೆ

ಕಾ.ತ.ಚಿಕ್ಕಣ್ಣನವರು 'ಮುಂಜಾವು', 'ದಂಡೆ'- ಕಾಬಂದರಿಗಳ ಮೂಲಕ ಗ್ರಾಮೀಣ ಜನರ ಜೀವನದ ದಟ್ಟವಾದ ಚಿತ್ರಣವನ್ನು ಇಲ್ಲಿ ತಂದಿದ್ದಾರೆ.

ತಳಸ್ಥರ ಮತ್ತು ಮೇಲ್‌ಸ್ಥರದ ಒತ್ತಡಗಳಿಗೆ ಒಳಗಾದ ಮಧ್ಯದಲ್ಲಿ ವರ್ಗವೊಂದಿದೆಯಲ್ಲ ಅದರ ಭಾವನೆಗಳಿಗೆ ಬಾಯಾದವರು, ಆ ಕೊರಳುಗಳಿಗೆ ಧ್ವನಿಯಾದವರು ಚಿಕ್ಕಣ್ಣನವರು.

ಕಾ.ತ.ಚಿಕ್ಕಣ್ಣನವರ 'ಮುಂಜಾವು'

ಕೈಗಾರಿಕರಣದಿಂದಾಗಿ ನಮ್ಮ ಹಳ್ಳಿಗಳ ಅನೇಕ ಕೈ ಕಸಬುಗಳು ನಶಿಸುತ್ತಾ ಬಂದುವು. ಆಗಸ, ಅಕ್ಕಸಾಲಿ, ಚಮ್ಮಾರ, ಕಮ್ಮಾರ, ಕುಂಬಾರ ಮುಂತಾದ ಕಸುಬುದಾರರು ಕೆಟ್ಟು ಪಟ್ಟಣ ಸೇರುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಒಂದೊಂದು ಸ್ವಾವಲಂಬಿ ಘಟಕಗಳಾಗಿದ್ದ ಹಳ್ಳಿಗಳು ಈಗ ನಗರಗಳ ಕೃಪಾಪೋಷಣೆಗೆ ಕೈಯೊಡ್ಡಿ ನಿಲ್ಲುವ ದೈನೇಸಿ ಸ್ಥಿತಿಗೆ ನೂಕಲ್ಪಟ್ಟಿವೆ. ಗ್ರಾಮಾಂತರ ಕಸಬುಗಳೂ ಕ್ರಮ ಕ್ರಮವಾಗಿ ಹೇಗೆ ಕೈಗಾರಿಕೀಕರಣಕ್ಕೆ ಒಳಗಾದುವು ಎಂಬುದನ್ನೂ ಮತ್ತು ಅದರ ಸಾಧನ ಬಾಧಕಗಳನ್ನೂ ಕಾ.ತ.ಚಿಕ್ಕಣ್ಣನವರ 'ಮುಂಜಾವು' ಕಾದಂಬರಿ ಚಿತ್ರಿಸುತ್ತದೆ. ಕಥೆಯ ಕೇಂದ್ರವಾದ ಊರು 'ಕೋಪಗಳಿ'ಯು ರಾಷ್ಟ್ರದ ಇವತ್ತಿನ ಯಾವುದೇ ಹಳ್ಳಿಯ ಕಥೆಯನ್ನೇ ಪ್ರತಿಮಿಸುತ್ತದೆ. ಆಧುನಿಕ ಯಂತ್ರ ಕೈಗಾರಿಕೋತ್ಪನ್ನ ವಸ್ತುಗಳ ಎದುರು ಗೃಹ ಕೈಗಾರಿಕಾ ವಸ್ತುಗಳು ಪೈಪೋಟಿಗೆ ನಿಂತು ಬದುಕಲು ಸಾಧ್ಯವಿಲ್ಲ; ಇದು ಸ್ವಾಭಾವಿಕವೇ. ಆದರೆ ಈವರೆಗೆ ತಮ್ಮ ಕಸಬುದಾರರು, ಕೇಳುವವರಿಲ್ಲದೆ ಅಲಕ್ಷ್ಯಕ್ಕೀಡಾಗಿ ಮಾನನಷ್ಟಕ್ಕೊಳಗಾದರು.

ಗ್ರಾಮೀಣ ಜಗತ್ತಿನಲ್ಲಿ ಅವರಿಗೆ ಮೊದಲಿದ್ದ ಸ್ಥಾನ-ಮಾನ ಕುಸಿದು, ಆರ್ಥಿಕ ದಿವಾಳಿತನದೊಂದಿಗೆ ಅವಮರ್ಯಾದೆಗೂಗುರಿಯಾದರು. ಈ ಸ್ಥಿತ್ಯಂತರ ಸ್ಥಿತಿಯಲ್ಲಿ, ಕೊಪಗಳಿ ಎಂಬ ಊರಿನ ಕಸ್ತೂರಿ ಎಂಬ ಒಬ್ಬ ಕುಂಬಾರ ಮತ್ತು ಅವನ ಮಗ ತಿಮ್ಮಾಜಿ ಆ ಊರಿನಲ್ಲಿ ಅನುಭವಿಸಿದ ಅಸಹಾಯಕ ಪರಿಸ್ಥಿತಿ ಮತ್ತು ಮಾನವಂತಿಕೆಯ ನಷ್ಟ- ಇದನ್ನು ಕುರಿತು ಮುಂಜಾವು ಹೇಳಹೊರಟಿದೆ.

"ಚಿಕ್ಕಣ್ಣನವರು ಎರಡು ತಲೆಮಾರಿನ ಇಬ್ಬರು ವ್ಯಕ್ತಿಗಳ ಕಥೆ ಹೇಳುವಲ್ಲಿ ಅಪಾರ ಕಲಾತ್ಮಕ ಜಾಣತನ ತೋರಿದ್ದಾರೆ. ಇಲ್ಲಿ ದಟ್ಟ ಮಾನವ ಪ್ರೀತಿ, ಬಡತನದ ಶೋಷಣೆಯ ಮತ್ತು ದಟ್ಟ ನೋವಿನ ದಾಖಲೆಗಳು ಇವೆ. ಅವುಗಳ ದುಃಖ-ದುಮ್ಮಾನಗಳು ಮನಸ್ಸನ್ನು ಮುದುಡಿಬಿಡುತ್ತವೆ... ಇಲ್ಲಿ ಲೇಖಕರ ಸಾಮಾಜಿಕ ಕಳಕಳಿಯ ತೀವ್ರತೆ ಮರೆಯಾಗಿಲ್ಲ. ಕಥೆಯ ಹಂದರದ ದೃಷ್ಟಿಯಿಂದ ಇದು ನವ್ಯೋತ್ತರದ ಸಾಮಾನ್ಯ ವಸ್ತು. ಕಸ್ತೂರಿ ಎನ್ನುವ ಬಡ ಕುಂಬಾರನೊಬ್ಬ ಗ್ರಾಮಸಮಾಜದ ಪ್ರತಿಷ್ಠಿತರ ಜತೆಯಲ್ಲಿ ನುಗ್ಗಾಡಿ ಬದುಕಿದ ಕಥೆ ಅವನ ಮಗ ತಿಮ್ಮಾಜಿ, ಹೊಸ ಜನಾಂಗದ ವ್ಯಕ್ತಿಯಾಗಿ ಕೋಪಗೊಂಡು ಕನಲಿದ ಕಥೆ. ಹಿಂದಿನ ತಲೆಮಾರಿನ ಸಾಹಿತ್ಯಕ್ಕೆ ಬಡವರಲ್ಲಿ ಕಸ್ತೂರಿ ಮಾತ್ರ ಗೊತ್ತಿತ್ತು. ಆತನ ತಾಳ್ಮೆ, ಜೀವನ ಪ್ರೀತಿ, ಮುಗ್ಧತೆ ಮಾತ್ರ ಗೊತ್ತಿತ್ತು. ಈ ತಲೆಮಾರಿನ ಸಾಹಿತ್ಯಕ್ಕೆ ತಿಮ್ಮಾಜಿಯ ಸಿಟ್ಟು, ದಂಗೆ ಏಳುವ ಧೈರ್ಯ ಮಾತ್ರ ಗೊತ್ತು. ಇಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ದಟ್ಟ ಮಾನವ ಪ್ರೀತಿಯಿಂದ ಕಥೆ ಹೇಳಿದ್ದಾರೆ. ಆದ್ದರಿಂದ ತಿಮ್ಮಾಜಿಯ ಬಗ್ಗೆ ಪ್ರೀತಿಯಿದ್ದೂ ಕಥೆ ಕಸ್ತೂರಿಯ ಕಡೆಗೇವಾಲಿದೆ."[೧]

ತಿಮ್ಮಾಜಿ ಒಂದು ದಿನ ಗೂಡಿನ ಬೆಂಕಿಗೆಂದು ತರಲು ಬೋರೆಗೆ ಹೋದವನು ಸಂಜೆಯಾದರೂ ಹಿಂತಿರುಗಲಿಲ್ಲ. ಇತ್ತ ಗುಡಿಸಿಲಿನಲ್ಲಿದ್ದ ಕಸ್ತೂರಿಯ ಆತಂಕ ಹೇಳತೀರದು, ಅವನ ಕಾತರ ಕೇಳಬಾರದು. ಮಗ ಎಲ್ಲಿ ಹೋದ? ಏನಾದ? ಏಕೆ ಬರಲಿಲ್ಲ? ಎಂಬ ಕಳವಳ ತಂದೆಗೆ. ಓದುಗರಿಗೂ ಇದೇ ಕುತೂಹಲ ಕಾಡುತ್ತಿರುವಾಗ ಕಸ್ತೂರಿ ಮಗನನ್ನು ಹುಕಿಕೊಂಡು ಬೋರೆಯ ಕಾಡಿಗೆ ಹೊರಡುತ್ತಾನೆ. ಅವನ ಹುಡುಕಾಟದ ಹಿಂದೆ ಹಿಂದೆಯೇ ಆತನ ಬದುಕಿನ ಹಿಂದಿನ ಕಥೆಯನ್ನೆಲ್ಲ ಬಿಚ್ಚುತ್ತಾ ಹೋಗುತ್ತಾನೆ. ತನ್ನ ಹಿಂದಿನ ಕಥೆಯನ್ನೂ ತಾನೆ ಪುನರನುಭವಿಸುತ್ತಾ ಹೇಳುತ್ತಾನೆ. ತಂದೆಯ ಸಾವು, ಹೆಂಗತಿ ತಿಮ್ಮುವಿನ ನೆನಪು ಬರಗಾಲದ ಬವಣೆ, ಲಕುಸುಮಿಯ ಗೆಣೆತನ ಹಕಲಪ – ಗಂಗೆಯರ ಸರಸಗಳು ಇತ್ಯಾದಿ.

ಲೇಖಕರು ಈ "ಕೃತಿಯಲ್ಲಿ ಬಡತನವನ್ನೇ ಕಮುರು ತೇಗು ಬರುವಷ್ಟು ಉಣ ಬಡಿಸದೆ, ಬಡತನದ ಬೇಗೆಯ ಮಧ್ಯೆಯೂ ಚಿಮ್ಮುವ ಲವಲವಿಕೆ, ಕ್ರಿಯಾಶಕ್ತಿ, ರಸಿಕತೆ, ಸಂತೃಪ್ತಿ ಪ್ರೇಮ ಕಾಮಗಳನ್ನು ಚಿತ್ರಿಸಿ ಯಾಥಾರ್ಥ ಬದುಕಿನ ಸಂಕೀರ್ಣತೆಯನ್ನು ಸೆರೆ ಹಿಡಿಯಲಾಗಿದೆ."[೨]

ಮುಂಜಾವು ಕಾದಂಬರಿಯಲ್ಲಿ ಕಳೆದುಕೊಳ್ಳುವ ಮತ್ತು ಪಡೆದುಕೊಳ್ಳುವ ಮತ್ತು ಇರುವಿಕೆಗಾಗಿ ಹೋರಾಡುವ ಈ ಪ್ರಕ್ರಿಯೆಯು ನಿರಂತರ ಚಾಲನಶಕ್ತಿಯಾಗಿ ಕೆಲಸ ಮಾಡಿದೆ. ಕಸ್ತೂರಿ ತನ್ನ ಜೀವನದುದ್ದಕ್ಕೂ ಒಬ್ಬೊಬ್ಬರನ್ನೇ ಕಳೆದುಕೊಳ್ಳುತ್ತಾ ಹೋಗುತ್ತಾನೆ. ಆದರೆ ಅದೇ ಸಮಯಕ್ಕೆ ಮತ್ತೆ ಒಬ್ಬೋಬ್ಬರನ್ನೇ ಪಡೆದುಕೊಳ್ಳುತ್ತ ಚೈತನ್ಯಶೀಲವಾಗಿ ಜೀವಪರವಾಗಿ ಬದುಕುತ್ತಾನೆ. ಚಿಕ್ಕವನಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದ. ಆಮೇಲೆ ಹೆಂಡತಿ ತಿಮ್ಮುವಿನೊಂದಿಗೆ 'ಒಲವೆ ನಮ್ಮ ಬದುಕು' ಎಂಬಂತೆ ಸರಸ ದಾಂಪತ್ಯ ಸುಖವನ್ನು ಅನುಭವಿಸಿದ. ಅವಳಿಗೂ ಆಕಾಲ ಮರಣ ಬಂದುದರಿಂದ ನಿರಾಶೆಯ ತಳಾತಳಕ್ಕಿಳಿದು ಬೈರಾಗಿಯಾಂತಾದ. ಕಡೆಗೆ ಹಾದಿಯ ಪಕ್ಕದಲ್ಲಿ ಸಿಕ್ಕಿದ ಮಗು ಒಂದನ್ನು ತಂದು ಸಾಕಿ ಬೆಳೆಸುವುದರೊಂದಿಗೆ ಮತ್ತೆ ಮನುಷ್ಯನಾದ. ಆದರೆ ಬೆಳೆದ ಮಗನೂ ಕಳೆದುಹೋದ ಮೇಲೆ ಹುಚ್ಚನಂತಾದ. ಲಕುಸುಮಿಯ ಗೆಣೆತನ ಆಗ ಅವನನ್ನು ಕೈ ಹಿಡಿದು ಸಾಗಿಸಿತು. ಅವಳೂ ತನ್ನ ತವರು ಮನೆ ಸೇರಿಕೊಂಡು ಮೇಲೆ ಮತ್ತೆ ಒಬ್ಬಂಟಿಯಾದ. ಇಳಿವಯಸ್ಸಿನಲ್ಲಿ ಅವನ ಜೀವ ಚೈತನ್ಯವೇ ಬತ್ತಿ ಹೋದಂತಾಯಿತು. ಆದರೆ ತಿಮ್ಮಾಜಿ ಪೇಟೆಯಿಂದ ಹಿಂದಿರುಗಿಬಂದ ಮೇಲೆ ಮತ್ತೆ ಕಸ್ತೂರಿಗೆ ಹೋದ ಜೀವ ಬಂದಂತಾಯಿತು. ಆ ಎರಡು ಜೀವಗಳು ಅತ್ತು ಮರೆತಾವು ದುಃಖ ಕಸ್ತೂರಿ, ಹೀಗೆ ಒಬ್ಬೋಬ್ಬರನ್ನೇ ಹಿಡಿದು–ಬಿಡುವ ಆಟದಂತೆ ಬದುಕು ಸಾಗಿಸುತ್ತಿರುವಾಗ, ಕೋಪಗಳಿಯಲ್ಲಿ ಉಳಿಯುವುದಕ್ಕಾಗಿ ಹೋರಾಟ ಮಾಡುತ್ತಿರುವಾಗ, ಒಂದು ದಿನ ಅವನು ತನ್ನ ಊರನ್ನೂ ತನ್ನ ಜೀವಕ್ಕೆ ಜೀವವಾದ ಬೋರೆಯನ್ನೂ ಅಗಲಿಹೋಗುವ ದುರ್ಬರ ಪ್ರಸಂಗವೇ ಒದಗಿಬಿಡುತ್ತದೆ. ಊರವರ ಚಿತಾವಣೆಗೆ ಬೇಸತ್ತು ತಂದೆ ಮಕ್ಕಳು ಹುಟ್ಟೂರನ್ನು ಬಿಟ್ಟುಕೊಟ್ಟು ದೂರದ ನಗರಕ್ಕೆ ವಲಸೆ ಹೊರಟು ಬಿಡುತ್ತಾರೆ. ಮುಂದೆ ನಗರದ ಜನಾರಣ್ಯದಲ್ಲಿ ಕಸ್ತೂರಿಯಂಥ ಹಳ್ಳಿಯ ಮುಗ್ಧ ಕಸುಬದಾರ, ಕಲೆಗಾರ ಹೇಗೆ ಬದುಕಿದನೋ! ಮಗನ ಪಾಲಿನ 'ಮುಂಜಾವು' ತಂದೆಗೆ 'ಮುಚ್ಚಂಜೆ'ಯೇ ಆಗಿರಬಹುದೇನೋ!

ಎರಡು ತಲೆಮಾರಿಗೆ ಸೇರಿದ ಕಸ್ತೂರಿ ಮತ್ತು ತಿಮ್ಮಾಜಿ ಅವರು ತಮ್ಮ ಕಾಲದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳಿಗೆ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ. ತಲೆ ತಲಾಂತರದಿಂದ ಬಂದ ಕುಂಬಾರ ವೃತ್ತಿಯನ್ನು ಆರಾಧ್ಯ ದೈವ ಎಂದು ಒಪ್ಪಿ ಬದುಕಿದವನು ಕಸ್ತೂರಿ. "ಮಣ್ಣಿಗೆ ಜೀವ ತುಂಬಿ ಅದರಲಿ ತನ್ನ ದೇವರು ಕಾಣೋ ಕಸ್ತೂರಿ ಇನ್ಯಾವುದಕೆ ಎಳೆ ಮನಸು ಮಾಡಿದರೂ ಈ ಕಾಯಕಕೆ ಮಾತರ ಮಾಡುತಿರನಿಲ" ಆದರೆ ಮಗ ತಿಮ್ಮಾಜಿಗೆ ಆ ನಿಷ್ಠೆ ಉಳಿಯಲಿಲ್ಲ. ಏಕೆಂದರೆ ಅವನು ಪೇಟೆಗೆ ಹೋಗಿ ನಲ್ಕಕ್ಷರ ಕಲಿತು ಬಂದವನು. ಸ್ವಾಭಿಮಾನ ಎಂದರೆ ಏನೆಂಬುದನ್ನೂ ಅನುಭವಿಸಿ ಕಂಡವನು. "ಪೇಟೆಲಿ ಇದ್ದು, ಹೋಟೆಲ ನೋಡಿದ್ದ, ಕೂಡಿಸಿಕೊಂಡು ಓದೋದ, ಬುಡಿಸಿಕೊಂಡು ಬರೆಯೋದ, ಒಂದಕ್ಕೊಂದು ಲೆಕ್ಕ ಹಾಕೋದು ಕಲಿತಿದ್ದ" ಆದ್ದರಿಂದ ಸುಮ್ಮನಿದ್ದವರ ಮೇಲೆ ಊರ ಉಡಾಳರು ಕಿತಾಪತಿ ಮಾಡಿದಾಗ ಕಿಡಿ ಕಾರುತ್ತಾನೆ. ಬಸವಣ್ಣನಂತೆ ಸುಮ್ಮನಿರುವ ಅಪ್ಪನನ್ನು ಕಂಡು ಸಿಡಿಮಿಡಿಗೊಳ್ಳುತ್ತಾನೆ. ಎಂದೂ ಬಾರದವರೆಲ್ಲ ಮನೆಗೆ ಬಂದು, ನಿಮಗೆ ನಿಧಿ ಸಿಕ್ಕಿದೆ ಎಂದು ವಿನಾಕಾರಣ ಕ್ಯಾತೆ ತೆಗೆಯುವ ನೀಚ ಜನರ ವಿರುದ್ಧ ಕನಲಿ ಕೆಂಡವಾಗುತ್ತಾನೆ. "ನೀನು ಸುಮ್ಮನಿರಪ್ಪ ಅವರಿಗೆ ತಕ್ಕ ಬುದ್ಧಿ ಕಲಿಸುತ್ತೀನಿ"- ಎಂದು ಮರ್ಯಾದೆಗೆಟ್ಟ ಜನರ ವಿರುದ್ಧ ಸಹಜವಾಗಿಯೇ ಪ್ರತಿಭಟಿಸುತ್ತಾನೆ. "ತಿಮ್ಮಾಜಿಯ ರೋಷವನ್ನು, ಆತಂಕವನ್ನು ಕೃತಿಯೊಳಗೆ ಆವರಿಸಿಕೊಳ್ಳುವ ಕಥನ ಕ್ರಮವನ್ನು ಚಿಕ್ಕಣ್ಣನವರು ಇನ್ನೂ ಸಾಧ್ಯವಾಗಿಸಿಕೊಳ್ಳಬೇಕು" ಎಂದು ಡಾ.ಡಿ.ಆರ್.ನಾಗರಾಜ್ ಅಭಿಪ್ರಾಯ ಪಡುತ್ತಾರೆ. ಆದರೆ ಈಗಿರುವ ಕಥನ ಕ್ರಮದಲ್ಲಿಯೇ ತಿಮ್ಮಾಜಿಯ ರೋಷ, ಆತಂಕ, ಉಚಿತ ರೀತಿಯಲ್ಲಿಯೇ ಅಭಿವ್ಯಕ್ತಗೊಂಡಿರುವುದನ್ನು ಕಾದಂಬರಿಯ ಮೂರನೆ ಭಾಗದಲ್ಲಿ ಗುರ್ತಿಸಬಹುದು. ಊರಿನ ಜನರಿಗೆ ಬೈದರೆ ಅಪ್ಪನಿಗೆ ಎಲ್ಲಿ ತನ್ನಿಂದ ನೋವಾಗುವುದೋ ಎಂದು ತನ್ನ ರೋಷವನ್ನು, ಆತಂಕವನ್ನು ತಾನೇ ನುಂಗಿಕೊಳ್ಳುತ್ತಿದ್ದ ಅವನ ಒಳ ತುಡಿತ, ಕುದಿತ, ಸಂಕಟ ಹೇಳತೀರದು. ಒಂದು ಕಡೆಗೆ ಪ್ರೀತಿಯ ಅಪ್ಪ, ಇನ್ನೊಂದು ಕಡೆಗೆ ಊರಿನ ಸಣ್ಣ ಜನ ಈ ಮಧ್ಯೆ ಸಿಕ್ಕಿದ ಈ ಮಾನವಂತ ಹುಡುಗನ ಸ್ಥಿತಿ ಇರುವುದೊ ಬಿಡುವುದೊ ಈ ಊರೊಳಗೆ ಎಂಬ ಸಂಧಿಗ್ಧತೆಗೆ ಸಿಕ್ಕಿ ನರಳುತ್ತಿದೆ. ಪರದೇಶಿ ಬಡ್ಡಿ ಮಗ ದಾರಿಯಲ್ಲಿ ಸಿಕ್ಕಿದವನು, ಕುಂಟ ಎಂಟು ಚೇಷ್ಟೆ ಇತ್ಯಾದಿಯಾಗಿ ಊರಿನ ಪುಂಡಪೋಕರಿಗೆಲ್ಲ ಅವನನ್ನು ಚುಚ್ಚಿ ಹಂಗಿಸುತ್ತಾರೆ. ಅವನಪ್ಪನ ಮತ್ತು ಅಗಸರ ಲಕುಸುಮಿಯ ಗೆಣೆತನವನ್ನು ದೊಡ್ಡದು ಮಾಡಿ ಗುಲ್ಲೆಬ್ಬಿಸುತ್ತಾರೆ. ಕಡೆಗೆ

ಗುಡಿಸಲಿಗೆ ನುಗ್ಗಿ ಮಡಕೆ ಕುಡಕೆಯನ್ನೆಲ್ಲ ನುಚ್ಚುನೂರು ಮಾಡುತ್ತಾರೆ. ಇದೆಲ್ಲ ನಮ್ಮ ಕರ್ಮ ಎಂಬ ಅವ್ವನ ಅಸಹಾಯಕ ಸ್ಥಿತಿಯನ್ನು ಈ ಮಗ ಒಪ್ಪಲಾರ. "ಏನು ಹಿಟ್ಟು ಬಟ್ಟೆಯೋ? ತಿಕ್ಕೆ ಎಟುಕಿದರೆ ಮಕ್ಕಿಲ್ಲ, ಮಕ್ಕೆ ಎಟುಕಿದರೆ ತಿಕ್ಕಿಲ್ಲ"[೩] ಎಂದು ಅಪ್ಪನ ಕಸುಬನ್ನು ಒಮ್ಮೆ ಚಟಾರನೆ ತಿರಸ್ಕಾರಿಸಿ ಅಂದುಬಿಡುತ್ತಾನೆ. ಈ ಸಂದರ್ಭದಲ್ಲಿ ಅಪ್ಪ ಮಂಜಿನಂಥ ಮೌನಿಯಾದರೆ, ಮಗ ಶೀಥದ ಗಡ್ಡೆಯಂತೆ ತಣ್ಣಗಾಗಿ ಬಿಡುತ್ತಾನೆ.

ಕಡೆಗಡೆಗೆ ಮಗನ ಸಿಟ್ಟು-ಸೆಡವುಗಳು ಕಸ್ತೂರಿಗೂ ಅರ್ಥವಾಗುತ್ತವೆ. 'ಇನ್ನೊಂದು ಕಿತ್ತ ನಮ್ಮ ಸುದ್ದಿಗೆ ಬರಲಿ ನೋಡಕೋತೀನಿ, ಅಂತ ಅನ್ನುವಷ್ಟು ತಯಾರಾಗುತ್ತಾನೆ. ಅದೇ ಸಮಯ ಸಾಧಿಸಿ ತಿಮ್ಮಾಜಿ ಸದರ ಕೊಟ್ಟರೆ ಸವಾರಿ ಮಾಡ್ತಾರೆ. "ಇನ್ನು ಮ್ಯಾಲೆ ನಾವೂ ಕಲೀಬೇಕು" ಎಂದು ಅಪ್ಪನನ್ನು ಪ್ರತಿಭಟನೆಗೆ ತರಬೇತಿಗೊಳಿಸುತ್ತಾನೆ. ಪೇಟೆಗೆ ಹೋಗಿ ಏನಾದರು ವೃತ್ತಿಯಿಂದ ಮಾನವಂತರಾಗಿ ಬದುಕಬಹುದು ಎಂದು ಮಗ ತೀರ್ಮಾನಿಸುತ್ತಾನೆ. ಕಡೆಗೆ ಆ ಘಳಿಗೆಯೂ ಒದಗಿ ಬಂದುಬಿಡುತ್ತದೆ. ರಾತ್ರೋರಾತ್ರಿ ಗುಡಿಸಲಿಗೆ ನುಗ್ಗಿ ಮಡಕೆ ಕುಡಿಕೆಗಳನ್ನೆಲ್ಲ ನುಚ್ಚುನೂರು ಮಾಡಿದವರಲ್ಲಿ ಒಬ್ಬ ಮಗನ ಕೈಗೆ ಸಿಕ್ಕಿ ಬೀಳುತ್ತಾನೆ. "ಎಲ್ಲ ಮುಗಿದ ಮ್ಯಾಲೆ ಈ ಮನುಸ್ಯಾನೇಕೆ ಬಲಿ ತಗೊತ್ತಿ, ಎಂದು ಕರುಣೆಯಿಂದ ಕಸ್ತೂರಿ ಮಗನಿಗೆ ಅಡ್ಡ ನಿಲ್ಲುತ್ತಾನೆ ಮತ್ತು ಕೊನೆಗೆ ಮಗನ ನೈತಿಕ ಧೈರ್ಯ, ಸಾಹಸಗಳಿಗೆ ಮೆಚ್ಚಿ ಅವನ ಹಿಂದೆ ಹೊರಡಲು ಅಣಿಯಾಗುತ್ತಾನೆ. ಶತಶತಮಾನಗಳಿಂದ ಅರಕ್ಕೆ ಏರದೆ ಮೂರಕ್ಕೆ ಇಳಿಯದೆ ಹಳ್ಳಿಯ ಹಳೆಯುಳಿಕೆಯಂತಿದ್ದ ಬಡ ಕುಂಬಾರನೊಬ್ಬ ಹೀಗೆ ನಗರದತ್ತ ಹೊರಟ ಮಗನ ಬೆನ್ನೆರಳಾಗಿ.

"ಮುಂಜಾವು ಬದುಕು ಭಾಷೆ ರೀತಿಯೇ ಕಾವ್ಯದ ಆತ್ಮ ಅನ್ನೊದನ್ನ ಗಟ್ಟಿಗೊಳಿಸಿದೆ. ತತ್ವ ಸಿದ್ಧಾಂತಗಳ ಒಣ ಮೂಟೆ ಹೊತ್ತುಕೊಂಡು ಅನುಭವವೇ ಇಲ್ಲದೆ ಕಲ್ಪನೆಗಳ ಕಸ ಕಾರುತ್ತಾ ದೊಡ್ಡ ಸಾಹಿತಿಗಳಂತೆ ಬೀಗುತ್ತಿರುವ ಆ ಬೆಂಗಳೂರು ನಗರ ನಡುವೆ ನಿನ್ನ ಜೀವ ದೇಹದ ಈ ಕೃತಿ ಅದು ಹೇಗೆ ಸಲ್ಲುತ್ತಿದೆ ಎಂಬುದು ನನಗೆ ಕುತೂಹಲದ ನಿರೀಕ್ಷೆಯಾಗಿದೆ.

ಕನ್ನಡ ಕಾದಂಬರಿಗಳ ಓದಲಾರದ ಇಂದಿನ ಬರಡು ಸ್ಥಿತಿಯಲಿ ಮುಂಜಾವು ನವೋದಯ ಕಾಲದ ಆ ಸಮೃದ್ಧಿ ಸ್ಥಿತಿಯನ್ನು ನೆನಪಿಗೆ ತರುತ್ತದೆ......"[೪]

ಕೊಪಗಳೀಯ ಸುತ್ತಲಿನ ನಿಸರ್ಗವು ಸಹ ಈ ಕುಂಬಾರನ ಜೀವನದಲ್ಲಿ ಸಹಜವಾಗಿಯೇ ಬಹು ಮುಖ್ಯವಾದ ಪಾತ್ರವನ್ನು ವಹಿಸಿದೆ. ಎಂತಹ ಅಸಹಾಯಕ ಪರಿಸ್ಥಿತಿಯಲ್ಲೂ ಕಸ್ತೂರಿ

ಬೋರೆತಾಯಿಯ ಮಡಿಲಲ್ಲಿ ಕುಳಿತು ಅದಮ್ಯ ಚೈತನ್ಯವನ್ನು ಪಡೆದಿದ್ದಾನೆ. ಕೋಪಗಳಿಯ ಆ ಬಡ ಕುಂಬಾರನಿಗೆ ತಲ ತಲಾಂತರದಿಂದಲೂ ಈ ಬೋರೆತಾಯಿಯೆ ದಿಕ್ಕಾಗಿದ್ದಳು. "ತರಗಿಗೆ, ಹಂಗರಕಟ್ಟಿಗೆ, ಸೌದೆಗೆ, ಮಣ್ಣಿಗೆ, ಆಡೋಕೆ, ಹಾಡೋಕೆ, ಮಲಗೋಕೆ, ಮೇಯೋಕೆ, ಒಂದೇ ಎರಡೇ", 'ಅದಕು ಇದಕು ಎದಕು' ಬೋರೆಯ ಬೇಕಾಗಿದ್ದಳು. ಅವರು ಆ ನಿಸರ್ಗದ ಕೂಸುಗಳು. ಕಡೆಗೆ ಇಂಥ ಬೋರೆ ತಾಯಿಯನ್ನು ಆಗಲಿ ಹೊರಡುವಾಗ ಕಸ್ತೂರಿ ಹೊಕ್ಕಳು ಬಳ್ಳಿಯನ್ನು ಕತ್ತರಿಸಿದ ಹಸುಗೂಸಿನಂತೆ ಯಾತನೆ ಪಡುತ್ತಾನೆ. ಉಪಯೋಗದ ದೃಷ್ಟಿಯಿಂದ ಮಾತ್ರ ನಿಸರ್ಗವನ್ನು ಕಂಡಿದ್ದ ತಿಮ್ಮಾಜಿಗೆ ಅಪ್ಪನ ರೀತಿಯಲ್ಲಿ ಅದರರೊಂದಿಗೆ ಜೈವಿಕ ಸಂಬಂಧವನ್ನು ಹೊಂದಿದವನಲ್ಲ. ಆದ್ದರಿಂದಲೇ ಈ ಕಾಡು ಕೊಂಪೆಯಲ್ಲಿ ಮರ್ಯಾದೆಗೆಟ್ಟು ಸಾಯುವುದಕ್ಕಿಂತ, ದೂರದ ಪೇಟೆಗೆ ಹೋಗಿ ಮಾನವಂತರಾಗಿ ಬದುಕುವುದು ಲೇಸು ಎಂದು ಅಪ್ಪನನ್ನು ಒಪ್ಪಿಸಿ ಕರೆದುಕೊಂಡು 'ಮುಂಜಾವಿ'ನತ್ತ ಹೋರಡುತ್ತಾನೆ.

ಅವಶ್ಯಕತೆಯೇ ಅನ್ವೇಷಣೆಯ ತಾಯಿ ಎಂಬ ಮಾತುಂಟು. ಮಾನವನ ಅದಮ್ಯವಾದ ಪ್ರವೃತ್ತಿಗಳಾದ ಹಸಿವು ಮತ್ತು ಕಾಮ ಇವು ಅವನ ಹೊಸ ಹೊಸ ಅನ್ವೇಷಣೆಗಳಿಗೆ ಮೂಲ ಪ್ರಚೋದಕ ಶಕ್ತಿಯಾಗಿ ಕೆಲಸ ಮಾಡಿದೆ. ಇವುಗಳಿಂದಾಗಿಯೇ ಮಾನವನ ಇತಿಹಾಸ ಹುಟ್ಟಿಕೊಂಡಿತು. ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಗಳಿಗೆ ಮೂಲ ನೆಲೆ ಈ ಅನ್ನ - ಕಾಮಗಳೇ. ಅನ್ನದ ಪೂರೈಕೆಯಿಂದ ತೃಪ್ತಿ ಪಟ್ಟುಕೊಂಡ ಮನುಷ್ಯ ತನ್ನ ಕಾಮವನ್ನು ಕಲೆಯ ಮಾರ್ಗದಲ್ಲಿ ಹರಿಯಬಿಟ್ಟು ಉನ್ನತ ಕಾವ್ಯ ಕಲೆಗಳನ್ನು ಸೃಷ್ಟಿಸಿದ.

ಇಲ್ಲಿ, ಕೊಪಗಳಿಯ ಬಡ ಕುಂಬಾರ ಒಮ್ಮೆ ಬರಗಾಲದಲ್ಲಿ ಅನ್ನವನ್ನು ಅನ್ವೇಷಣೆ ಮಾಡಿದ ರೀತಿ ಅಸಾಧಾರಣವಾಗಿದೆ. ಬರಗಾಲಕ್ಕೆ ತುತ್ತಾಗಿ ಹಲವರು ಸತ್ತರು, ಕೆಲವರು ಊರು ಬಿಟ್ಟ, ಆದರೆ ಇನ್ನು ಕೆಲವರನ್ನು ಕಸ್ತೂರಿಯು ಇದ್ದಲ್ಲಿಯೆ ಬದುಕಿಸಿಕೊಂಡ. ಊರ ಸುತ್ತಿನ ನಿಸರ್ಗಗದಲ್ಲಿ ಸಿಕ್ಕುವ ಗೆಡ್ಡೆ, ಗೆಣಸು, ಸೊಪ್ಪು, ಸೆದೆ ಇತ್ಯಾದಿ ಏನೆಲ್ಲವನ್ನೂ ತಿಂದು ಮನುಷ್ಯ ಬದುಕಬಹುದು ಎಂಬುದನ್ನು ಆತ ಪ್ರಯೋಗ ಮಾಡಿ ತಿನ್ನಲು ಕಲಿಸಿದ; ಜೀವ ಉಳಿಸಿದ; ಹಾಡು ಹಾಡಿ ನಗಿಸಿದ.

ಎರಡನೇಯದಾಗಿ, ಕಸ್ತೂರಿಯು 'ಚಕಮಕಿ'ಯಲ್ಲಿ ಬೆಂಕಿಯನ್ನು ಕಂಡುಕೊಂಡಿದ್ದು– ಆದಿಮಾನವನ ಬೆಂಕಿಯ ಅನ್ವೇಷಣೆಗೆ ಹಿಡಿದ ರೂಪಕದಂತಿದೆ. ಒಮ್ಮೆ ಕಸ್ತೂರಿ ಬೆಂಕಿಕಡ್ಡಿಗಾಗಿ

ಊರು ಸುತ್ತುತ್ತಿರುವಾಗ ನಾಯಿಗಳು ಅಟ್ಟಿಸಿಕೊಂಡು ಬಂದವು. ಸಿಕ್ಕಿದ ಕಲ್ಲು ತೆಗೆದುಕೊಂಡು ಕತ್ತಲಲ್ಲಿ ನಾಯಿಗಳಿದ್ದ ಕಡೆ ತೂರಿದಾಗ ಅದು ಮತ್ತೊಂದು ಕಲ್ಲಿಗೆ ತಾಕಿ ಕಿಡಿ ಹಾರಿತು. ಆಗ ಕಸ್ತೂರಿಯ ತಲೆಯಲ್ಲೊಂದು ಮಿಂಚು ಹೊಳೆಯಿತು. ಗುಡಿಸಲಿಗೆ ಹೋಗಿ ಬೆಣಚು ಕಲ್ಲಿನ 'ಚಕಮಕಿ'ಯಿಂದ ಕಡೆಗೂ ಬಿಡದೆ ಪ್ರಯತ್ನಿಸಿ ಬೆಂಕಿಯನ್ನು ಹೊತ್ತಿಸಿದ.

ಮೂರನೆಯದಾಗಿ, ಅಕ್ಷರ ಜ್ಞಾನ: ತಿಮ್ಮಾಜಿ ಕಾಲು ಮುರಿದುಕೊಂಡು ಪೇಟೆಯಲ್ಲಿದ್ದಾಗ, ಹೊಟ್ಟೆಪಾಡಿಗಾಗಿ ಒಬ್ಬ ಲಾರಿ ಮಾಲಿಕನ ಬಳಿ ಕಾವಲುಗಾರನಾಗಬೇಕಾಯಿತು. ಆದರೆ ಹೋಗಿಬರುವ ಲಾರಿಗಳ ಲೆಕ್ಕ ಇಡಲು ತಿಳಿಯದೆ ಆತ ಬೈಸಿಕೊಂಡ. ಆಗ ಛಲಗಾರನಾದ ಆ ಹುಡುಗ ಲಾರಿ ಡ್ರೈವರ್ ಒಬ್ಬನಿಂದ ಓದಲು ಬರೆಯಲು ಕಲಿತು ತನ್ನ ಹೊಟ್ಟೆಪಾಡಿನ ಕಾವಲು ಕೆಲಸವನ್ನು ಉಳಿಸಿಕೊಂಡ. ಈ ಅಕ್ಷರವಿದ್ಯೆ ತಿಮ್ಮಾಜಿಯ ಕೈಗೆ ಒಂದು ಹೊಸ ಅಸ್ತ್ರವೇ ಸಿಕ್ಕಂತಾಯಿತು. ಅವನ ಕಣ್ಣುಗಳು ತಿಳುವಳಿಕೆಯಿಂದ ಹೊಳಪಾದವು. ಬದುಕು ಒಡ್ಡಿದ ಸವಾಲು ತಿಮ್ಮಾಜಿಗೆ ಅಕ್ಷರ ವಿದ್ಯೆಯನ್ನು ಪಡೆಯಲು ಪ್ರಚೋದನೆ ನೀಡಿತು. 'ನಾಕಕುಸರ ಕಲಿಸೋ!' ಅಪ್ಪನ ಕನಸ ನೆನಸು ಮಾಡಿದ.

ಮೇಲಿನ ಕೆಲವು ಅನ್ವೇಷಣೆಗಳನ್ನು ವಿಶ್ಲೇಷಿಸಿದಾಗ, ಬಡವರ ಬದುಕಿನ ಮುಖ್ಯಾನುಭವವಿರುವುದು ಅವರ ಗೋಲಿನಲ್ಲಲ್ಲ. ಆ ಗೋಳನ್ನು ಮೀರುವ ಅವರ ಕ್ರಿಯಾಶೀಲತೆಯಲ್ಲಿ ಎಂಬ ಮಾತು ಸ್ಪಷ್ಟವಾಗುತ್ತದೆ. ಮುಂಜಾವು ಕಾದಂಬರಿಯ ಉದ್ದಕ್ಕೂ ಹೀಗೆ ಹೋರಾಟಶೀಲ ಬದುಕಿದ ಇನ್ನೂ ಅನೇಕ ಜೀವಿಗಳುಂಟು. ಉದಾ: ಲಕುಸುಮಿ, ಹಕಲಪ, ಗಂಗೆ ನಂಜವ್ವ- ಇತ್ಯಾದಿ.

ಮುಂಜಾವು ಕಾದಂಬರಿಯದು ಜಾನಪದ ಕಥಾ ತಂತ್ರ. ಹಳ್ಳಿಯ ಬಡ ಕುಂಬಾರನ ಕಥೆಯನ್ನು ಹೇಳಲು ಈ ತಂತ್ರವನ್ನು ಚೆನ್ನಾಗಿ ದುಡಿಸಿಕೊಳ್ಳಲಾಗಿದೆ. ಆ ಕಲಾವಿದನ ಬದುಕನ್ನು ಅವನದೇ ಆದ ಆಚರಣೆಯ ಶೈಲಿಯಲ್ಲಿ ಚಿತ್ರಿಸಲಾಗಿದೆ. ನಮ್ಮ ಜಾನಪದ ಒಡಲಲ್ಲಿ ಕರಗಿಹೋಗಿರುವ ರಾಮಾಯಣ, ಮಹಾಭಾರತದ ಕಥಾಪ್ರಸಂಗಗಳು ಮುಂಜಾವು ಕೃತಿಯಲ್ಲಿ ಗರ್ಭಕಟ್ಟಿವೆ. ಆ ಪೌರಾಣಿಕ ವ್ಯಕ್ತಿಗಳ ಅಲೌಕಿಕ ದರ್ಶನ ಸಂಸ್ಪರ್ಶನಗಳಿಂದ ಕೊಪಗಳಿಯ ಸುತ್ತಣ ಬೋರೆಯ ಗಿಡ, ಮರ, ಬಳ್ಳಿ, ಮುಳ್ಳು, ಕಲ್ಲು, ಬಂಡೆ, ಗುಡ್ಡ, ನೆಲ, ಜಲ ಎಲ್ಲ ಪುನೀತವಾಗಿವೆ. ಎಲ್ಲ ಅಕ್ಕ ತಂಗಿಯರ ಬೇವಿನಕಟ್ಟೆ, ಅಳ್ಳೆ ಪಠದಯ್ಯನ ಗುಡಿ,

ಜಡೆ–ಮುನಿಗುಡ್ಡ, ಹನುಮಂತನ ಸಾಲು ಗುಡ್ಡ ಇತ್ಯಾದಿಗಳು ಆ ಹಳ್ಳಿಗರ ನಂಬಿಕೆಯ ಶ್ರದ್ಧೆಯ ಭಯದ ಭಕ್ತಿಯ ನಿತ್ಯ ಯಾತ್ರಾ ಕೇಂದ್ರಗಳಾಗಿವೆ. ಇಂಥ ಪೌರಾಣಿಕ ಪರಿವೇಶದ ಮುಸುಕಿದ ಮಧ್ಯೆ 'ಕೊಪಗಳಿ' ಎಂಬ ಊರಿತ್ತು. ಆ ಕೊನೆಗೆ ಒಂದು ಗುಡಿಸಲಿತ್ತು. ಅದರಲ್ಲಿ ಕಸ್ತೂರಿ ಎಂಬ ಒಬ್ಬ ಬಡ ಕುಂಬಾರನಿದ್ದ.

ಅವನಿಗೆ ತಿಮ್ಮಾಜಿ ಎಂಬ ಮಗನಿದ್ದ. ಅವರು ಹೀಗಿರುವಾಗ ಒಂದು ಒಂದು ದಿನ ಏನಾಯಿತೆಂದರೆ...? ಹೀಗೆ ಕಥೆ ಹೇಳಲ್ಪಟ್ಟಿದ್ದರೂ ಇದೇನು ಪುರಾಣವಲ್ಲ. ಕಸ್ತೂರಿಯನ್ನು ಕುರಿತಾದ ಒಂದು ಆಧುನಿಕ ಕಾದಂಬರಿ ಎಂಬ ಎಚ್ಚರವೂ ಇದೆ.

ಸಾಂಪ್ರದಾಯಿಕವಾದ ಜಾನಪದ ಕಥನ ಕ್ರಮ ಮತ್ತು ಕಥನ ಶೈಲಿಯನ್ನು ಮುರಿಯುತ್ತ 'ಮುಂಜಾವು' ತನ್ನದೇ ಆದ ಕಥಾತಂತ್ರ ಹಾಗೂ ಶೈಲಿಯನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುತ್ತದೆ. ಇದೊಂದು ಹೊಸ ಹೆಜ್ಜೆ. ಇದು ಬಂಡಾಯ ಮನೋಧರ್ಮವನ್ನು ಬಿಟ್ಟುಕೊಡದ ಆದರೂ ಅದ್ಭುತ ರಮ್ಯ ಶೈಲಿಯ ಒಂದು ಕಥನ ಕ್ರಮವಾಗಿದೆ. ಅದರ ಆಂತರಿಕ ಅಲಂಕರಣವು ಬದುಕಿನ ದಾರುಣ ಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸುವುದರಿಂದ, ಇದೊಂದು ಕೇವಲ ಕಥಾ ಕಾಲಕ್ಷೇಪ ಎಂಬ ಅಪವಾದದಿಂದ ಮುಕ್ತವಾಗಿದೆ. 'ಕಥಾನಾತ್ಮಕ ಬಿಡುವು ಇದರ ಪ್ರಧಾನ ಲಕ್ಷಣ' ಎಂಬ ಡಿ.ಆರ್.ನಾಗರಾಜ್ ಅವರ ಮಾತಿಗೆ ಹಲವಾರು ಪ್ರಸಂಗಗಳನ್ನು ಇಲ್ಲಿ ಉದಾಹರಿಸಬಹುದು. ಹನುಮಯ್ಯನ ಪ್ರಸಂಗ, ಗೂರ್ಪಪಯನ ಕಾಫಿ ಚಟ; ಕೋಳಿ ಕೊಯಿದು ಸಾರು ಮಾಡುವುದು; ಚಿಲ್‌ವಾರದ ಪಾತ್ರೆ ಪ್ರಸಂಗ; ಗಂಗೆ–ಹಕಲಪರ ಹಕಲೆ ಪ್ರಸಂಗಗಳು ಇತ್ಯಾದಿ.

ಕಸ್ತೂರಿಯದು ಜನಪದ ಹಾಡುಗಾರರ ತಳಿ. ಅದು ಅವನ ಗುರು ಹಕಲಪನಿಂದ ದತ್ತವಾಗಿ ಬಂದಿತ್ತು. ಆದರೆ ಇವನೇ ಆ ತಳಿಯ ಕೊನೆಯ ಸುಳಿ. ಕಸ್ತೂರಿಯನ್ನು ಅವನ ಕಸುಬು ಮತ್ತು ಹಾಡುಗಳಿಂದ ಬೇರ್ಪಡಿಸಿ ನೋಡಲು ಸಾಧ್ಯವೇ ಇಲ್ಲ. ಅವನ ಹಾಡಿನ ಕಣಜದಲ್ಲಿ ಬದುಕಿನ ಎಲ್ಲ ಸಂದರ್ಭಕ್ಕೂ ನೋವು, ನಲಿವು, ಭಯ, ಭಕ್ತಿ, ಪ್ರೀತಿ ಪ್ರೇಮ ಇತ್ಯಾದಿ ಎಲ್ಲಕ್ಕೂ ಒಂದು ಪದ, ಒಂದು ಹಾಡು, ಒಂದು ಒಡಪು ಒಡಮೂಡುತ್ತಿದ್ದವು. ಇದರಲ್ಲೇ ತನ್ನ ಕಾಯ–ಕಾಯಕ ತುಂಬಿಕೊಂಡಿದ್ದ ಕಲೆಗಾರ ಅವನು.

ಮುಂಜಾವು ಕಾದಂಬರಿಯ ಶೈಲಿ ಕಾವ್ಯ ಹತ್ತಿರವಾಗುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು. ಕಸ್ತೂರಿಯ ಗುಡಿಸಲನ್ನು ಊರಿನ ಪುಂಡ ಪೋಕರಿಗಳು ನಾಶೆ ಮಾಡಿದಾಗ:

"ಗುಡಿಸಲೀಗ ಮುರುಕವಾಗಿತ್ತು
ಅವಕೀಗ ಗೋಡೆ ಇರನಿಲ
ಬಾಗಿಲು ಇರನಿಲ
ಚಾವಣಿ ಇರನಿಲ
ಅದೀಗ ಬಟ್ಟಂ ಬಯಲು
ಬೋರೆಗೊಂದು ಕರಿ ಚಿಕ್ಕಿ ಇದ್ದಂಗೆ"

ಕಸ್ತೂರಿಯ ಬದುಕಿನ ಮೇಲೆ ಊರ ಜನ ಮಾಡಿದ ದೌರ್ಜನ್ಯಕ್ಕೆ, ಆಕ್ರಮಣಕ್ಕೆ ಒಡ್ಡಿದ ಬಯಲ ರೂಪಕ, ಅನುಭವ ಮಂಟಪ ಇದು.

ಅಪ್ಪ ಚಲುವರಾಯ ಸೋಮಿಯ ಸ್ತುತಿಯಿಂದ ಆರಂಭವಾದ 'ಮುಂಜಾವು' 'ಮಲ್ಲಯ್ಯ ಮಲಸೋಮಿಯ ಸ್ತುತಿ' ಯೊಂದಿಗೆ ಮುಕ್ತಾಯವಾಗುತ್ತದೆ. ಕಸ್ತೂರಿ ಈ ಸೋಮಿಯ ಗುಡಿಗೆ ಯಾತ್ರೆ ಹೊರಟ ಪಯಣಿಗ– ಇದಕ್ಕೆ ಕೊನೆ ಇಲ್ಲ, ಇದು ನಿರಂತರವಾದ ಬದುಕಿನ ಪಯಣ. ಕಸ್ತೂರಿಯಂಥ ಕಲಾವಿದರು ಹುಟ್ಟುತ್ತಾರೆ, ಬದುಕುತ್ತಾರೆ, ಸಾಯುತ್ತಾರೆ. ಅವರು ಮಾಡಿದ ಮಡಕೆ ಒಡೆದಾವು; ಆದರೆ ಅವರು ಹಾಡಿದ ಹಾಡು ಉಳಿದಾವು ಹೀಗೆ ಬದುಕಿನ ಹಾಡ ಹಿಡಿವ ಬಿಡುವ ಆಟ ಯುಗ ಯುಗವೂ ಚಣ ಚಣವೂ ನಡೆದೇ ಇದೆ.

ಮುಂಜಾವು ಕಾದಂಬರಿಯಲ್ಲಿ ಸೊಗಡು ಸೂಸುವ ಜಾನಪದ ನುಡಿಗಟ್ಟುಗಳು ಒಡಪಗಳು, ಆಟಗಳು ಮತ್ತು ಆಚರಣೆಗಳು ಇಡಿಕಿರಿದು ತುಂಬಿವೆ. ಇಲ್ಲಿ ಬಳಸಿರುವ ಭಾಷೆ ಜಾನಪದ ಬದುಕಿನ ಒಂದು ಬಣ್ಣದ ಗೋಳ. ಅದು ಕೊಪಗಳಿಯ ಸುತ್ತಣ ನಿಸರ್ಗದಲ್ಲಿ ಚಿಮ್ಮುವ ಹಾಡುವ ಕಾರಂಜಿ.

ವಸ್ತುವಿಗೆ ತಕ್ಕ ಭಾಷೆಯನ್ನು ಬಳಸುವುದು ಹೇಗೆಂಬುದೇ ಶೈಲಿಯ ಸಮಸ್ಯೆ, ಕನ್ನಡದಲ್ಲಿ ಬಂಡಾಯ ಹಾಗೂ ದಲಿತ ಲೇಖಕರು ತಮ್ಮ ವಸ್ತುವಿಗೆ ತಕ್ಕ ಶೈಲಿಯನ್ನು ಸಾಧಿಸಿಕೊಳ್ಳುವಲ್ಲಿ ಕೆಲವರು ಸಫಲರಾಗಿದ್ದಾರೆ. ದೇವನೂರ ಮಹಾದೇವ ತನ್ನ ಕಥೆ ಕಾದಂಬರಿಗಳಲ್ಲಿ ಮೈಸೂರು

ಜಿಲ್ಲೆಯ ಒಂದು ಭಾಗದ ಆಡುಭಾಷೆಯನ್ನು ಬಳಸಿ, ಆ ಉಪಭಾಷೆಯ ಸಾಧ್ಯತೆಯನ್ನು ಈಗಾಗಲೇ ಪ್ರಮಾಣ ಮಾಡಿ ತೋರಿಸಿದ್ದಾರೆ. ಅರವಿಂದ ಮಾಲಗತ್ತಿ ತನ್ನ ಕೃತಿಗಳಲ್ಲಿ ಇಂಥವೇ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದೀಗ ಕನ್ನಡ ಕಾದಂಬರಿಗಳಲ್ಲಿ ಉಪಭಾಷಾ ಬಳಕೆಯ ಪ್ರವೃತ್ತಿ ಯಾವತ್ತಿಗಿಂತ ಮಿಗಿಲಾಗುತ್ತಿದೆ. ಈ ದಶಕವು ಕನ್ನಡದಲ್ಲಿ ಉಪಭಾಷಾ ಕಾದಂಬರಿಗಳ ಯುಗವೆಂದು ಕರೆಸಿಕೊಳ್ಳುತ್ತದೆಯೊ ಏನೊ! ಈ ಪಟ್ಟಿಗೆ ಕಾ.ತ.ಚಿಕ್ಕಣ್ಣನವರ 'ಮುಂಜಾವು' ಕೂಡ ಸೇರುತ್ತದೆ. 'ಈ ದಶಕದ ಸಾಹಿತ್ಯ ಚಳುವಳಿಗಳ ಸಂದರ್ಭದ ಪ್ರಮುಖ ಸಾಹಿತ್ಯದ ಆಶಯಗಳನ್ನು ಮೈಗೂಡಿಸಿಕೊಂಡಿದೆ' ಇದು.

ಇಷ್ಟಾದರೂ ಚಿಕ್ಕಣ್ಣನವರು ಭಾಷಾ ಪ್ರಯೋಗದ ಬಗ್ಗೆ ಸ್ವಲ್ಪ ಗೊಂದಲಕ್ಕೊಳಗಾಗಿದ್ದಾರೆ ಎಂಬುದನ್ನು ಅಲ್ಲಗಳೆಯವಂತಿಲ್ಲ. ವ್ಯಾಕರಣ ಮತ್ತು ಭಾಷಾಶಾಸ್ತ್ರದ ನಿಯಮಗಳಿಗೆ ಅಪವಾದ ಎನ್ನಬಹುದಾದ ಹಲವಾರು ಬಗೆಯ ಪ್ರಯೋಗ ದೋಷಗಳು ಇಲ್ಲಿವೆ. ಎಂದರೆ ಹಾ.ಮಾ. ನಾಯಕರು ಗುರ್ತಿಸಿರುವಂತೆ, ಲೇಖಕ ನಿರ್ಮಿತ ಗ್ರಾಮ್ಯ ಅನೇಕ ವೇಳೆ ಕೃತಕ ಎನಿಸುವಷ್ಟು ಎದ್ದು ಕಾಣುತ್ತದೆ. ಬದುಕನ್ನು ಕುರಿತ ತಾತ್ವಿಕ ಜಿಜ್ಞಾಸೆ ಅನೇಕ ಕಡೆ ಇದು ನಿಜವಾಗಿಯೂ ಪಾತ್ರದಿಂದ ಗ್ರಹಿಸಲ್ಪಟ್ಟದ್ದೋ ಅಥವಾ ನಿರೂಪಕನದೊ ಎಂಬ ಸಂಶಯ ಕಾಡುತ್ತದೆ. ನಿರೂಪಕನ ಶಿಷ್ಟ ಯೋಚನೆಗಳೂ ಕಸ್ತೂರಿಯ ಗ್ರಾಮ್ಯ ಭಾಷೆಯಲ್ಲಿ ಹೇಳಲ್ಪಟ್ಟು ಅಸಂಗತವೆನಿಸುತ್ತದೆ. ಆದ್ದರಿಂದ "ಅನೇಕ ದೃಷ್ಟಿಗಳಿಂದ ಉತ್ತಮವಾದ ಈ ಬರವಣಿಗೆಯಲ್ಲಿ ಲೇಖಕ ನಿರ್ಮಿತ ಗ್ರಾಮ್ಯ ಭಾಷೆ ಒಂದು ದೊಡ್ಡ ಕೊರತೆಯಾಗಿ ಪರಿಣಮಿಸಿದೆ." ಇಂಥ ಪ್ರಥಮ ದರ್ಜೆಯ ಕಾದಂಬರಿಯು ಗ್ರಾಮ್ಯ ಶೈಲಿಯ ಅತಿ ಬಳಕೆಯಿಂದಾಗಿ ತನ್ನ ಓದುಗರ ವಲಯವನ್ನು ಸೀಮಿತಗೊಳಿಸಿಕೊಂಡಿತು. ಇಲ್ಲಿ ನನ್ನ ಅಗ್ರಹಪೂರ್ಣವಾದ ಬಯಕೆ ಏನೆಂದರೆ ಸಂವಾದಕ್ಕೆ ಗ್ರಾಮ್ಯವನ್ನು ಬಳಸಿ, ಉಳಿಸಿ ನಿರೂಪಣೆಯನು ಶಿಷ್ಟ ಭಾಷೆಯಲ್ಲಿಯೇ ಬರೆದಿದ್ದರೆ. 'ಮುಂಜಾವು' ಇನ್ನಷ್ಟು ಓದುಗರಿಗೆ ತಲುಪುತ್ತಿತ್ತಲ್ಲ ಎಂಬುದು. ಏಕೆಂದರೆ ಕೃತಿಯೊಂದು ಮೊದಲು ಓದುಗನಿಗೆ ಸಂವಹನಗೊಳ್ಳಬೇಕು, ತದನಂತರ ಉಳಿದೆಲ್ಲ ಮಾತು.

"ಮಣ್ಣಿಗೆ ಜೀವ ತುಂಬಿ ಮಡಕೆ ತಯಾರಿಸುವ ಜೀವಿಗಳ ನೋವು, ನಲಿವುಗಗಳ ಸುತ್ತ ಮುತ್ತ ಕಾದಂಬರಿಯ ಹಚ್ಚಡದ ನೇಯ್ಗೆಯಾಗಿದೆ. ನೆಲ ಮುಗಿಲುಗಳ ನಡುವೆ ತೆರೆದುಕೊಳ್ಳುವ ಇಲ್ಲಿನ ಬದುಕು ಸಂಕೀರ್ಣ; ಪಾತ್ರಗಳು ವೈವಿಧ್ಯಮಯ. ದಿನವಿಡೀ ದುಡಿದರೂ ಹಸಿವನ್ನೇ

ಉಡುವ, ತೊಡುವ, ಇಡೀ ಶೋಷಿತ ಜನಾಂಗವನ್ನೇ ಪ್ರತಿನಿಧಿಸುವ ಕಸ್ತೂರಿಯಂಥ ಮಂದಿ, ತಮ್ಮ ಕಠೋರ ಬವಣೆಯಲ್ಲೂ ಹೇಗೆ ಸೌಂದರ್ಯೋಪಾಸನೆ, ಪ್ರಕೃತಿ ಪ್ರೇಮ, ರಸಿಕತೆಗಳನ್ನು ಮರೆಯುತ್ತಾರೆ ಎಂಬುದನ್ನು ಈ ಕೃತಿ ಢಾಳಾಗಿ ಸಾಬೀತು ಪಡಿಸುತ್ತದೆ. ಆಡುಮಾತಿನ ಭಾಷೆಯನ್ನು ಭಿನ್ನಾಣವಾಗಿ ಬಳಸುತ್ತ, ಶೋಷಿತರ ದುರಂತಕ್ಕೆ ಕನ್ನಡಿ ಹಿಡಿಯುತ್ತದೆ.....”[೫]

“ಕಾದಂಬರಿಯಲ್ಲಿ ಪ್ರಕೃತಿಯು ಬದುಕಿನ ಒಂದು ಭಾಗವಾಗಿ ಬಂದಿದೆ. ಪ್ರಕೃತಿ ಹೇಗೆ ನಿಗೂಢವೂ ರಹಸ್ಯವೂ ಆಗಿದೆಯೋ ಬದುಕು ಕೂಡಾ ಅಷ್ಟೇ ನಿಗೂಢ, ರಹಸ್ಯ. ಈ ರಹಸ್ಯವನ್ನು ಅರಿಯಲೆಂದೇ ಪ್ರಕೃತಿ ಕಾದಂಬರಿಯುದ್ದಕ್ಕೂ ಕಸ್ತೂರಿ ಮತ್ತು ತಿಮ್ಮಾಜಿಯ ಬದುಕಿನೊಂದಿಗೆ ಬೆರೆತುಕೊಂಡೇ ಬಂದಿದೆ. ಬೋರೆ, ಜಡೆ ಮುನಿಗುಡ್ಡ, ತೊರೆ ಮುತುಗದ ಮರ, ಹೊಂಗೆ ಮರ, ಕಲ್ನಾರು ಹಳ್ಳ, ಸೂರ್ಯೋದಯ, ಸಂಜೆ, ಹಗಲು, ರಾತ್ರಿಯಿಂದ ಕೂಡಿರುವ ಪ್ರಕೃತಿಯ ವಿವರಗಳು ಬದುಕಿಗೆ ಶೃತಿಹಿಡಿದು ನಡೆದಂತೆ ಕಾಣುತ್ತವೆ. ಪ್ರಕೃತಿಯ ಹೊಚ್ಚ ಹೊಸತನ ಮನುಷ್ಯ ಜೀವನಕ್ಕೆ ಒಂದು ಕಳೆಯನ್ನು ತಂದಿದೆ. ಕಸ್ತೂರಿ ಮತ್ತು ತಿಮ್ಮ ಕೂಡುವುದು, ಮಕ್ಕಳಿಗಾಗಿ ಹಂಬಲಿಸುವುದು, ಕಸ್ತೂರಿ ಮತ್ತು ಲಕ್ಷ್ಮಿಯ ಮಿಲನದ ಈ ಸಂದರ್ಭದಲ್ಲಿ ಬರುವ ಪ್ರಕೃತಿ ವರ್ಣನೆಯನ್ನು ಜ್ಞಾಪಿಸಿಕೊಳ್ಳಬಹುದು. ಹೀಗಾಗಿ ಈ ಕಾದಂಬರಿಯಲ್ಲಿ ಪ್ರಕೃತಿಯು ಅದಮ್ಯವಾದ ಜೀವನೋತ್ಸಾವ, ಅದ್ಭುತವಾದ ನಿರೀಕ್ಷಣಾ ಸಾಮರ್ಥ್ಯ ಹಾಗೂ ವೈವಿಧ್ಯಮಯವಾದ ಬದುಕಿನ ಸ್ವರೂಪದ ಸಂಕೇತವಾಗಿಯೂ ಬಂದಿದೆ.”[೬]

ಹೀಗೆ ಈ ಕಾದಂಬರಿ ವಸ್ತು ಮತ್ತು ಅದರ ನಿರ್ವಹಣೆ ನಿರೂಪಣೆ ವಿಧಾನದಲ್ಲಿ ಹೊಸತನವನ್ನು ಸಾಧಿಸುವ ಪ್ರಯತ್ನದೊಂದಿಗೆ ಶೋಷಣೆಗೆ ಒಳಗಾದ ವ್ಯಕ್ತಿಯೊಬ್ಬ ತನ್ನ ತಿಳಿವಳಿಕೆಯ ಮೂಲಕ ಭವಿಷ್ಯದ ಬದುಕನ್ನು ಸುಂದರಗೊಳಿಸಿಕೊಳ್ಳಲು ಪ್ರಯತ್ನಿಸುವುದು ಈ ಕಾದಂಬರಿಯ ಹೆಚ್ಚುಗಾರಿಕೆ. ಈ ದಶಕದ ಸಾಹಿತ್ಯ ಚಳುವಳಿಗಳ ಸಂದರ್ಭದ ಪ್ರಮುಖ ಸಾಹಿತ್ಯದ ಆಶಯಗಳನ್ನು ಮೈಗೂಡಿಸಿಕೊಂಡಿರುವ ಈ ಕಾದಂಬರಿಯು ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆಯಾಗಿದೆ.

ಕಾ.ತ. ಚಿಕ್ಕಣ್ಣನವರ 'ದಂಡೆ'

ದಂಡೆ: ಮದುವೆಯಾಗಿ ನಲವತ್ತು ವರುಷ ಕಳೆದು ಗಂಡನನ್ನು ಮೂವತ್ತೈದು ವರುಷದ ಹಿಂದೆಯೇ ಕಳಕೊಂಡು ಮಗನನ್ನು ಇಪ್ಪತ್ತು ವರುಷದಿಂದ ದೂರ ಮಾಡಿಕೊಂಡು ಈಗ ಇಳಿಹೊತ್ತಿನಲ್ಲಿ

"ಅವ್ವಯ್ಯ
ವರ್ತಮಾನ ಭೂತಗಳೊಡನೆ ಜೀಕಾಲೆಯಾಡುತ್ತಾ
ತನ್ನ ಬದುಕನ್ನು ಬಿಚ್ಚಿಡುವ
'ಕಥನವೇ"–

ಕಾ.ತ.ಚಿಕ್ಕಣ್ಣನವರ 'ದಂಡೆ ಕಾದಂಬರಿಯ ವಸ್ತು ಪ್ರಪಂಚ. ಕಾದಂಬರಿಯ ಉದ್ದಕ್ಕೂ ಹರಿದು ಬರುವ ಅವ್ವಯ್ಯನ ಕಥಾವಾಹಿನಿ 'ದಂಡೆ'ಯ ಪ್ರಧಾನಧಾರೆ. ಇದು ಮುಖ್ಯವಾಗಿ ಹಳ್ಳಿಯ ಹೆಣ್ಣು ಮಗಳೊಬ್ಬಳು ತನ್ನ ನಿಡಿದಾದ ಬಾಳಿನಲ್ಲಿ ಎದುರಿಸಿದ ಸಾಲುಗಳ ಕಥನ. ಈ ಕಥನದ ಜೊತೆಗೇ ಮತ್ತೆರಡು ಕಥನಗಳು ಕೂಡಿಕೊಳ್ಳುತ್ತವೆ. ಮೊದಲ ಹಂತದಲ್ಲಿ ಗಂಡ ರಾಯಣ್ಣನ ಸ್ವಾತಂತ್ರ್ಯ ಹೋರಾಟದ ಕಥೆ ಕೂಡಿಕೊಂಡರೆ ಎರಡನೆಯ ಹಂತದಲ್ಲಿ ಮಗ ಗುರುರಾಜನ ಸಮಾಜ ಸುಧಾರಣೆಯ ಕಥನ ಸೇರಿಕೊಳ್ಳುತ್ತದೆ. ಹೀಗಾಗಿ 'ದಂಡೆ'ಯಲ್ಲಿ ಸ್ವಾತಂತ್ರ್ಯ ಪೂರ್ವ ಭಾರತ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆಯೂ ಹೆಣೆದುಕೊಂಡಿದೆ. ವೈಯಕ್ತಿಕ ಅನುಭವಗಳ ಕಥನ, ಚರಿತ್ರೆಯ ಜೊತೆ ಮುಖಾಮುಖಿಯಾಗುತ್ತ ಒಂದು ಸಂಕೀರ್ಣ ವಿನ್ಯಾಸ ರೂಪುಗೊಳ್ಳುತ್ತದೆ. ಗಂಡನ ಧರ್ಮಪತ್ನಿಯಾಗಿ ಮಗನ ಆದರ್ಶ ತಾಯಿಯಾಗಿ ಸಾಮಾಜಿಕ ಗೌರವಕ್ಕೆ ಪಾತ್ರಳಾಗುವ ಅವ್ವಯ್ಯ 'ಒಂಟಿತನ'ದ ಹಿಂಸೆಗೆ ಒಳಗಾಗಿ ಪಡುವ ಪಾಡು, ಅನುಭವಿಸುವ ತಲ್ಲಣ, ಆತಂಕ–'ದಂಡೆ' ಕಾದಂಬರಿ ನೀಡುವ ವಿಶಿಷ್ಟ ಅನುಭವ. ಆದರ್ಶ–ವಾಸ್ತವಗಳನ್ನು ಏಕಬಿಂದುವಿನಲ್ಲಿ ಹಿಡಿಯಲು ಪ್ರಯತ್ನಿಸುತ್ತ ಪರಿಣಾಮವಾಗಿ ಉಂಟಾಗುವ ತೊಡಕುಗಳನ್ನು, ಅಂತರಂಗದ ತಾಕಲಾಟಗಳನ್ನು ನಿಟ್ಟುಸಿರಿನ ದನಿಗಳನ್ನು ಲೇಖಕರು ಕಾವ್ಯಮಯ ಭಾಷೆಯಲ್ಲಿ ವಿವರಿಸುವುದರ ಮೂಲಕ ವ್ಯಕ್ತಿ–ಸಮಾಜದ ಸಂಬಂಧದ ಸಂಕೀರ್ಣ ಸ್ವರೂಪವನ್ನು ಈ ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿಸುತ್ತಾರೆ.

"ಹೆಣ್ಣೊಬ್ಬಳ ಮನೋನಿರೀಕ್ಷೆಯಲ್ಲಿ ಬಿಚ್ಚಿಕೊಳ್ಳುವ ದುಃಖ ದುಮ್ಮಾನ ತುಂಬಿದ ಗ್ರಾಮೀಣ ಭಾರತದ ಎರಡು ಕಾಲ ಘಟ್ಟಗಳ ಚಿತ್ರಣ 'ದಂಡೆ'ಯ ಕಥನ ದ್ರವ್ಯವಾಗಿದೆ. ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಗ್ರಾಮೀಣ ಭಾರತದ ಸ್ಥಿತಿಗತಿಯ ಚಿತ್ರಣವಿದೆ."[೧] (ಸ್ತ್ರೀ ಸಂವೇದನೆಯ ಅನುಭವಾಕೃತಿ)

"ದಂಡೆಯ ಸಂವೇದನೆ ನಿಜವಾದ ಅರ್ಥದಲ್ಲಿ ಸ್ತ್ರೀ ಸಂವೇದನೆಯ ಅನುಭವಾಕೃತಿ. ಒಂದು ಪುಟ್ಟ ಹಳ್ಳಿಯ ಮೂಲಕ ಭಾರತವನ್ನು ಕಾಣಿಸುವ ಪ್ರಯತ್ನ. ಅದರಲ್ಲೂ ಗ್ರಾಮೀಣ ಬದುಕಿನ ಎಲ್ಲ ಬವಣೆ ಬಂಗಗಳನ್ನೂ ಅನುಭವಿಸಿರುವ ಹೆಣ್ಣೊಬ್ಬಳ ಭಾವಕೋಶದ ಸಂವೇದನೆಯ ಮೂಲಕ ಮೂಡುವ ಈ ದ್ರವ್ಯದ ಅನನ್ಯತೆ ವಿಶಿಷ್ಟವಾದದ್ದು. ಗ್ರಾಮ ಬದುಕಿನಲ್ಲಿ ಬೆರೆತು ಹೋಗಿರುವ ಎಷ್ಟೋ ಸಮಸ್ಯೆಗಳು, ರಾಷ್ಟ್ರವ್ಯಾಪೀ ಹಬ್ಬಿಕೊಂಡಿರುವ ಗ್ರಾಮೀಣ ಸಮಸ್ಯೆಗಳು ನಗರ ಹಾಗೂ ಗ್ರಾಮಗಳ ಅಂತರ್ ಸಂಬಂಧಗಳಲ್ಲಿನ ಅನುಭವ ವಿಶೇಷವನ್ನು ಈ ಕಥಾನಕ ಒಳಗೊಂಡಿದೆ.

ಅವ್ವಯ್ಯನ ಭಾವಕೋಶದ ಮೂಲಕ ಬಿಚ್ಚುವ ಅವಳ ಬಾಳಿನ ದುಃಖ-ದುಮ್ಮಾನಗಳು ಕೇವಲ ಹೆಣ್ಣೊಬ್ಬಳ ವೈಯಕ್ತಿಯ ಸಂಕಟಗಳು ಮಾತ್ರವಾಗದೆ ಇಂಥ ಎಷ್ಟೋ ಜೀವಗಳ ಪ್ರತಿಮಾ ಸತ್ಯವಾಗಿ ಬೆಳೆಯುತ್ತದೆ.

ಹೆಣ್ಣಿನ ತೊಡೆಯಲ್ಲಿದ್ದ ಮಚ್ಚೆಯನ್ನು ಬೇರೆ ಗಂಡು ನೋಡುವುದು ಕೆಟ್ಟದ್ದು. ಇಂಥ ನಂಬಿಕೆಗೆ ಆವರಣದ ಸಮಾಜದಲ್ಲಿ ಉಂಟಾಗಬಹುದಾದ ಅನಾಹುತಗಳ ಭಯ ಪರಂಪರೆ ಬಲವಾದದ್ದು. ಹೆಣ್ಣೊಬ್ಬಳ ಭವಿಷ್ಯದ ಬದುಕಿನ ಮೇಲೆ ಈ ಭಯ ಪರಂಪರೆ ಬೀರುವ ಪರಿಣಾಮ ಅಪಾರ. ಈ ನಂಬಿಕೆಯೇ ಇಲ್ಲಿ ಹಲವು ಘಟನೆಗಳನ್ನು ನಿರ್ಧರಿಸುವ ಸಂಸ್ಕೃತಿ ಶಕ್ತಿಯಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡಿದ್ದ ಶ್ರವಕ ಮೂಲಕ ಅನಾಮಿಕ ಜೀವಗಳ ನಿಷ್ಠೆ, ತ್ಯಾಗ ಹಾಗೂ ಆ ಜೀವಗಳ ಹಿಂದಿನ ಕೌಟುಂಬಿಕ ಕಷ್ಟ-ಕಾರ್ಪಣ್ಯಗಳು ಇಲ್ಲಿ ಮಡುಗಟ್ಟಿವೆ.

ಸಂಘವೊಂದರ ಸಂದರ್ಭದಲ್ಲಿ ಬಿಚ್ಚಿಕೊಳ್ಳುವ ರಾಜಕೀಯ ಇಡೀ ಗ್ರಾಮಭಾರತದ ನವ ವಸಾಹತೀಕರಣದ ವಿದ್ಯ ಮಾನಗಳನ್ನೇ ಒಳಗೊಂಡಿದೆ. ಕೃಷಿ ವ್ಯಾಪಾರ ಸಾಂಸ್ಕೃತಿಕ ವಿದ್ಯ

ಮಾನಗಳನ್ನೇ ಒಳಗೊಂಡಿದೆ. ಕೃಷಿ ವ್ಯಾಪಾರ ಸಾಂಸ್ಕೃತಿಕ ಬದುಕು ಸಾಮಾಜಿಕ ಸ್ಥಿತಿಗತಿಗಳ ಮೇಲೆ ಮುಗಿಬಿದ್ದಿರುವ ಶಕುನಿ ಸಂತಾನವನ್ನು ಮನಗಾಣಿಸುತ್ತದೆ. ಕುರುಕ್ಷೇತ್ರ ನಾಟಕದ ದೃಶ್ಯದಲ್ಲಿ ಈ ರಣಾರಂಪ ಬಯಲಾಗುವ ಪರಿ ವ್ಯಂಗ್ಯ ಧ್ವನಿಯಿಂದ ಕೂಡಿದೆ. ನಾಟಕ ಊರಿನ ರಾಜಕೀಯ ಸ್ಫೋಟಗೊಳ್ಳಲು ನಿಮಿತ್ತ ಮಾತ್ರವಾಗುತ್ತದೆ. ಗುರುರಾಜ ಕಟ್ಟಿದ ಸಂಘದ ಉದ್ದೇಶವನ್ನೆಲ್ಲ ವಿಫಲಗೊಳಿಸುವ ಭ್ರಷ್ಟರ ಬಲೆಗೆ ಇಡೀ ಹಳ್ಳಿ ಬಲಿಯಾಗುತ್ತದೆ. ಶ್ರಮಿಕ ಜನರ ಬದುಕು ಅವರ ಅಜ್ಞಾನ ಕಾರಣವಾಗಿ ಅನ್ಯರಿಗೆ ಬಂಡವಾಳವಾಗುತ್ತದೆ. ಊರೊಳಗಿನ ರಾಜಕೀಯಕ್ಕೆ ಊರ ಹೊರಗಿನ ಆಯಾಮ ಸಿಕ್ಕಿ ಪೋಲಿಸು ಪ್ರವೇಶವಾಗಿ ಇಡೀ ಪರಿಸ್ಥಿತಿ ಪ್ರಕ್ಷುಬ್ಧವಾಗುತ್ತದೆ. ಸ್ವಾತಂತ್ರ್ಯೋತ್ತರ ಭಾರತದ ಗ್ರಾಮೀಣ ಬದುಕಿನಲ್ಲಿ ಈ ರಾಜಕೀಯದ ದುಷ್ಟ ವಿಧಾನಗಳು ಹೇಗೆ ಪ್ರವೇಶ ಪಡೆದವು ಎಂಬುದನ್ನು ಕಾದಂಬರಿ ಮನೋಜ್ಞವಾಗಿ ಬಿಡಿಸಿದೆ. ಕುರಕ್ಷೇತ್ರದ ರಣರಂಗವನ್ನು ಪ್ರತಿಮಿಸಿದ ರೀತಿಯಲ್ಲಿ ನಾಟಕದ ನಂತರದ ಗ್ರಾಮಜೀವನದ ಪರಿಸ್ಥಿತಿ ಇದೆ."

"ಅವ್ವಯ್ಯ ತನ್ನ ಅನುಭವಗಳ ಹಾಗೂ ನೆನಪುಗಳ ಮೂಲಕ ತನಗೆ ಮುಖಾಮುಖಿಯಾಗುವ ಸಾರ್ವಜನಿಕವೆನ್ನಿಸುವ ಸಾಮಾಜಿಕ ಲೋಕಕ್ಕೆ ಅರ್ಥಕೊಡುತ್ತ ಹೋಗುತ್ತಾಳೆ. ಪ್ರಧಾನವಾಗಿ ಅವ್ವಯ್ಯನ ಸಂವೇದನೆಯ ಮೂಲಕ ಕಥೆಗಾರನು ಬದುಕಿನ ಅರ್ಥಗಳನ್ನು ಅರಿಯಲು ಯತ್ನಿಸುತ್ತಾ ಸಾಂಪ್ರದಾಯಿಕತೆಯು ಇವಳ ವ್ಯಕ್ತಿತ್ವದ ಮೇಲೆ ಮಾಡಿದ ನಿರ್ಬಂಧಗಳನ್ನು ಕುರಿತು ತಿಳಿಸುವುದು ಹಾಗೂ ಅವುಗಳಿಂದ ಅನುಭವಿಸಿದ ತೊಂದರೆಗಳನ್ನು ವಿವರಿಸಿದ್ದಾರೆ."[೨]

'ಅವ್ವಯ್ಯ' ಮಾದಪ್ಪ-ದೊಡ್ಡೆ ದಂಪತಿಗಳ ನಾಲ್ಕುನೇ ಮಗಳು, ಸಣ್ಣಮ್ಮ, ಪುಟ್ಟಕ್ಕ, ಗೌರಕ್ಕರೆಂಬ ಮೂವರು ಹೆಣ್ಣು ಮಕ್ಕಳ ನಂತರ ಹುಟ್ಟಿದ ಮಗಳ, ಮಾದಪ್ಪನಿಗೆ ನಾಲ್ಕೂ ಹೆಣ್ಣಾದುದಕ್ಕೆ ಆತಂಕ. ಆದರೆ ಅವ್ವಯ್ಯನ ತಾಯಿ ದೊಡ್ಡೆಗೆ ಈ ಆತಂಕವನ್ನು ಮೀರುವ ಅಂತಃಶಕ್ತಿಯಿದೆ. ಹೆಣ್ಣು ಮಕ್ಕಳನ್ನೇ ಗಂಡೆಂದು ಭಾವಿಸಿ ಬೆಳೆಸುತ್ತಾಳೆ. ಮಾದಪ್ಪನಿಗೆ ಮಗಳು ಅವ್ವಯ್ಯ ಶಾಲೆಗೆ ಹೋಗುವುದು ಮನಸ್ಸಿಗೆ ಒಗ್ಗದ ಸಂಗತಿ. ಇದು ಮಾದಪ್ಪನ ಮನಸ್ಸು ಮಾತ್ರವಲ್ಲ, ಆ ಕಾಲದ ಸಾಮಾಜಿಕ ಸ್ಥಿತಿಯೂ ಹೌದು. ಮಾದಪ್ಪ ತನ್ನ ಹೆಂಡತಿಗೆ ಹೇಳುತ್ತಾನೆ.

"ನಾನೇನು ಈ ಮಗಳ್‌ಗೆ ಅಕ್ಷರ ಕಲ್ಸಿ ನಾವೆಲ್ರೂ ಆಕಾಸ್‌ದಲ್ಲಿ ಬದುಕ್‌ಬೇಕು ಅಂತ ತಿಳುದುಕೊಂಡಿದ್ದೀಯಾ? ಹಿಂದಿದ್ದೂ ಇಲ್ಲದೆ ಇರೋ ನಡವಳ್ ಕೇನ ಈಗ ನಡ್ಸಿ ನಾವೇನು ಊರು ಕೇರೇಲಿ ಬಾಳಾಟ ಮಾಡ್‌ಬಾರದು ಅಂತ ಮಾಡುಕೊಂಡಿದ್ದೀಯೋ ಹೆಂಗೆ? ಜನ ಎಲ್ಲಿ ಹೊತ್ತಾವು ಬಂತ್ತಾವು ತಿಕ ಬಡ್‌ಕೊಂಡು ನಗುತಾ ಅವ್ರೆ, ಗೊತ್ತಾ? ಊರಿಂದೂರಿಗೆ ಹೆಣ್‌ಮಗ ಆ ಗಂಡ್ ಹೈಕಳ ಜೊತೆ ಹೋಗಿ ಬರೋದು ಅಂದ್ರೆ ಏನು? ತಲೆ ಕೆಟ್ಟಂಗೆ ಆಡ್ಬೇಡ ಸುಮ್ನೀರು."

ಆದರೆ ದೊಡ್ಡೆ ಹಠ ಹಿಡಿದು ಅಯ್ಯನೋರ ಕೂಲಿ ಮಠಕ್ಕೆ ಕಳಿಸುತ್ತಾಳೆ. ಅಯ್ಯನೋರು ತಮ್ಮ ಕೂಲಿ ಮಠಕ್ಕೆ ಹೆಣ್ಣು ಮಗುವನ್ನು ಸೇರಿಸಿಕೊಳ್ಳಲು ಮೊದ ಮೊದಲು ಒಪ್ಪುವುದಿಲ್ಲ. ಆದರೆ ಒಂದು ಮಣ ಮೆಣಸಿನಕಾಯಿ, ಹೆಡೆಗೆ ತುಂಬ ಹುಣಸೆಹಣ್ಣು, ಕೊಳಗ ದಿನಸಿ ಅಳೆದು ಗುರುಕಾಣಿಕೆ ಒಪ್ಪಿಸಿದ ಮೇಲೆ ವಿದ್ಯೆ ಹೇಳಿಕೊಡಲು ಒಪ್ಪುತ್ತಾರೆ. ಆದರೆ ಅಯ್ಯನೋರು ಸಿಡಿಲು ಬಡಿದು ಸಾಯುತ್ತಾರೆ. ನಂತರ ಮಠಕ್ಕೆ ಬಂದ ಮರಿ ಅಯ್ಯನೋರು

'ಈ ಮಠ
ಹೆಣ್ಣು ಕೂರೋ ಜಾಗ ಅಲ್ಲ ಅಂತ
ಶಾಸ್ತ್ರ ನುಡಿದು ಬುಟ್ಟರು.
ಅವ್ವನೇ ಖುದ್ದಾಗಿ ಬಂದು
ಇನ್ನೊಂದೆರಡು ವರುಷ ಕಲಿಸುವಂತೆ ಕೇಳಿಕೊಂಡಳು
ಆದರೆ ಹೆಣ್ಣು ಅಕ್ಷರ ಕಲಿಯೋದಕ್ಕೂ
ಗುರುಗೊಳ ದುರ್ಮರಣಕ್ಕೂ ಪಂಚಾಂಗ ಗಂಟು ಹಾಕಿದ ಮೇಲೆ
ಅವ್ವನ ಆಸೆ ಕೊನೆಯಾಯ್ತು;

ಅವ್ವಯ್ಯನ ಕಲಿಯುವಿಕೆ ಅಲ್ಲಿಗೇ ನಿಂತುಬಿಡುತ್ತದೆ. ಆದರೆ ಅವಳಿಗೆ ಬದುಕು ಕಲಿಸಿದ್ದು?

ಕೂಲಿ ಮಠಕ್ಕೆ ಹೋಗುವಾಗ ಮುನ್ನಳ್ಳಿಯಿಂದ ಬರುತ್ತಿದ್ದ ಚಂದ್ರುವಿನ ಬಗ್ಗೆ ಹುಡುಗಿ ಅವ್ವಯ್ಯಳಿಗೆ ಅಪಾರ ಆಕರ್ಷಣೆ. ಆ ನೇರಳೆ ತೋಪಿನಡಿ ಸ್ಲೇಟು ಪುಸ್ತಕಗೊಳ ಕಳ್ಳಿ ಚೀಲಗಳನ್ನೆಲ್ಲ ಒಗೆದು ಎರಡು ಗುಂಪುಗಳು ಚಿಣ್ಣಿ–ದಾಂಡು ಆಡುತ್ತಿದ್ದರೆ, ಆ ಚಂದ್ರುವೇ ಗೆಲ್ಲ ಬೇಕೆಂಬಾಸೆ. ಅವನು ಕಥೆ ಹೇಳುತ್ತಾನೆ. ಹೊಳೆದಂಡೆ ಬಾಜು ಹಾದೀಲಿ ನಡೆದರೆ ಅವನ

ಗುಂಟೇ ಹೆಜ್ಜೆ ಹಾಕಬೇಕು– ಅನ್ನೋ ಬಯಕೆ. ಹದಿಮೂರು ಎಂಟ್ಲೆ ಅಂತ ಅಯ್ಯನೋರು ಕೇಳಿದರೆ ನೂರಾನಾಕು ಅಂತ ಥಟ್ಟನೆ ಹೇಳೋ ಅವನ ಕಂಡು ಒಳಗೇ ಹಿಗ್ಗು. ಒಂದು ದಿವಸವೇನಾದರೂ ಅವನು ತಪ್ಪಿಸಿಕೊಂಡರೆ ಆ ಮರ, ತೋಪು, ಹೊಳೆದಂಡೆ ಎಲ್ಲವೂ ಒಣಗಿದಂಗೆ ಅವನ ನುಣುಪುಗೆನ್ನೆಯ ಗುಳಿ, ಮಿಂಚೋ ಕಣ್ಣುಗೊಳನ್ನು ಹೊಂಚು ಹಾಕಿ ನೋಡದಿದ್ದರೆ ಏನನ್ನೋ ಕಳಕೊಂಡಂಗೆ!

ಆದರೆ–
ಅವನೊಂದಿಗೆ ನೇರವಾಗಿ ಮಾತಾಡಿರಲ್ಲ,
ತನ್ನ ಇಷ್ಟಗೋಳ ಮಳೆ ಸುರಿಸಲಾಗಿರನಿಲ್ಲ
ಅಷ್ಟೆಲ್ಲ ಇಷ್ಟಗೋಳ ಚಂದ್ರು
ಅಂಜಿಕೆಯ ಎದೆಗುಂಡಿಯೊಳಗೆ
ಕಪ್ಪೆಚಿಪ್ಪಾಗಿಯೇ ಉಳಿದು ಹೋದ.

ಪ್ರೇಮ ಪ್ರೀತಿಯ ಬಗ್ಗೆ ತಿಳಿಯದ, ಸ್ನೇಹದ ತಲೆ ಬುಡಗೊತ್ತಿಲ್ಲದ, ಕಾಮದ ಸುಳಿವೂ ಹೊಳೆಯದ ಬಾಲ್ಯ ವಯಸ್ಸಿನ ಇಂಥ ಭಾವನೆಗಳ ಜೊತೆಗೆ ಮುಂದೆ ಅರಿವು ಮೂಡಿದ ಅನಂತರವೂ ಅವಳ ಮನಸ್ಸು ಸೇರಿ ಹೊರಬರಲಾರದೇ ಅಲ್ಲೇ ಉಳಿದ ಭಾವನೆಗಳು ಅದೆಷ್ಟೋ!

"ಸ್ವಾತಂತ್ರ್ಯೋತ್ತರ ಗ್ರಾಮ ಭಾರತದೊಳಗಿನ ಬದಲಾವಣೆ ಮತ್ತು ತಲ್ಲಣಗಳನ್ನು ಗ್ರಾಮವೊಂದರ ಸಾಕ್ಷೀಪ್ರಜ್ಞೆಯ ಪ್ರತೀಕದಂತಿರುವ ಅವ್ವಯ್ಯನ ಗ್ರಾಮೀಣ ಜೀವನ– ಬದುಕಿನ ಚಿತ್ರಣವನ್ನು ನೀಡಿದ್ದಾರೆ."[೩] (ಲೇಖನ: ಸಮಕಾಲೀನ ಭಾರತದ ಸ್ಥಿತಿಗತಿಗಳಿಗೆ ಕನ್ನಡಿ)

ಅಪ್ಪ ಒಪ್ಪಿ ಬಂದ ಗಂಡು ರಾಯಣ್ಣ. ನಾಗಣ್ಣ–ನಂಜಮ್ಮರ ಒಬ್ಬನೇ ಮಗ. ತಿಂದುಂಡು ತೆವೋಟು ಆಸ್ತಿ, ರಾಯಣ್ಣ ಕೂಲಿ ಮಠಕ್ಕೆ ಹೋಗಿ ಕಲಿತಿದ್ದನಂತೆ! ಮೊದಲಿಗೆ ಇಲ್ಲದಿದ್ದ ಮನಸ್ಸು ನಂತರ ಹದಗೊಂಡು ರಾಯಣ್ಣನೊಡನೆ ಬೇಟಕ್ಕೆ ಸಿದ್ಧವಾಗಿತ್ತು. ಆತನಾದರೂ ಎಂಥವನು?

ನಾಲ್ಕು ದಿಕ್ಕಿನಿಂದ ಬಲೆ ಬೀಸಿ
ಆಯಕ್ಕೆ ತಂದು ಬೀಳಿಸೊ

ಚತುರ ಬೇಟೆಗಾರ!

ಮಾತಿನ ಸರದಾರ! ।

ಅವಳನ್ನು ಸುಖದ ಹೊಳೆಯಲ್ಲಿ ತೇಲಿಸುತ್ತಲೇ ಕರೆದುಕೊಂಡು ಹೋಗಿ ದುಃಖದ ಕಡಲಲ್ಲಿ ಮುಳುಗಿಸಿದ್ದ. ರಾಯಣ್ಣ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದ ಯುವಕ. ರಾಯಣ್ಣನ ತಾಯಿ ಮದುವೆಯಾದ ಹೊಸದರಲ್ಲಿ ಸೊಸೆ ಕರೆದು ಹೇಳಿದ್ದಳು; 'ಗಂಡನ ಮನಸ್ಸು ಅತ್ತಿತ್ತ ಬುಡ್‌ಬ್ಯಾಡ. ಮನೆ ಮಠ ಹೆಂಡತಿ ಕಡೆಗೆ ಕವ್ವೇಟ ನಿಗಾ ಕೊಡಂಗೆ ನೀನ್ ಮಾಡಬೇಕವ್ವ' ಎಂದು. ಆ ಎಚ್ಚರ ಅವ್ವಯ್ಯಗೆ ಇತ್ತು. ಆದ್ದರಿಂದಲೇ ತನ್ನ ಮನಸ್ಸಿನ ಆತಂಕವನ್ನು ಆಕೆ ಗಂಡನೊಡನೆ ಹಂಚಿಕೊಂಡಿದ್ದಳು.

'ನೀವು ಇದ್ದಕ್ಕಿದ್ದಂತೆ ಮನೆ ಬಿಟ್ಟು ಓಯ್ತಿರಂತೆ. ಸ್ವತಂತ್ರ ಹೋರಾಟ ಅಂತ ತಿಂಗಳಗಟ್ಲೆ ತಿರುಗಿ ಬರೋದೇ ಇಲ್ವಂತೆ. ಮನೆ ಮಠದ ಬಗ್ಗೆ ನಿಗಾನೇ ಇಲ್‌ವಂತೆ. ಇದೆಲ್ಲಾ ದಿಟ್‌ವಾ?'

ರಾಯಣ್ಣ ನಗುತ್ತಲೇ ತನ್ನ ನಿಲವು ಸ್ಪಷ್ಟ ಪಡಿಸಿದ್ದ. ಪ್ರೀತಿ ತೋರಿಸುತ್ತಲೇ ಸ್ವಾತಂತ್ರ್ಯ ಹೋರಾಟದ ಬಗೆಗಿನ ತನ್ನ ಸೆಳೆತವನ್ನು ಬಲವಾಗಿ ಪ್ರತಿಪಾದಿಸಿದ್ದ.

ಹೇಳಿ ರಾಣಿ, ನಮ್ಮ ಜಮೀನ, ನಮ್ಮ ಹಣದ ನಮ್ಮ ಹಕ್ಕನ್ನ ಅಷ್ಟೇ ಏನೂ ಮಾತನ್ನ ಸೈತ ಕಿತ್‌ಕ್ರಂಡು ನಮ್ಮ ನೆಲದಲ್ಲೇ ನಮ್ಮನ್ನ ಗುಲಾಮ್ರನ್ನಾಗಿ ಮಾಡ್‌ಕೊಂಡು, ತಾವು ಮಾತ್ರ ಐಭೋಗದಲ್ಲಿ ಬಾಳಾಟ ಮಾಡೋರ್‌ನ ಏನನ್ನ ಬೇಕು. ಅಂಥವರನ್ನು ಸುಮ್ಮನೆ ಬುಡಬೇಕಾ? ಈ ಪರಂಗಿಯೋರು ದೇಶ ಬಿಟ್ಟು ಹೋಗ್‌ಬೇಕು ಅಂತ ಗಾಂಧೀಜಿಯವರೇ ಹೇಳುವ್ರೆ ಅಲ್ವಾ? ಹೀಗಾಗಿ ರಾಯಣ್ಣನಿಗೆ ಸಂಸಾರಕ್ಕಿಂತ ಹೋರಾಟವೇ ಹಿರಿದಾಯ್ತು. ಮದುವೆಗೆ ಮುನ್ನವೇ ಆತ ಈ ಹೋರಾಟದಲ್ಲಿ ಪಾಲ್ಗೊಂಡಿದ್ದನು. ಹೋರಾಟಕ್ಕೆ ಹದಗೊಂಡಿದ್ದ ಮನಸ್ಸಿಗೆ ಅಪ್ಪ, ಅವ್ವ, ಆಸ್ತಿ ಹೆಂಡತಿ ಯಾವುದೂ ಹಿತವಾಗಲಿಲ್ಲ. ಮದುವೆಯಾದ ಒಂದು ವಾರ ಹೆಂಡತಿಯೊಡನೆ ಸರಸವಾಡಿ ಅವಳಲ್ಲಿ ಹೊಸ ಆಸೆ ಕನಸುಗಳನ್ನು ಬಿತ್ತಿ ಮತ್ತೆ ಹೋರಾಟದ ಕಣಕ್ಕೆ ಧುಮುಕಿದ್ದ; ಆ ಹೋರಾಟದಲ್ಲಿ ತನ್ನನ್ನೇ ತಾನು ಅರ್ಪಿಸಿಕೊಂಡು ಹುತಾತ್ಮನಾದ.

ಇಂಥ ರಾಯಣ್ಣನ ಬಗ್ಗೆ ಎಲ್ಲರಿಗೂ ಗೌರವ, ಅಷ್ಟೇಕೆ ಮಗ ಗುರುರಾಜನಿಗೂ ಅಪ್ಪನೆಂದರೆ ಅಪಾರ ಅಭಿಮಾನ. ಒಮ್ಮೆ ಅವನು ತಾಯಿಗೆ ಹೇಳುತ್ತಾನೆ.

ನೋಡವ್ವ, ಅಪ್ಪನಿಂಗೆ–ಅನ್ಯಾಯ ಮಾಡ್ ಬುಟ್ಟ ಅಂತ ಕೊರಗ್‌ತಾನೇ ಇರ್ತಿ. ಆದರೆ ಅಪ್ಪ ಹಂಗೇನೂ ಮಾಡಿಲ್ಲ. ಅವ್‌ನು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡ್‌ದ. ನಮ್ಮ ನಾಡು, ಜನರ ಮಾನ ಮರ್ಯಾದೆ ನಡೆ–ನುಡಿನೆಲ್ಲ ಉಳಿಸಿ ಕೋಳ್ಳೋದಕ್ಕಾಗಿ ಹೋರಾಡ್‌ದ. ಹೆಂಡತಿ, ಅಪ್ಪ, ಅಮ್ಮನಿಗಿಂತ ದೇಶ ದೊಡ್ಡದಪ್ಪಾ.... ಅಪ್ಪನ ಬದುಕು ಸಾರ್ಥಕ ಆಯ್ತು. ಅದೇನು ಸಾಮಾನ್ಯವಾ?....

ಈ ಹಂತದಲ್ಲಿಯೇ ಕಾದಂಬರಿಯ ಕಥನ ಬಹಳ ಮುಖ್ಯ ಹಂತವೊಂದನ್ನು ಪ್ರವೇಶಿಸುತ್ತದೆ. ಚರಿತ್ರೆಯ ಜೊತೆ ವೈಯಕ್ತಿಕ ಬದುಕು ಮುಖಾಮುಖಿಯಾಗುವ ರುದ್ರ ಘಟ್ಟವಿದು. ಚರಿತ್ರೆ ಯಾವಾಗಲೂ ಏಕಮುಖಿ, ಯಶೋಗಾಥೆ. ಸಾಧನೆಯ ಹಿಂದಿನ ಬಹುಮುಖೀ ನೋವಿನ ದನಿಗಳನ್ನು ಅದು ದಾಖಲಿಸುವುದಿಲ್ಲ.

ಅವ್ವಯ್ಯ ತನ್ನ ಗಂಡನ ಬದುಕನ್ನು ಮಗ ವೈಭವಿಸಿದಂತೆ ವೈಭವಿಸುವುದಿಲ್ಲ; ತಾನು ಕೃತಾರ್ಥೆ, ಧನ್ಯೆ ಎಂದು ಭಾವಿಸುವುದಿಲ್ಲ. ಇಲ್ಲಿಯೇ 'ದಂಡೆ' ವಿಶಿಷ್ಟವೆನ್ನಿಸುವುದು. ಅವ್ವಯ್ಯ ಇಲ್ಲಿ ಎತ್ತುವ ಪ್ರಶ್ನೆಗಳೂ ನಮ್ಮನ್ನು ಸಂಸ್ಕೃತಿಯ ಕಥನವನ್ನು ಹೊಸ ಬಗೆಯಲ್ಲಿ ನೋಡಲು ಪ್ರೇರೇಪಿಸುತ್ತದೆ.

ರಾಯಣ್ಣ ಮದುವೆಗೆ ಮುನ್ನವೇ ಹೋರಾಟದಲ್ಲಿ ಪಾಲ್ಗೊಂಡಿದ್ದನು. ಅವ್ವಯ್ಯ ಅಪ್ಪನನ್ನು ವೈಭವಿಸಿದ ಮಗ ಗುರುರಾಜನನ್ನು ಕೇಳುತ್ತಾಳೆ 'ನಿಮ್ಮಪ್ಪನನ್ ಮದುವೆ ಆಗೋದ್ಕಿಂತ ಮುಂಚೇನೇ ಹೋರಾಟ ಅಂತ ಹೋಗಿದ್ದ. ಅವುನ್‌ಗೆ ಮದ್ವೇನೂ ಬೇಕಿರಲಿಲ್ಲ; ಹೆಂಡ್ರೂ ಬೇಕಿರಲಿಲ್ಲ. ತನ್ನ ಆಟರ್ಸುದ ಗುಡ್ಡ ಏರಕ್ಕೆ, ತನ್ನ ಮನೆ ತನದ ಹೊರೆ ಹೊರಕ್ಕೆ ನನ್ನ ಏಣಿ ಮಾಡ್ಕೊಂಡ ಅಷ್ಟೇ ಅಲ್ವಾ? ನಿಮ್ಮಪ್ಪ ಮಾಡಿದ ತ್ಯಾಗ ಎಂಥದ್ದು?– ಮದುವೆಯಾಗಿ ಕರ್‌ಕೊಂಡು ಬಂದ ಇಲ್ಲಿಗೇಯಿ ಅಂತ ಬುಟ್ಟೋದುದ್ದಾ? ತೀಟೆಗೆ ಮಗು ಹುಟ್ಸಿಸಿ ಸಾಕು ಅಂತೇಳಿ ಅದರ ಭಾರ ನನ್ನ ಮೇಲೆ ಹಾಕಿ ಹೋರಟು ಹೋದ್‌ದ್ದಾ? ನಿಮ್ಮಪ್ಪ ಈ ದೇಶಕ್ಕಾಗಿ ಪ್ರಾಣತೆತ್ತ. ಅದು ಅವನ್‌ಗೆ ಪುಣ್ಯದ ಕೆಲಸ. ಆದರೆ ಹಂಗೆಯೇ ಒಂದು ಹೆಣ್ ಜೀವಕೆ ಹಿಂಸೇನೂ ಕೊಟ್ಟ– ಅದೂ ಅವನಾಗೆ ಮಾಡ್‌ಕೊಂಡು ಕೊಟ್ಟದ್ದು, ಇದು ಸರೀನಾ?'

ಮುಂದುವರಿದು ಅವ್ವಯ್ಯ ಹೇಳುತ್ತಾಳೆ

ನೋಡಪ್ಪಾ, ನಾನು ಹೆಣ್ಣು ಕನೋ! ಆಗ ಅಪ್ಪನ್‌ಗೆ ಮಗ್‌ಳಾಗಿ ಅವ್‌ನ ನೆಳ್ಳಾದೆ.

ಆಮ್ಯಾಲೆ ಗಂಡನ್‌ಗೆ ಹೆಂಡ್ರಾಗಿ ಆಟಕ್ಕೆ ಚೆಂಡಾದೆ. ಅತ್ತೆ ಮಾವುರ್‌ಗೆ ಸೊಸೆಯಾಗಿ ಗಾಣದ ಎತ್ತಾದೆ. ಈಗ ಮಗುನ್‌ಗೆ ಅವ್ವನಾಗಿ ಊರ್‌ಗೋಲಾಗಿ ಇವ್ನಿ. ಹಿಂಗಿದ್‌ರೂ ಉದ್‌ಕೋ ಬಂದುಲ್ಲೆ ಗಿಡದಂಗೆ ಬಾಳಬೇಕಾಯ್ತು ನೋಡು!

'ದಂಡೆ' ಕಾದಂಬರಿಯಲ್ಲಿ ದೇಶದ ಚರಿತ್ರೆಯೊಡನೆ ಹೀಗೆ ಅವ್ವಯ್ಯನ 'ಚರಿತ್ರೆ' ಮುಖಾ ಮುಖಿಯಾಗುತ್ತದೆ. ಪುರುಷ ಪ್ರಧಾನವಾದ ಸಾಮಾಜಿಕ ಲೋಕದ ಜೋತೆಗೆ ಹೆಣ್ಣಿನ ವೈಯಕ್ತಿಯ ಬದುಕಿನ ಅಂತರಂಗದ ಲೋಕವನ್ನು ತೆರೆದಿಡುವುದರ ಮೂಲಕ ಸಂಪ್ರದಾಯದ ಆಲೋಚನಾ ಕ್ರಮವನ್ನು ಲೇಖಕರು ಪ್ರಯತ್ನಿಸುತ್ತಾರೆ. ಸಾರ್ಥಕ ಬದುಕಿನ ಪರಿಕಲ್ಪನೆಯನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯವನ್ನು ಪ್ರತಿಪಾದಿಸುತ್ತಾರೆ.

"... ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಯನ್ನು ಪ್ರಾರಂಭಿಸಿದ ಕಾಲದಿಂದಲೂ ಚಿಕ್ಕಣ್ಣನವರು ಗ್ರಾಮೀಣ ಬದುಕಿನ ಮೂಲಧಾತುಗಳೊಂದಿಗೆ ಅನುಸಂಧಾನ ನಡೆಸುತ್ತ ಬಂದಿದ್ದಾರೆ.... ಕನ್ನಡ ಕಥಾ ಸಾಹಿತ್ಯದಲ್ಲಿ ಗ್ರಾಮೀಣ ಬದುಕನ್ನು 'ಸಮೃದ್ಧಿಯ ಕಣಜ'ವಾಗಿ ಚಿತ್ರಸಿದವರು ಇದ್ದಾರೆ;... ಕಟುವಾಸ್ತವದ ನೆಲೆಯಲ್ಲಿ ಚರಿತ್ರೆಯ ಸತ್ಯಗಳನ್ನು ಚಿಕ್ಕಣ್ಣನವರು, ಬೆಸಗರಹಳ್ಳಿ ರಾಮಣ್ಣ, ಕು.ವೀ, ಮುಂತಾದ ನಮ್ಮ ಗಣ್ಯ ಕಥಾ ಸಾಹಿತಿಗಳು ಸಾರ್ಥಕ ಸತ್ವವನ್ನು ತುಂಬಿ ಚಲನಶೀಲ ಬದುಕನ್ನು ವಿಶಿಷ್ಟ ವಿನ್ಯಾಸಗಳಲ್ಲಿ ಕಡೆದು ನಿಲ್ಲಿಸಿದ್ದಾರೆ. ಚರಿತ್ರೆ ಸತ್ಯಗಳನ್ನು ಶೋಧಿಸುವ ಆಕರವಾಗಿ ಗ್ರಾಮೀಣ ಬದುಕನ್ನು ಗ್ರಹಿಸಿ ವಿವಿಧ ಆಕೃತಿಗಳಲ್ಲಿ ಕಡೆಯುವ ಕೆಲಸ ಕನ್ನಡ ಕಥಾ ಸಾಹಿತ್ಯದ ಒಂದು ಪ್ರಮುಖ ಬೆಳವಣಿಗೆಯಾಗಿದ್ದು, ಚಿಕ್ಕಣ್ಣನವರು ಈ ಬೆಳವಣಿಗೆಯ ಭಾಗವಾಗಿ ಬೆಳೆಯುತ್ತ ಹೊಸ ಆಕೃತಿಯ ಹುಡುಕಾಟಕ್ಕೆ ತೊಡಗಿದ ಫಲ 'ದಂಡೆ' ಎಂಬ ಹೆಸರಿನ ಕಾದಂಬರಿ ಇದರಲ್ಲಿ ಭಾಷೆ ಪರಿಭಾಷೆ, ಆಚರಣೆಗಳ ವಿವರಣೆ ಭೌಗೋಳಿಕ ಪರಿಸರ ಇಲ್ಲೆಲ್ಲ ಜನಪದೀಯತೆ ಹಾಸು ಹೊಕ್ಕಾಗಿದೆ."

ಕಾದಂಬರಿಯಲ್ಲಿ ಬರುವ ಗುರುರಾಜನ ಕಥೆ ಸ್ವಾತಂತ್ರ್ಯೋತ್ತರ ಭಾರತ ಛಿದ್ರಗೊಂಡ ಸಾಮಾಜಿಕ ಬದುಕಿನ ಸ್ವರೂಪವನ್ನು ಅವ್ವಯ್ಯನ ನೋವಿನ ಎಳೆಯನ್ನೇ ಕೇಂದ್ರವಾಗಿಟ್ಟುಕೊಂಡು ಚಿತ್ರಿಸಲು ಪ್ರಯತ್ನಿಸುತ್ತದೆ.

ಗುರುರಾಜ ವ್ಯವಸ್ಥೆಯ ವಿರುದ್ಧ ಹೋರಾಡಲು ಹಳ್ಳಿಯಲ್ಲಿ ಜನರನ್ನು ಸಂಘಟಿಸುತ್ತಾನೆ. ಸಹಕಾರ ಸಂಘ ಸ್ಥಾಪಿಸುತ್ತಾನೆ. ಆದರೆ ವ್ಯವಸ್ಥೆ ಇದಕ್ಕೆ ಅನೇಕ ಬಗೆಯಲ್ಲಿ ಅಡ್ಡಿ

ಆತಂಕವನ್ನುಂಟುಮಾಡುತ್ತದೆ. ಪ್ರಭುಸ್ವಾಮಿ ಗಿರಿಜೆಯರ ಪ್ರೀತಿಯನ್ನು ಸಾಮಾಜಿಕ ವಿಷಯವನ್ನಾಗಿ ಮಾಡಿಕೊಂಡು ಊರಿನಲ್ಲಿ ದ್ವೇಷದ ಹೊಗೆಯಾಡುವಂತೆ ವ್ಯವಸ್ಥೆ ಪಿತೂರಿ ನಡೆಸುತ್ತದೆ. ಒಂದು ಮಾಡಬೇಕಾಗಿದ್ದ ಒಲುವೆ ಊರನ್ನು ಒಡೆದು ಛಿದ್ರಗೊಳಿಸುತ್ತಿರುವ ಪರಿಯನ್ನು ಕಂಡು ಅವ್ವಯ್ಯ ದಿಗ್ಭ್ರಮೆಗೊಳಗಾಗುತ್ತಾಳೆ. ಆಸೆ ಪಡೋದಿಕ್ಕೆ, ಕದ್ದು ಮುಚ್ಚಿ ಕೂಡೋದಕ್ಕೆ ಯಾವ ಕುಲ ಗೋತ್ರ ಇಲ್ಲ. ಆದರೆ ಒಂದಾಗಿ ಬಾಳೋದಿಕ್ಕೆ ಮಾತ್ರ ಎಲ್ಲ ಬಗೆಯ ಅಡ್ಡಿಯಾಗವುದನ್ನು ಕಂಡ ಅವ್ವಯ್ಯ ಆತಂಕಕ್ಕೊಳಗಾಗುತ್ತಾಳೆ. ಈ ಹಂತದಲ್ಲಿ ಕಾದಂಬರಿ ಹೊಸ ತಲೆಮಾರಿನ ಹೋರಾಟವನ್ನು, ಕನಸನ್ನು ಅನನ್ಯವೆಂಬಂತೆ ದಾಖಲಿಸುತ್ತದೆ. ಅವ್ವಯ್ಯನ ಸಾಂಪ್ರದಾಯಿಕ ನಿರ್ಬಂಧದ ಬದುಕಿಗೆ ಪರ್ಯಾಯವಾಗಿ ಗಿರಿಜೆಯ ಬದುಕಿದೆ. ಅವ್ವ, ಅಜ್ಜಿ, ಮುತ್ತಜ್ಜಿಯವರ ಸಾಲು ದೀಪಗಳ ನಡುವೆ ಗಿರಿಜೆ ಅವ್ವಯ್ಯನಿಗೆ ಹೊಸ ಬೆಳಕಾಗಿ ಕಾಣಿಸುತ್ತಾಳೆ. ಪ್ರಭುಸ್ವಾಮಿ ಗಿರಿಜೆಯರು ತೋಟದ ತೋಡುಗೊಳನ್ನು ಹುಲ್ಲೆಗಳಂಗೆ ನೆಗೆನೆಗೆದು ಬಂದಾಗ ಅವ್ವಯ್ಯನಿಗೆ ಅನ್ನಿಸುತ್ತದೆ.

ಆ ನೆಗೆತದಾಗೆ ಹರೆಯವಿದೆ.
ಉತ್ಸಾಹವಿದೆ
ಪ್ರೀತಿಯಿದೆ
ಎದೆಗಾರಿಕೆಯಿದೆ
ಹುಮ್ಮಸ್ಸಿದೆ
ಅವರ ನಗುವಿನಾಗೆ ಹುರುಪಿದೆ
ಅಂಜುಗುಳಿಗೊಳ ಎದೆ ನಡುಗಿಸೋ ಕಂಪನವಿದೆ
ಆಸೆ ಬುರುಕರನ್ನು ಸುಡೊ ಬೆಂಕಿ ಇದೆ
ಮೆಚ್ಚಿದೋರ ಮೋಡಿ ಮಾಡೋ ಮಂತ್ರ ಇದೆ.
ಆ ನೆಗೆತದಾಗೆ
ಏನಿಲ್ಲ?

ಆದರೆ ಈ ಉತ್ಸಾಹ ಹುಮ್ಮಸ್ಸುಗಳನ್ನು ತಣ್ಣಗಾಗಿಸುವ ಸ್ವಾರ್ಥ ರಾಜಕೀಯದ ಕ್ರೌರ್ಯವನ್ನು 'ದಂಡೆ'ಯ ಕಥನ ನಮಗೆ ಪರಿಚಯ ಮಾಡಿಕೊಡುತ್ತದೆ. ಅವ್ವಯ್ಯನ ಅನುಭವ ಲೋಕಕ್ಕಿಂತ ಭಿನ್ನ ಅನುಭವ ಲೋಕವನ್ನು ನಾವು ಇಲ್ಲಿ ಕಂಡರೂ ಇದೂ ಸೃಜನಶೀಲತೆಯನ್ನು ಕೊಲ್ಲುವಂಥದೇ!

ಅರಳುವ ಜೀವಗಳನ್ನು ಹೊಸಕಿ ಹಾಕಿ ಹಿಂಸಿಸುವಂಥದೇ! ಈ ಸ್ವಾರ್ಥ ರಾಜಕೀಯಕ್ಕೆ ಅವ್ವಯ್ಯನ ಮಗ ಗುರುರಾಜನೇ ಬಲಿಯಾಗುತ್ತಾನೆ. ಸ್ವಾತಂತ್ರ್ಯ ಹೋರಾಟದಲ್ಲಿ ಗಂಡ ಬಲಿಯಾದರೆ, ಅರ್ಥಪೂರ್ಣ ಸಮಾಜ ಕಟ್ಟುವ ಕಾರ್ಯದಲ್ಲಿ ಮಗ ಬಲಿಯಾಗುತ್ತಾನೆ. ಅವ್ವಯ್ಯನ ವೈಯಕ್ತಿಕ ಬದುಕು ಹೀಗೆ ಮತ್ತೆ ಮತ್ತೆ ಚರಿತ್ರೆ ನಿರ್ಮಿಸುವ ಪ್ರಕ್ರಿಯೆಯಲ್ಲಿ ದುರಂತಕೊಳಗಾಗುತ್ತ ಹೋಗುತ್ತದೆ. ಗುರುರಾಜ ಕೊಲೆಯಾದಾಗ ಆತನ ಗೆಳತಿ ಸೀತೆ ಒಂಟಿಯಾಗುತ್ತಾಳೆ; ಅವ್ವಯ್ಯ ಹೀಗೆಯೇ ಹರೆಯದಲ್ಲಿ ಗಂಡನನ್ನು ಕಳೆದುಕೊಂಡವಳು, ಒಂಟಿ ತನದ ದಾರುಣ ವೇದನೆಗೆ ಒಳಗಾದವಳು. ಆ ಅನುಭವದ ಹಿನ್ನೆಲೆಯಲ್ಲಿ ಅವ್ವಯ್ಯ ತನ್ನ ಸೊಸೆ ಸೀತೆಗೆ ಹೇಳುತ್ತಾಳೆ.

"ನೀನೂ ಇನ್ನೊಬ್ಬ ಊರುಮಿಳೆ ಆಗೋದು ಬೇಡ ತಾಯಿ. ನೀನೊಂದು ಬರಿ ಹೆಣ್ಣಲ್ಲ; ಜೀವ್‌ದಾತೆ. ಆ ಹೊತ್ತೇರಿದಂಗೆ ಈ ಜೀವ ಏರಿ ಬೆಳೀಬೇಕು. ಹಂಗೆ ಬೆಳಿಯೋ ಬಾಗ್ಲು ತೆಗಿ ನನ್ನವ್ವ. ಆ ತ್ರಾಣ ಪ್ರಾಣ ಎಲ್ಲ ನಿನ್ನಲ್ಲೆ ಇದೆ.!"

"ಅವ್ವಯ್ಯನ ಮಾತುಗಳು ಸೀತೆಯ ಬದುಕಿಗೆ ಹೊಸ ಬೆಳಕನ್ನು ಭರಸೆಯನ್ನು ಸೂಚಿಸುವಂಥವಾಗಿವೆ. ಈ ದುರಂತದ ನಡುವೆಯೂ, ಕೊಲ್ಲುವ ಹಿಂಸಿಸುವ ಸಾಮಾಜಿಕ ದುಸ್ಥಿತಿಯ ನಡುವೆಯೂ ಸೃಜನಶೀಲತೆಯನ್ನು ಕಾಪಾಡಿಕೊಳ್ಳಬೇಕೆನ್ನುವ ದೃಢ ಸಂಕಲ್ಪವನ್ನು ಅವ್ವಯ್ಯನ ಮಾತುಗಳು ಸೂಚಿಸುತ್ತವೆ."[೪]

"ಕನ್ನಡದ ಮೂಲೆಯ ಗ್ರಾಮೀಣ ರೈತಾಪಿ ಕಿರು ಸಮುದಾಯದ ಬದುಕು ಹಿನ್ನೆಲೆಯಲ್ಲಿ; ಬಡತನದ ನೆರಳಲ್ಲಿ ಬದುಕುವ ಇಂಥ ಸಮುದಾಯದಲ್ಲೂ ಸಾಮಾಜಿಕ ಮೌಢ್ಯ ಜಡತೆಗಳಿಗೊಳಗಾಗಿ ಸದಾ ಶೋಷಿತಳಾಗಿ ಬದುಕುತ್ತಿರುವ ಅವ್ವಯ್ಯನಂಥ ಹೆಣ್ಣು ಜೀವ; ಈ ಸ್ಥಿತಿಯಲ್ಲೂ ಆಕೆ ಅನುಭವಗಳನ್ನು ಸಹನೆಯಿಂದ ಅರಗಿಸಿಕೊಳ್ಳುತ್ತ ಕಟ್ಟಿಕೊಳ್ಳುವ ತನ್ನ ಜೀವಿತ ಕಾಲದ ಇತಿಹಾಸ ಕಥಾನಕ–ಹೀಗೆ ಗ್ರಾಮೀಣ ಕಿರು ಸಮುದಾಯವೊಂದರ ಅತ್ಯಂತ ಸೂಕ್ಷ್ಮ ಸಂವೇದನಾ ಕೇಂದ್ರಕ್ಕೆ ಈ ಕೃತಿ ನಾಲಿಗೆಗೊಟ್ಟಿದೆ. ಶೋಷಿತರಲ್ಲೂ ಪಾಡನ್ನು ತೋಡಿಕೊಳ್ಳುವ ಬದಲು ಮಾನವೀಯ ಗೌರವದ ಮಹಾಕಥನವೊಂದನ್ನು ಕಟ್ಟಿಕೊಳ್ಳಲು ಯತ್ನಿಸುತ್ತಿದ್ದಾಳೆ ಎಂದು ಕಾಣಿಸುವುದು – ಈ ಕೃತಿಯನ್ನು ಗಣನೀಯವಾಗಿಸುತ್ತದೆ.

ಅವ್ವಯ್ಯ ನಿರ್ಮಿಸಿಕೊಳ್ಳುವ ತನ್ನೆದುರಿನ ಇತಿಹಾಸ–ಐತಿಹ್ಯವು ಅಂತಿಮವಾಗಿ ಈ ದೇಶದ ಸಮಕಾಲೀನ ಇತಿಹಾಸದ ಕಥಾನಕವಾಗಿ ಬೆಳೆದು ನಿಲ್ಲುತ್ತದೆಂಬುದು ಈ ಕೃತಿಯ ಕಲಾವಂತಿಕೆಯ ಸಾರ್ಥಕತೆಯನ್ನು ಕುಣಿಸುತ್ತದೆ.

ಸಬಾಲ್ಟರ್ನ್ ಹಿಸ್ಟರಿ ಎಂಬ ಹೊಸ ಕಲ್ಪನೆ ಈಗ ಚಾಲ್ತಿಯಲ್ಲಿದೆ. ಆದರೆ, ಸಂಶೋಧಕರು ಸಮಾಜಶಾಸ್ತ್ರಜ್ಞರು ಪ್ರಯತ್ನಪೂರ್ವಕ ಹುಡುಕಿ ದಾಖಲಿಸುವ ಈ ಸಬಾಲ್ಟರ್ನ್ ಇತಿಹಾಸ ಬಹು ಸೀಮಿತವಾದದ್ದು. ಈ ಕೃತಿಯಂಥ ಸಾಹಿತ್ಯಿಕ ನಿರ್ಮಿತಿಗಳಲ್ಲಿ ನಾವು ನಿಜವಾದ ಸಬಾಲ್ಟರ್ನ್ ಇತಿಹಾಸವನ್ನು ಕಾಣುತ್ತೇವೆ. ಈಚಿನ ದಶಕಗಳಲ್ಲಿ ಇಂಥ ಸಾಹಿತ್ಯ ಕೃತಿಗಳನ್ನು ರೂಪಿಸಿದ ಗಣ್ಯರಾದ ಕಂಬಾರರು, ದೇವನೂರರು, ಸಿದ್ಧಲಿಂಗಯ್ಯನವರು ಮುಂತಾದವರ ಕೃತಿಗಳ ಸರಣಿಯಲ್ಲಿ ಸೇರುವ ಕೃತಿ ಇದು. ದಿವಂಗತ ಜಿ.ಬಿ. ಅವರ 'ಆ ಊರು ಈ ಊರು', 'ಕದಡಿದ ನೀರು' ಇತ್ಯಾದಿ ಕೃತಿಗಳ ಜೊತೆಗೆ ಇದನ್ನು ಹೋಲಿಸಿ ನೋಡುವುದೂ ಕುತೂಹಲಕಾರಿ ಎನಿಸುತ್ತದೆ."[೫]

ಈ ಕಾದಂಬರಿ ಗ್ರಾಮೀಣ ಸಂಸ್ಕೃತಿಯ ಹಿನ್ನೆಲೆಯಲ್ಲಿ ರಚಿತವಾಗಿದೆ. ಮದುವೆಶಾಸ್ತ್ರ ನಡೆಯುವುದು, ಗ್ರಾಮೀಣ ಸೋಬಾನೆ ಪದಗಳ ಹಿನ್ನೆಲೆಯಲ್ಲಿ ಜಾತ್ರೆ ನಡೆಯುವುದು. ತೆಂಗಿನಕಾಯಿ ಒಡೆಯುವುದು ಮುಂತಾದ ಧಾರ್ಮಿಕ ಮತ್ತು ಸಾಮಾಜಿಕ ವಿಧಿಗಳು ಗ್ರಾಮೀಣ ಪರಿಸರದಲ್ಲಿಯೇ ನಡೆಯುತ್ತವೆ. ಇಲ್ಲಿ ಬ್ರಾಹ್ಮಣೀಕರಣ ಮತ್ತು ಸಂಸ್ಕೃತೀಕರಣಕ್ಕೆ ಅವಕಾಶವಿಲ್ಲ. ಗಿರಿಜೆ–ಪ್ರಭುಸ್ವಾಮಿಯವರ ಪ್ರಸಂಗವೇ ಇದಕ್ಕೆ ಸಾಕ್ಷಿ. ಬ್ರಾಹ್ಮಣ ಗಂಡು, ಪರಿವಾರದ ಹೆಣ್ಣಿನ ಸಂಬಂಧದಲ್ಲಿ ಪರಿವಾದವರು ಸಂಬಂಧವನ್ನು ಒಪ್ಪದೆ ಬಹಿಷ್ಕಾರಕ್ಕೆ ಸಿದ್ಧರಾಗುತ್ತಾರೆ. ಅದರಲ್ಲಿಯೂ ಅವ್ವಯ್ಯ ಇಬ್ಬರಿಗೂ ಆಶ್ರಯ ಕೊಡುತ್ತಾಳೆ. ಅವ್ವಯ್ಯ ಹುಟ್ಟಿದ ಮನೆಗೂ ಸೇರಿದ ಮನೆಗೂ ತಂಪು ಕೊಡದ ಬದುಕು ಬರಡಾಯಿತೆಂದು ಕೊರಗುತ್ತಾಳೆ. ಹೆಣ್ಣು ಹುಟ್ಟಿದ, ಗಂಡು ಹುಟ್ಟಿದ ತವರು ಮನೆಯೂ ನಾಶವಾಯಿತು. ಹೀನ ಸುಳಿ ಇಲ್ಲದೆ ಗಂಡುಗಳೇ ಹುಟ್ಟಿದ ಗಂಡನ ಮನೆಯೂ ಎಕ್ಕುಟ್ಟಿ ಹೋಗುವಂತಾಯಿತು. ಗಂಡಾಗಿ ಗೋಕುರ್ತಿ ನೀಸಿದ ತನ್ನ ಬದುಕೊದಡ ಕಾಣದಾಯಿತು. ಅಂತೂ ಸತ್ತ ಮಗನ ಸುದ್ದಿಯನ್ನು ನಿರ್ಲಿಪ್ತವಾಗಿ ಸ್ವೀಕರಿಸಿ ಪುಟ್ಟಸ್ವಾಮಿ–ಗಿರಿಜೆ, ಸಾಕಿ–ಪುಟ್ಟೀರರಿಗೆ ಆಶ್ರಯದಾತಳಾದಳು.

ಚಿಕ್ಕಣ್ಣನವರು ಅವ್ವಯ್ಯನ ಕಥನವನ್ನು ನಿರೂಪಿಸುವಲ್ಲಿ ಕಾವ್ಯ ಲಯವನ್ನು ಪರಿಣಾಮಕಾರಿಯಾಗಿ ಇಲ್ಲಿ ಬಳಸಿಕೊಂಡಿದ್ದಾರೆ. ಅವಳ ಅಂತರಂಗದ ವೇದನೆ, ಸ್ವಗತದ ಪಿಸುಮಾತುಗಳಲ್ಲಿ ಹರಳುಗಟ್ಟಿದಂತೆ ಚಿತ್ರಿತವಾಗಿದೆ. ನಿರೂಪಣೆ ಸರಳ ರೇಖಾತ್ಮಕವಾಗಿರದೆ ನೆನಪು ವಾಸ್ತವಗಳು ಒಂದರೊಡನೊಂದು ಥಳಕು ಹಾಕಿಕೊಳ್ಳುವುದರಿಂದ ಕಾದಂಬರಿಯ

ವಸ್ತು ಪ್ರಪಂಚದ ಸಂಕೀರ್ಣತೆಗೆ ಸೂಕ್ತ ಅಭಿವ್ಯಕ್ತಿಯ ರೀತಿ ದೊರಕಿದಂತಾಗಿದೆ. 'ದಂಡೆ'ಯ ಓದು ಅದರ ಪ್ರಯೋಗಶೀಲತೆಯಿಂದಾಗಿಯೇ ವಿಶಿಷ್ಟ ಅನುಭವವನ್ನು ನೀಡುತ್ತದೆ.

ಕಾದಂಬರಿಯಲ್ಲಿ ಅವ್ವಯ್ಯೆಯ ಅವ್ವ ಹೀಗೆ ಹೇಳುತ್ತಾಳೆ;

'ಹೊಳೆ ದಂಡೆ ಗೊತ್ತಲ್ಲ ಮಗಳೇ, ಅದು ನೆರೆ ಬಂದಾಗ ಮೈಯಾಡ್‌ಕೊಂಡು ನಿಲದೆ. ಬೇಸ್‌ಗೆ ಕಾಲ್‌ದಲ್ಲಿ ತನ್ನ ನೆಚ್‌ಕೊಂಡರೂ ಗಿಡಗಂಟೆಗೊಳ್‌ಗೆ ಪಸಿ ಕಟ್ಕೊಂಡು ಕಾಯ್‌ತ್ತದೆ. ಹಿಂಗೆ ಎಲ್ಲನೂ ತಡಕೊಂಡಿರೊ ದಂಡೆ ಇರೋದ್ರಿಂದ್ಲೇ ನೀರು ಸಸಾರವಾಗಿ ಸೇರ್‌ತ್ತದೆ. ಗಿಡಗಂಟೆಗೊಳ್‌ಗೆ ಪಸಿ ಕಟ್ಕೊಂಡು ಕಾಯ್‌ತದೆ. ಹಿಂಗೆ ಎಲ್ಲನೂ ತಡಕೊಂಡಿರೊ ದಂಡೆ ಇರೋದ್ರಿಂದ್ಲೇ ಗಿಡಗಂಟೆಗೊಳು ಬಾಳಿ ಬದುಕುತ್ತವೆ. ಈ ಹೆಣ್ಣು ಜೀವ್‌ಮಾನಾನೂ ಹಿಂಗೆಯೇ ನೋಡು ಕಂದಾ, ಆ ದಂಡೆ ಸಾಲಿದ್ದಂಗೆ. ಚಿಕ್ಕಣ್ಣನವರು ಈ ಕಥನವನ್ನು 'ದಂಡೆ'ಯೆಂದು ಕರೆಯುವಾಗ ಅವರ ಮನಸ್ಸಿನಲ್ಲಿ ಈ ಪರಿಕಲ್ಪನೆಯಿದ್ದರೆ ಕಾದಂಬರಿಯ ಕಥನ ಸಕಾರಣವಾಗಿಯೇ ಈ ಪರಂಪರಾಗತ ಕಲ್ಪನೆಯನ್ನು ಪ್ರಶ್ನಿಸುತ್ತದೆ."[೬]

ಹೀಗೆ ಈ ಕಾದಂಬರಿಯಲ್ಲಿ ಗ್ರಾಮೀಣ ಜನರ ಬದುಕಿನ ವಿವಿಧ ಕಷ್ಟ ಕಾರ್ಪಣ್ಯಗಳನ್ನು ಕಾದಂಬರಿಯ ಕೇಂದ್ರ ಪಾತ್ರವಾದ ಅವ್ವಯ್ಯ ಮಗ, ಕುಟುಂಬದೊಂದಿಗೆ ಬಿಚ್ಚಿಡುತ್ತಾ ಸಾಗುತ್ತದೆ. ಇದೊಂದು ಜಾನಪದ ವಸ್ತುವನ್ನು ನಿರೂಪಿಸುತ್ತಾ; ಕಥಾ ಹಂದರ ಚಾಚಿಕೊಳ್ಳುತ್ತಾ ಸಾಗುತ್ತದೆ. ಇದೊಂದು ಜಾನಪದ ನಿರೂಪಣೆಯಾಗಿದೆ. ಇಲ್ಲಿ ಅವ್ವಯ್ಯ ಗ್ರಾಮ ಸಂಸ್ಕೃತಿಯ ಮುಂದುವರಿಕೆಯಾಗಿ ಕಾಣುತ್ತಾಳೆ.

ಅವ್ವಯ್ಯಳು ಗಂಡನನ್ನು ಕಳಕೊಂಡು ಒಂಟಿ ಹೆಂಗಸು ಮನೆಯಲ್ಲಿ ಹೆಂಗಸಾಗಿ, ಹೊರಗೆ ಗಂಡಸಾಗಿ ದುಡಿಯುವುದರ ಜೊತೆಗೆ ಇಡೀ ಊರಿಗೆ ಊರೇ ಕುರುಬುವಂತಹ ಬಾಳು ಬಾಳುವುದರ ಮೂಲ ಸ್ತ್ರೀಕುಲಕ್ಕೆ ಮಾದರಿಯಾಗಿ ಬಾಳುತ್ತಾಳೆ.

"ಈ ಕಾದಂಬರಿಯನ್ನು ಓದುತ್ತಿದ್ದಾಗ ನನಗೆ ಥಾಮಸ್ ಹಾರ್ಡಿಯ 'ಟೆಸ್' ಕಾದಂಬರಿ ನೆನಪಾಯಿತು. ಆ ಕಾದಂಬರಿಯನ್ನು ಸ್ಮರಿಸಿಕೊಂಡರೆ ಕಣ್ಣ ಮುಂದೆ ನಿಲ್ಲುವುದು ಮೇಲೆ ಆಕಾಶ, ಕೆಳಗೆ ನೆಲ, ಅಲೆಯುತ್ತಿರುವ ಹರೆಯದ ಒಂಟಿ ಹುಡುಗಿ. ಹಾಗೆಯೇ ಈ ಕಾದಂಬರಿಯನ್ನು ಸ್ಮರಿಸಿದಾಗ ಎದ್ದು ನಿಲ್ಲುವ ಚಿತ್ರ, ಹಳ್ಳಿಯ ಹೆಂಗಸು ಹುಡುಗಿಯಾಗಿ, ಯುವತಿಯಾಗಿ, ಮಧ್ಯವಯಸ್ಕಳಾಗಿ, ಮುದುಕಿಯಾಗಿ ಬಂಡೆ ಬಸವನ ಸಾಕ್ಷಿಯಾಗಿ

ಕಾಯುತ್ತಿರುವುದು. ಕ್ರಮೇಣ ಮುದುಕಿಯ ಕನಸುಗಳು ಕಣ್ಣು ಮುಂದೆ ಹಾದು ಅವುಗಳ ಸಾಲು ಸಣ್ಣದಾಗುತ್ತ ಹೋಗಿ ನೆನಪುಗಳ ಸಾಲು ಪ್ರಾರಂಭವಾಗಿ ಬೆಳೆಯುತ್ತ ಹೋದಂತೆ ದಶಕ ದಶಕಗಳ ಹಳ್ಳಿಯ ಬದುಕು ಕೆಲವು ಚಿತ್ರಗಳ ಮೂಲಕ ವಾಸ್ತವವಾದಂತೆ, ಭಾರತದ ಹಳ್ಳಿಗಳೇ ಸ್ವಾತಂತ್ರ್ಯದ ಹಿಂದಿನ ಕಾಲದಿಂದ ಎಲ್ಲಿಯೋ ಇದ್ದ ಹಳ್ಳಿಯವರು ಕಾಣದ ಗಾಂಧೀಜಿಯವರ ಹೆಸರು ಹಳ್ಳಿಯವರಿಗೂ ಪರಿಚಿತವಾದಂತೆ ಒಳಿತಾಗುತ್ತದೆ ಎಂದು ಇನ್ನೂ ಕಾಯುತ್ತಿರುವ ಚಿತ್ರ ಮಾಡುತ್ತಾ ಹೋಗುತ್ತದೆ... ಇಲ್ಲಿನ ಭಾಷೆ ಸೊಗಸಾಗಿ ಗ್ರಾಮೀಣ ಭಾಷೆಯನ್ನು ಬಳಸಿದ್ದಾರೆ.

ದಂಡೆಯಿಂದ...
ಅವ್ವಯ್ಯ–
ತಲೆ ಕೊಡವಿಕೊಂಡಳು;
ಕಾದು ಕಾದು ಕುಂತ ಆವಾಗ
ಅದೇಟು ಬೇಗ ಮದುವೆಯಗಂಟ ಬಿತ್ತು!
ಹೆಂಗೆ ಏನೂ ತಿಳಿಯದ ಗಂಡೊಬ್ಬ
ಹೆಂಗ ತನ್ನ ಎಲ್ಲದರ ಸರ್ವಸ್ವವಾಗಿ ಬುಟ್ಟ!
ಇದು ಈ ಬಾಳಿನ ಬಳ್ಳಿ ಹಬ್ಬೊ ಮರುಮ ಅಂತ ಅವ್ವ ಹೇಳುತ್ತಿದ್ದಳು.
ಇದು ದಿಟವಾಗಿ ಮರುಮವೋ ಮೈಮೆಯೋ?
ಅಥವಾ ಗಂಡು ಹೆಣ್ಣುಗೊಳಲ್ಲಿ
ಆ ಮಣ್ಣು– ಮೋಡಗಳ ನಡುವೆ
ಕಾಣದಂಗಾಡೊ
ನೀರಿನ ಆವಿ ಗುಣವೋ!?"[೭]

ಈ ಮೇಲಿನ ಕವಿತೆಯಂತಿರುವ ಕಾದಂಬರಿಯಲ್ಲಿನ ಭಾಗದಿಂದ ನಮಗೆ ಕಾದಂಬರಿಕಾರರು ಗ್ರಾಮೀಣ ಭಾಷೆಯ ಬಳಕೆಯ ಕುಶಲತೆಯನ್ನು ತಿಳಿಸುತ್ತದೆ.

ಹೀಗೆ ಇವರ ಕಾದಂಬರಿಗಳು ದಟ್ಟ ಗ್ರಾಮೀಣ ಪರಿಸರದ ಚಿತ್ರಣವನ್ನು ಮತ್ತು ಸ್ತ್ರೀ ಸಂವೇದನೆಯನ್ನು ಕುರಿತು ಗ್ರಾಮೀಣ ಪ್ರದೇಶದಲ್ಲಿನ ಬಡತನ, ಅನಕ್ಷರತೆ, ಶೋಷಣೆ, ಹಸಿವು, ಮೂಲಭೂತ ಸಮಸ್ಯೆಗಳು ಹೀಗೆ ಇನ್ನೂ ಮುಂತಾದವುಗಳನ್ನು ಕುರಿತು ಚಿತ್ರಿಸಿದ್ದಾರೆ.

ಕೊನೆಟಿಪ್ಪಣಿಗಳು

ಮುಂಜಾವು:

೧. ಸೊಲ್ಲೆತ್ತಿ, ಸಂಪಾದಕರು: ಡಾ. ಮಲ್ಲಿಕಾ ಘಂಟಿ–೨೦೦೧ ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ಪುಟ ೧. (ಡಾ. ಡಿ.ಆರ್.ನಾಗರಾಜ್)

೨. ಅದೇ, ಪುಟ ೩೨. (ಪ್ರೊ. ಸುಧಾಕರ)

೩. ಮುಂಜಾವು, ಕಾ.ತ.ಚಿಕ್ಕಣ್ಣ, ೧೯೮೯, ಕೊಪ್ಪಲು ಪ್ರಕಾಶನ, ಬೆಂಗಳೂರು.

೪. ಸೊಲ್ಲೆತ್ತಿ, ಸಂಪಾದಕರು: ಡಾ. ಮಲ್ಲಿಕಾ ಘಂಟಿ–೨೦೦೧ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ಪುಟ ೫೩. (ಎಸ್.ಜಿ.ಸಿದ್ದರಾಮಯ್ಯ)

೫. ಅದೇ, ಪುಟ ೬, (ಚದುರಂಗ).

೬. ಅದೇ, ಪುಟ ೨೪, (ಎಚ್. ದಂಡಪ್ಪ)

ದಂಡೆ:

೧. ಸೊಲ್ಲೆತ್ತಿ, ಸಂಪಾದಕರು: ಡಾ. ಮಲ್ಲಿಕಾ ಘಂಟಿ–೨೦೦೧, ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ಪುಟ ೧೦೪, (ಎಸ್.ಜಿ.ಸಿದ್ದರಾಮಯ್ಯ)

೨. ಅದೇ, ಪುಟ ೫೯, (ಡಾ. ಬಸವರಾಜು ಕಲ್ಗುಡಿ)

೩. ಅದೇ, ಪುಟ ೬೨ (ಡಾ. ಜಿ.ಎಸ್. ಶಿವರುದ್ರಪ್ಪ)

೪. ನೀರೊಳಗಣ ಬೆಳಕು, ಸಂ. ಎಚ್.ದಂಡಪ್ಪ, ೨೦೧೦, ಸಿರಿವರ ಪ್ರಕಾಶನ, ಲಕ್ಷ್ಮೀನಾರಾಯಣಪುರ, ಬೆಂಗಳೂರು, ಪುಟ ೧೯೩, (ಡಾ. ಬರಗೂರು ರಾಮಚಂದ್ರಪ್ಪ)

೫. ಅದೇ, ಪುಟ ೨೭೨, (ಕೆ.ವಿ.ಸುಬ್ಬಣ್ಣ)

೬. ನೆಲ ಸಂಸ್ಕೃತಿ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂ, ಸುಮುಖ ಪ್ರಕಾಶನ, ವಿದ್ಯಾರಣ್ಯನಗರ, ಬೆಂಗಳೂರು.

೭. ನೀರೊಳಗಣ ಬೆಳಕು, ಸಂ. ಎಚ್.ದಂಡಪ್ಪ, ೨೦೧೦, ಸಿರಿವರ ಪ್ರಕಾಶನ, ಲಕ್ಷ್ಮೀನಾರಾಯಣಪುರ, ಬೆಂಗಳೂರು, ಪುಟ ೧೮೭.

೮. ದಂಡೆ, ಕಾ.ತ.ಚಿಕ್ಕಣ್ಣ, ೧೯೯೯, ಕಥನ ಪ್ರಕಾಶನ, ವಿಜಯನಗರ, ಬೆಂಗಳೂರು.

ಅಧ್ಯಾಯ ೫

ನಾಟಕ ಸಾಹಿತ್ಯ ಮತ್ತು ಗ್ರಾಮೀಣ ಸಂವೇದನೆ

ಅಧ್ಯಾಯ ೫

ನಾಟಕ ಸಾಹಿತ್ಯ ಮತ್ತು ಗ್ರಾಮೀಣ ಸಂವೇದನೆ

ಪೀಠಿಕೆ:

ಕಾ.ತ.ಚಿಕ್ಕಣ್ಣನವರು ಆಧುನಿಕ ಕನ್ನಡ ಸಾಹಿತ್ಯದ ಕಾವ್ಯ, ಕಾದಂಬರಿ, ವಿಮರ್ಶೆ, ಸಂಪಾದನೆಗಳು ಹಾಗೂ ನಾಟಕಗಳು ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಕಥೆಗಳನ್ನು, ನಾಟಕಗಳನ್ನು, ಕಾದಂಬರಿಗಳನ್ನು ಬರೆದು ಹೆಸರುವಾಸಿಯಾಗಿದ್ದಾರೆ. ಇವರು ಬರೆದ ನಾಟಕಗಳೆಂದರೆ ಮೊದಲನೆಯದು 'ವಧೂಟಿ' ಹಾಗೂ ಎರಡನೆಯದು 'ಚದುರಂಗ'. ಈಗ ನಾವು 'ವಧೂಟಿ' ನಾಟಕ ಮತ್ತು ಗ್ರಾಮೀಣ ಸಂವೇದನೆ ಕುರಿತು ನೋಡೋಣ.

ಈ 'ವಧೂಟಿ' ನಾಟಕವು ಪ್ರಮುಖವಾಗಿ ಕನಕದಾಸರನ್ನು ಕುರಿತು ಬರೆದದ್ದು ಆಗಿದೆ. ಇಲ್ಲಿ ವಧೂಟಿಯು ಕನಕನನ್ನು ಪ್ರೀತಿಸಿದ್ದು, ತನ್ನ ತಂದೆಯು ಇದನ್ನು ವಿರೋಧಿಸಿದ್ದುದರ ಪರಿಣಾಮವಾಗಿ ಕನಕ ಮತ್ತು ವಧೂಟಿಯರು ತಮ್ಮ ಹರೆಯದಲ್ಲಿ ಕೂಡಲು ಸಾಧ್ಯವಾಗಲಿಲ್ಲ. ಹೀಗೆ ಚಿಕ್ಕಣ್ಣನವರು ಕನಕ ಮತ್ತು ವಧೂಟಿಯರ ಬದುಕಿನ ವಿವಿಧ ಆಯಾಮಗಳು, ಸಂವಾದನಗಳನ್ನು ಗ್ರಾಮೀಣ ಸೊಗಡಿನಲ್ಲೇ ಚಿತ್ರಿಸಿದ್ದಾರೆ.

ಊರು ಮುಂದೆ ಜನ ಸೇರಿ ಅನಿರೀಕ್ಷಿತವಾಗಿ ಬಂದು ಧಾರಾಕಾರವಾಗಿ ಸುರಿದ ಮಳೆಯಲ್ಲಿ ನೆನೆಯುತ್ತ ಹಾಡುತ್ತ ಕುಣಿಯುತ್ತಿದ್ದಾರೆ.

ಹಾಡು.

ಮಳೆ ಮಳೆ ಮಳೆ
ಅರಬ್ಬರಿಸಿ ಸುಂದಾಳೊ ಮಳೆ
ಮೊರೆಮೊರೆದು ಮಿಂದಾಳೊ ಇಳೆ ॥೧॥

ಹೆಪ್ಪೆಪ್ಪು ಮೋಡ ನೀರಾಗಿ
ಕೆರೆಕಟ್ಟೆ ತುಂಬಿ ಮದವಾಗಿ
ದೆಸೆದಿಕ್ಕು ಮಿಂಚಿನ ಸೆಳೆಯಾಗಿ
ಧರೆಗಿಳಿದು ಬಂದಾಳೊ ಮಳೆ॥೨॥

ತಂಪಾಗಿ ನೆಲವೆಲ್ಲ ಕಂಪಾಗಿ
ಕೊಳೆ ತೊಳೆದು ನುಣುಪಾಗಿ
ಇಳಿ ಇಳಿದು ಬಂದಾಳೊ ಮಳೆ
ಸರಸರ ಹರಿದಾಳೊ ಹೊಳೆ
ಹಸಿರುಕ್ಕಿ ನಗುತಾಳೊ ಇಳೆ ॥೩॥

ಎಂದು ಹಾಡುತ್ತಾ ಇದು ಎಂತಹ ಮಳೆಯ ಎಂದು ಊರಿನ ಜನರು ಕುಣಿದಾಡುತ್ತಾ ಭೂಮಿ ತಾಯಿಯನ್ನು ನೆನೆಯುತ್ತಾರೆ. ಇಂತಹ ಬಾರಿ ಮಳೆಗೆ ನಮ್ಮ ಪೂರ್ವಿಕರ ಪುಣ್ಯ ಫಲವಿರಬೇಕೆಂದು ಕೆಲವರು ತಿಳಿಯುತ್ತಾರೆ. ಈ ಸಂದರ್ಭದಲ್ಲೇ ೭೫ ವರ್ಷದ ಮುದುಕಿ ವಧೂಟಿ ಕನಕದಾಸರನ್ನು ಹುಡುಕಿಕೊಂಡು ಬರುತ್ತಾಳೆ. ಇವಳನ್ನು ನೋಡಿದ ಜನರು ಅನೇಕ ರೀತಿಯಲ್ಲಿ ಹೊಗಳುತ್ತಾರೆ. ಇವಳ ಸೌಂದರ್ಯ ಕುರಿತು ಇವಳು ಋಸಿ ಮಗಳೆಂದೂ, ಮುಕ್ಕಣ್ಣನ ಮಗಳೆಂದು ತಿಳಿಯುತ್ತಾರೆ.

ಈ ನಾಟಕದ ಕೇಂದ್ರ ಪಾತ್ರಗಳಾದ ಕನಕದಾಸರು ಮತ್ತು ವಧೂಟಿ ಕಾಲದ ತೀವ್ರತೆಯಲ್ಲಿ ಪರಸ್ಪರ ಬೆಸೆದುಕೊಳ್ಳಲೆಂದೇ ಅಗಲಿದವರು. ಪ್ರೀತಿಯ ವಿರಹದ ಕನಲಿಕೆಗಳು ಕನಕದಾಸರ ವ್ಯಕ್ತಿತ್ವವನ್ನು ದಹಿಸದೆ, ಮನುಕುಲದ ಬದುಕಿನ ಸತ್ಯಗಳನ್ನು ಹುಡುಕುವ ಶೋಧನೆಗೆ ಮುಖಮಾಡುವಂತೆ ಮಾಡಿದರೆ, ವಧೂಟಿಯೂ ಕೂಡ ಕಳೆದು ಹೋದ ಪ್ರೀತಿಯ ನೆನಪಿನಲ್ಲೇ ಜೀವಿಸುತ್ತಾ, ಮಾಗಿದ ಧ್ಯಾನದ ಕನ್ಯೆಯಾಗಿ ಕನಕದಾಸರನ್ನು ಅರಸುತ್ತಾ ಬರುತ್ತಾಳೆ. ಅತ್ತಲಿಂದ ಹರೆಯದಲ್ಲಿ ಗತಿಸಿದ ಪ್ರೀತಿಯ ನಿಧಿಯನ್ನು ಹೊತ್ತು ಬಾಡದಿಂದ ಕಾಗಿನೆಲೆಗೆ ಕನಕದಾಸರತ್ತ ಧಾವಿಸಿ ಬರುವ ಇಳಿವಯಸ್ಸಿನ ವಧೂಟಿ ಇತ್ತ ಕನಕದಾಸರು ಹರೆಯದಲ್ಲಿ ಅನುಭವಿಸಿದ

ಪ್ರೀತಿಯನ್ನೇ ದೀರ್ಘಕಾಲದ ಉಸಿರಾಗಿಸಿಕೊಂಡು, ಮೋಹನತರಂಗಿಣಿ ಮಹಾಕಾವ್ಯವಾಗಿಸಿ, ಬದುಕಿನ ವಿಸ್ಮಯಗಳನ್ನು ದೀವಿಗೆಯಾಗಿಸಿ, ಮಾತಿನ ಒಡಲೊಳಗೆ ಮೌನದ ಚಿಗುರಾಗಿ, ಜನದ ದಾಸಾನುದಾಸನಾಗಿ ವ್ಯಾಪಿಸಿದ ಹೊತ್ತಿನಲ್ಲೇ, ಹಣ್ಣಾದ ಎರಡು ಜೀವಗಳು ಅನುಸಂಧಾನಿಸುವ ಬಗೆಯನ್ನು ನಾಟಕಕಾರರು, ಮುಗಿಲ ಮಳೆ ಮತ್ತು ನೆಲ ಮಣ್ಣಿಗೆ ಸಂಕೇತಿಸಿರುವುದು ಪಕ್ವಗೊಂಡ ಹೃದಯಗಳು ಗ್ರಾಮೀಣ ಸಂಸ್ಕೃತಿಯ ಅಲೌಕಿಕ ಜಗತ್ತಿನೊಳಗೆ ಆವಿಯಾಗುವ ಕ್ರಿಯೆಯಾಗಿದೆ.

ಈ ನಾಟಕವು ದಟ್ಟವಾದ ಗ್ರಾಮೀಣ ಸಂಸ್ಕೃತಿಯ ಚಿತ್ರಣವನ್ನು ನೀಡುತ್ತದೆ. ಇಲ್ಲಿ ಬರುವ ಮಳೆಯ ರೂಪಕವು ವಾಸ್ತವದಲ್ಲಿ ನೀರಾಗುವ ಮಳೆಯಲ್ಲ, ಕ್ಷಾಮ, ಬರ, ಬಡತನವನ್ನು ಓಡಿಸುವ ಮಳೆಯಲ್ಲ, ಹಾಹಾಕಾರದಿಂದ ತತ್ತರಿಸುವ ಮನುಷ್ಯ ಮತ್ತು ಜೀವ ಕೋಟಿಗಳನ್ನು ತಣಿಸುವ ಮಳೆಯಲ್ಲ, ಬೆದೆ ಮರೆತ ಎರಡು ಜೀವಗಳು ಲೋಕದ ಕಣ್ಣೊಳಗೆ ಕಾಂತಿಯ ಪ್ರಖರತೆಯ ಹನಿಗಳನ್ನು ಇಣಿಯಲು ಪರಸ್ಪರ ಸಂಧಿಸಲು ಸಾಧ್ಯವಾಗುವಂತೆ ಮಾಡುವ ಮಳೆ, ಎದೆಯ ಕಾವಿನಲ್ಲಿ ಅರಳಿಸುವ ಅಹಿಂಸೆಯ ಪುಲಕವನ್ನು ಜಗದೊಳಗೆ ಹರಿಯುವಂತೆ ಮಾಡುವ ಮಳೆ. ನಾಟಕಕಾರರು ಮಳೆಯನ್ನು ರೂಪಕ ಪ್ರತಿಮೆಯಾಗಿಸಿ, ಮಳೆಗೆ ಜೀವ ಕೊಡುವುದು ವಧೂಟಿ ಮತ್ತು ಕನಕದಾಸರ ಜೀವನ ವೃತ್ತಾಂತದ ವಿಸ್ತಾರವನ್ನು ಹೇಳಲು ರೂಪಿಸಿಕೊಂಡ ತಂತ್ರವೂ ಆಗಿದೆ.

ಮಳೆ ಬಿದ್ದ ಬೆಲದ ಮೇಲೆ ಹರಿಯುತ್ತಾ ಬರುವ ವಧೂಟಿಯನ್ನು ನೋಡುವ ಜನರು ಅವಳನ್ನು ಪರಿಪರಿಯಾಗಿ ವರ್ಣಿಸುವ ಬಗೆ ಪ್ರೇಕ್ಷಕರ ಕುತೂಹಲಕ್ಕೆ ಕಾರಣವಾಗುವಂತೆ ಮಾಡುತ್ತದೆ. ವಧೂಟಿಯ ನಡಿಗೆಯಲ್ಲಿರುವ ಅವಸರ, ಮಿಡಿತ, ಕಾತರ, ಕಳವಳವನ್ನು ಗ್ರಹಿಸುವ ಜನರು ಅವಳನ್ನು ಮಾತನಾಡಿಸಿದಾಗ ದಂಗಾಗುತ್ತಾರೆ. ಮಾತಿನ ಆಕಾರಗಳನ್ನು ಮೌನದೊಳಗೆ ವಿನ್ಯಾಸಗೊಳಿಸಿ ಪದವಾಗಿಸುವ ಕಾಯಕದಲ್ಲಿ ನಿರತನಾಗಿರುವ ಕನಕದಾಸರನ್ನು ಕಾಣಲು ಬಂದಿರುವ ವಧೂಟಿಯನ್ನು ನೋಡಿ ವಿಸ್ಮಯಗೊಳ್ಳುತ್ತಾರೆ. ಅವಳ ಮಾತಿನ ಆರ್ದ್ರತೆಯೊಳಗೆ ಮಿಂದು ಪುಳಕಿತರಾಗಿ ಕನಕದಾಸರು ನೆಲೆಸಿರುವತ್ತ ದಾರಿ ತೋರಿಸುತ್ತಾರೆ.

ವಧೂಟಿ ಕನಕದಾಸರನ್ನು ಮನಸಾರೆ ಪ್ರೀತಿಸಿದ ಹೆಣ್ಣು. ತನ್ನ ತಂದೆಯ ನಿಷ್ಕರುಣ ಗಡುಸು ಧೋರಣೆಯಿಂದಾಗಿ ಹರೆಯದಲ್ಲಿ ಕನಕನ ಬಾಳ ಸಂಗಾತಿಯಾಗಲಿಲ್ಲ. ಈ ಕಾರಣಕ್ಕಾಗಿ ಅವಿವಾಹಿತಳಾಗಿಯೇ ಉಳಿದ ಆಕೆ ತನ್ನ ತಂದೆಯ ಕಾಲಾನಂತರ ಕನಕರ ಕಾರ್ಯಕ್ಷೇತ್ರವಾದ

ಕಾಗಿನೆಗೆ ಬಂದು ಅವರೊಡನೆ ಯೋಗಿನಿಯಂತೆ ನೆಲೆ ನಿಲ್ಲುತ್ತಾಳೆ. ಅಸಮಾನತೆ, ಸ್ವಾರ್ಥ, ದ್ವೇಷದ ಕಿಚ್ಚು ಹತ್ತಿ, ಕುದಿಯುತ್ತಿರೋ ಈ ನೆಲಕ್ಕೆ ತಂಪಾದ ನೀರು ಹರಿಸಿ ಎಲ್ಲ ಜಾತಿಯ ಹೂಗಿಡ ಬೆಳೆಸುವ ಕಾಯಕಕ್ಕೆ ಕನಕರು ವಧೂಟಿಯನ್ನು ಹಚ್ಚುತ್ತಾರೆ. ಹಸಿರೊಳಗೆ ಹಸಿರಾಗಿ, ಮೌನದೊಳಗೆ ಮೌನವಾಗಿ ಹೂಗಿಡದ ಕಳೆಕೀಳುತ್ತಿರುವ ವಯಸ್ಸಾದ ಬಿಳಿಗಡ್ಡದ ಕನಕದಾಸರನ್ನು ವಧೂಟಿ ನೋಡುವ ಮತ್ತು ಕನಕದಾಸರು ವಧೂಟಿಯನ್ನು ನೋಡುವ ಪರಸ್ಪರ ಪ್ರೀತಿಯ ಆಳದ ಧ್ವನಿಯನ್ನು ಚಿತ್ರಿಸುವಾಗ, ಅಕ್ಷರ ರೂಪಿಸುವಾಗ, ನಾಟಕಕಾರರಾಗಿ ವಹಿಸಿರುವ ಎಚ್ಚರವೂ ಚಿಕ್ಕಣ್ಣನವರ ಬೌದ್ಧಿಕ ಕಸರತ್ತು, ಮಾನಸಿಕ ಪರಿಧಿ ಅವರು ತಳೆಯುವ ಧೋರಣೆಯೇ ಅವರ ಮಾತಿನಲ್ಲಿ ರೂಪಕ ಶಾಬ್ಧಿಕ ಶಕ್ತಿಯಾಗಿದೆ.

ಕನಕದಾಸರು ಮತ್ತು ವಧೂಟಿಯ ಮಾತುಗಳು ಜಗದ ಕತ್ತಲೆಯನ್ನು ಸವರುವ ಅಸ್ತ್ರಗಳಾಗುತ್ತವೆ. ಕನಕದಾಸರ ಮೌನವನ್ನು ಸೀಳಿ ಮಾತಿಗೆಳೆಯುವ ವಧೂಟಿಯ ದಿಟ್ಟತನವು ಸಮಕಾಲೀನ ಸ್ತ್ರೀಯರ ಪ್ರೇರಕ ಶಕ್ತಿಯಾಗಿ ಕಾಣುತ್ತದೆ. ಪರಸ್ಪರ ಇಬ್ಬರ ಮನದೊಳಗೆ ಇಟುಕುವ ಚಹರೆಗಳು ಲೋಕ ಕಲ್ಯಾಣವನ್ನು ಉಸುರಿಸುತ್ತಿರುತ್ತವೆ. ಪ್ರಕೃತಿಯ ಹಸಿರೊಳಗೆ ಆದಿಕೇಶವನ ಗುಡಿಯೊಳಗೆ ಧ್ಯಾನಿಸುವ ಇವರ ಮಾತುಗಳು ಮಲೀನಗೊಂಡ ಪಂಡಿತರ ಎದೆಯಲ್ಲಿ ಕೆಂಡಗಳಾಗಿ ಉರಿಯಲಾರಂಭಿಸಿದಾಗ, ವಧೂಟಿ ಮತ್ತು ಕನಕದಾಸರ ಅಮೂರ್ತ ಪ್ರೀತಿಯ ಹೊನಲನ್ನು ಹಾದರವನ್ನಾಗಿ ರೂಪಾಂತರಿಸುವ ಬ್ರಾಹ್ಮಣರ ಹುನ್ನಾರವು ಕೇವಲ ಇವರಿಬ್ಬರನ್ನು ಬೇರ್ಪಡಿಸುವ ಮಾರ್ಗವಾಗಿರುವುದಿಲ್ಲ. ಕನಕದಾಸರು ಜನಸಾಮಾನ್ಯರನ್ನೂ, ಶ್ರಮಿಕರನ್ನೂ, ಕೆಳವರ್ಗದ ಜನರನ್ನು, ಜಾಗೃತಿಗೊಳಿಸಿ, ಜಾತಿ, ಧರ್ಮ, ಕುಲಗೋತ್ರಗಳನ್ನು ಒಡೆದು ಮನುಷ್ಯ ಪ್ರೀತಿಯನ್ನು ಜನರಲ್ಲಿ ಬೆಳೆಸುತ್ತಿರುವುದು ಬ್ರಾಹ್ಮಣರಿಗೆ ಇಷ್ಟವಿರಲಿಲ್ಲ. ಮೌಢ್ಯದಿಂದ ಜನರು ಕೊಳೆತರಷ್ಟೇ ಬ್ರಾಹ್ಮಣತ್ವವನ್ನು ಉಳಿಸಿಕೊಳ್ಳಬಹುದು ಎಂಬ ಧೋರಣೆಯನ್ನು ಒಡೆದು ಹಾಕುತ್ತಿರುವ ಕನಕದಾಸರನ್ನು ಹೇಗಾದರೂ ಕಾಗಿನೆಲೆಯಿಂದ ಓಡಿಸಲೇಬೇಕಾದ ತುರ್ತಿಗಾಗಿ ಕಾಯುತ್ತಿದ್ದವರಿಗೆ, ವಧೂಟಿಯ ಜೊತೆಗಿನ ಸಂಬಂಧವು ಕನಕದಾಸರನ್ನು ಜನರು ಹರಸಿ, ಹಾಡುತ್ತಿದ್ದುದ್ದು ಮತ್ತಷ್ಟು ಬ್ರಾಹ್ಮಣರಿಗೆ ಅಪಥ್ಯವಾಗಿ ಆದಿಕೇಶವನ ಗುಡಿಯೊಳಗೆ ಹಾದರದ ಆರೋಪವನ್ನು ಹೊರಿಸುತ್ತಾರೆ. ಈ ಸಂದರ್ಭದಲ್ಲಿ ವಧೂಟಿ ತಳೆಯುವ ನಿಲುವು ಈ ನಾಟಕದ ಮುಖ್ಯ ಭಾಗವಾಗಿದೆ. ಪಂಡಿತ–ಪಾಮರರಿಗೆ ಸವಾಲು ಎಸೆಯುವ ವಧೂಟಿಯ ವ್ಯಕ್ತಿತ್ವದ ಪಕ್ವತೆಯನ್ನು ಇಲ್ಲಿ ಕಾಣಬಹುದು.

ರಾಮಧಾನ್ಯ ಚರಿತೆಯಲ್ಲಿ ಬರುವ ರಾಗಿ ಭತ್ತದ ಪ್ರಸಂಗವನ್ನು ಬಳಸಿ ವಧೂಟಿಯ ಬಾಯಲ್ಲಿ ಕಥೆಯಾಗಿ ಹೇಳಿಸಿರುವ ನಾಟಕಕಾರರ ಸಾಮಾಜಿಕ ಕಳಕಳಿ ಬದ್ಧತೆ ಇಲ್ಲಿ ಗೋಚರವಾಗುತ್ತದೆ. 'ರಾಮಧಾನ್ಯ ಚರಿತೆ'ಯನ್ನು ಕುರಿತು ವಿವರಿಸಿ ವಧೂಟಿಯು ಈ ರೀತಿ ವಿವೇಕ ಹೇಳುವಳು.

ವಧೂಟಿ:- "ಒಳ್ಳೆ ಮಾತು ಕೇಳಿದೆ ಈರಪ್ಪ ರಾಗಿ ಭತ್ತದ
ಮ್ಯಾಲೆ ದ್ವೇಷ ಸಾಧಿಸ್ನಿಲ್ಲ.... ಸೋತು ನಿಂತಿದ್ದ
ಭತ್ತದ ಹತ್ರ ಬಂದು ರಾಗಿ 'ಬಾ ನಾವಿಬ್ರೂ ಸಮಾ
ನ್ರು..... ಸೋದರರ್ರು.... ಯಾರೂ ಹಿರೀರಲ್ಲ, ಯಾರೂ
ಕಿರೀರಲ್ಲ, ಬಾ, ನಾವೆಲ್ಲ ಸೇರಿ ಹಸ್ಕೊಂಡು ಒದ್ದಾಡೊ
ಬಂಧುಗಳ ಹತ್ರಕ್ಕೆ ಹೋಗೋಣ. ಸೋತು ಸೋರ್‌ಗಿರೋ
ಅವ್ರ ದೇಹಕ್ಕೆ ಜೀವ ತುಂಬೋಣ... ಅತಂತ್ರದಲ್ಲಿ
ಕುದೀತಿರೋ ಅವ್‌ರ ಮನಸ್‌ಗೊಳ ಮಲ್ಲಿಗೆ ವನ
ಮಾಡೋಣ...."[೧]

ಭಾರತೀಯ ಸಮಾಜದಲ್ಲಿ ಮೇಲು -ಕೀಳು, ಅಸ್ಪೃಶ್ಯತೆ ಶೋಷಣೆಯಿಂದ ಮಡುಗಟ್ಟಿದ ದೇಹಕ್ಕೆ ರಾಗಿ ಭತ್ತದ ಕಥೆಯ ಮೂಲಕ ಶ್ರಮಿಕರ, ಬಡವರ, ನಿಜ ಸತ್ಯಗಳನ್ನು ವಧೂಟಿಯ ಬಾಯಿಂದ ಹೇಳಿಸಿರುವ ನಾಟಕಕಾರರ ಉದ್ದೇಶವೇ ಮನುಷ್ಯ ಪ್ರೀತಿಯದ್ದಾಗಿದೆ ಮತ್ತು ಭಾರತದ ಸಾಮಾಜಿಕ ರಚನೆಯಲ್ಲಿರುವ ಬಿರುಕುಗಳನ್ನು ಮುಚ್ಚುವ ತಹತಹವಾಗಿದೆ. ಅದಕ್ಕಾಗಿಯೇ "ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯ ನೇನಾದರೂ ಬಲ್ಲಿರಾ?"[೨] ಎಂದು ಸಾರಿದ ಕನಕದಾಸರನ್ನು ಕೇಂದ್ರ ವಸ್ತುವನ್ನಾಗಿಟ್ಟಿಕೊಂಡು ನಾಟಕ ರಚಿಸಲು ಚಿಕ್ಕಣ್ಣನವರಿಗೆ ಸಾಧ್ಯವಾಗಿರುವುದು.

ಈ ನಾಟಕದಲ್ಲಿ ಪ್ರಧಾನವಾಗಿ ಗ್ರಾಮೀಣ ಪರಿಸರದಲ್ಲಿ ಕಂಡುಬರುವ ಸೂಕ್ಷ್ಮವೇ ಜಾತಿ, ಮತ, ಧರ್ಮಗಳಲ್ಲಿನ ಕೌರ್ಯಗಳನ್ನು ಅಳಿಸುವುದು, ಜೀವನ ಪ್ರೀತಿಯನ್ನು ಉಳಿಸುವುದು, ಕನಕದಾಸರ ಅಮೂರ್ತನೆಲೆಯಲ್ಲಿ ಹಸಿರಾಗಿರುವ ಮೌಲ್ಯಗಳನ್ನು ಸಮಕಾಲೀನ ಸಮಾಜದೊಂದಿಗೆ ತಳಕು ಹಾಕುವಂತಹದ್ದು ಆಗಿದೆ. ಪ್ರಾಕೃತಿಕ ಹಸಿವುಗಳು ಕನಕದಾಸರಿಗೂ ಇತ್ತು ಎಂಬುದಕ್ಕೆ ಇಲ್ಲಿ ಬರುವ ಪ್ರೇಮ ಪ್ರಸಂಗವನ್ನು ಗಮನಿಸಬಹುದು. ಹರೆಯದಲ್ಲಿದ್ದಾಗ ಕನಕದಾಸರು

ಮತ್ತು ವಧೂಟಿಯ ಪ್ರೇಮ ಸಲ್ಲಾಪಗಳು ಊರ ಜನರ ಕಿವಿಯಲ್ಲಿ ಅಬ್ಬರ ಪಡೆದು ಏಕಾಂತದಲ್ಲಿದ್ದ ಇವರಿಬ್ಬರನ್ನು ವಧೂಟಿಯ ತಂದೆ ಗರ್ಜಿಸಿ, ಅಬ್ಬರಿಸಿ, ಮಗಳನ್ನು ಸೆರೆಯಲ್ಲಿಡುತ್ತಾನೆ. ಅಲ್ಲಿಂದ ಕನಕದಾಸರು ಕಾಗಿನೆಲೆಗೆ ಬಂದು ನೆಲೆಸುತ್ತಾರೆ. ಇವರಿಬ್ಬರು ಮತ್ತೆ ಪರಸ್ಪರ ಸೇರುವುದೇ ಇಳಿವಯಸ್ಸಿನಲ್ಲಿ. ಪಾಲ್ಕುರಿಕೆ ಶಿವಶಂಕರ್ ಅವರು ವಧೂಟಿ ನಾಟಕದಲ್ಲಿನ ಸಾವು ಮತ್ತು ಸ್ವಾತಂತ್ರ್ಯದಲ್ಲಿ 'ವಧೂಟಿ' ನಾಟಕವನ್ನು ಕುರಿತು ಈ ರೀತಿ ಹೇಳುತ್ತಾರೆ. "ಇಂಡಿಯಾದ ಪುರುಷ ಪ್ರಧಾನ ವ್ಯವಸ್ಥೆಯು ಹೇಗೆ ಹೆಣ್ಣನ್ನು ಬಂಧಿಸಿಡುತ್ತದೆ ಮತ್ತು ಬಿಡುಗಡೆಯ ಮಾರ್ಗಗಳನ್ನು ಮುಚ್ಚುತ್ತದೆ ಎಂಬ ಅಂಶಗಳನ್ನು ಈ ನಾಟಕವು ಸೂಕ್ಷ್ಮವಾಗಿ ಗ್ರಾಮೀಣ ಸೊಗಡಿನಲ್ಲಿ (ಪರಿಸರದಲ್ಲಿ) ಬಿಚ್ಚಿಡುತ್ತದೆ. ಪ್ರೀತಿಯ ಸೆಲೆಯಲ್ಲಿ ಬಂಧಿಯಾಗಿದ್ದ ವಧೂಟಿಯನ್ನು ತನ್ನ ತಂದೆ ಬಾಡ ತಳಲೂರ ಗೌಡನು ತಾನು ಸಾಯುವವರೆಗೂ ತನ್ನ ಮಗಳನ್ನು ಹೊಸ್ತಿಲ ಆಚೆ ಬಿಡುವುದಿಲ್ಲ. ತಂದೆ ಸತ್ತ ನಂತರವೇ ವಧೂಟಿ ಸ್ವತಂತ್ರಳಾಗುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ 'ಸಾವು ಮತ್ತು ಸ್ವಾತಂತ್ರ್ಯ' ತನ್ನ ತಂದೆಯ ಸಾವಿನಿಂದಲೇ ಮಗಳು ವಧೂಟಿ ಸ್ವತಂತ್ರಳಾಗುತ್ತಾಳೆ ಅಂದರೆ ಬದುಕಿದ್ದಾಗ ತಂದೆಯ ಆಚರಣೆಯ ಕ್ರೌರ್ಯಗಳು ವಧೂಟಿಯ ಜೀವನದಲ್ಲಿ ಘಾಸಿ ಮಾಡಿರುವ ಬಗೆ. ಇದು ಕೇವಲ ನಾಟಕದಲ್ಲಿನ ಪ್ರಸಂಗವಾಗದೆ ಇಂಡಿಯಾದ ಸಾಮಾಜಿಕ ಸ್ವರೂಪವನ್ನು ಬಯಲಿಗೆಳೆಯುತ್ತದೆ.

ವಧೂಟಿ ನಾಟಕವು ಸೂಕ್ಷ್ಮ ಸಂವೇದನೆಗಳನ್ನು ಒಡಲ್ಲಲ್ಲಿಟ್ಟುಕೊಂಡು ಮೈದಾಳುತ್ತಾ ಸಾಗುತ್ತಲೇ, ಸಮಕಾಲೀನ ಚಹರೆಗಳನ್ನು ಬಿಚ್ಚಿಡುತ್ತಾ ಎದ್ದು ನಿಲ್ಲುತ್ತದೆ. ಅಂದರೆ ಹೊರ ಜಗತ್ತಿನ ಆಚರಣೆ ರೀತಿ ನೀತಿಗಳಿಗೆ ಆಂತರಿಗೆ ಸಂಸ್ಕಾರಗಳಿಂದ ಮನುಷ್ಯತ್ವವನ್ನು ಪಡೆಯುವ ರೀತಿ ಮತ್ತು ಅವಲೋಕನ ಎರಡನ್ನೂ ಈ ನಾಟಕದ ಮೂಲಕ ಚಿಕ್ಕಣ್ಣನವರು ಹೇಳಲು ಹೊರಟಿದ್ದಾರೆ. ಬದುಕಿನ ಬೇಗೆಗಳಲ್ಲಿ ಮನುಷ್ಯನ ವಿಕೃತಿಗಳನ್ನು ಕನಕದಾಸರ ವ್ಯಕ್ತಿತ್ವದ ಥಾಳಿನಿಂದ ಉಪಶಮನ ಗೊಳಿಸಬಹುದೆಂಬ ಎಳೆಯನ್ನೂ ಗುರ್ತಿಸಿದ್ದಾರೆ. ಹಿಂದೂ ಧರ್ಮದಲ್ಲಿನ ಮೌಢ್ಯಗಳಿಂದ ಕೆಳವರ್ಗದ ಕೋಟ್ಯಾಂತರ ಜನರು ನರಳುವ ಸೂಚನೆಯನ್ನು ಇಲ್ಲಿ ದಾಖಲಿಸುತ್ತಾರೆ"[೩] ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಇಲ್ಲಿ ಚಿಕ್ಕಣ್ಣನವರು ಕನಕದಾಸ– ವಧೂಟಿಯರ ಸಂವಾದ, ಊರಿನ ಜನರೊಂದಿಗೆ ನಡೆಯುವ ಸಂವಾದ, ದ್ವೇಷವನ್ನು ಸಾಧಿಸುವ ಊರಿನ ಹಿರಿಯರ ಅವಹೇಳನಕಾರಿಯಾದ ಮಾತುಗಳು, ವಧೂಟಿಯು ಕನಕರ ಮೇಲೆ ಇಟ್ಟಿರುವ ಪ್ರೀತಿ, ಬಾಡಗ್ರಾಮದ ಗ್ರಾಮೀಣದಲ್ಲಿನ ಸಾಂಸ್ಕೃತಿಕ, ಸಾಮಾಜಿಕತೆ, ನಂಬಿಕೆಗಳನ್ನು ಕುರಿತು ಇಲ್ಲಿ ವಿವರಿಸಿದ್ದಾರೆ.

ಕೊನೆ ಟಿಪ್ಪಣಿ:

೧. ವಧೂಟಿ, ಕಾ.ತ.ಚಿಕ್ಕಣ್ಣ, ೧೯೯೭, ಕೊಪ್ಪಲು ಪ್ರಕಾಶನ, ಬೆಂಗಳೂರು, ಪುಟ ೪೧

೨. ನೀರೂಳಗಣ ಬೆಳಕು, ಸಂ. ಎಚ್.ದಂಡಪ್ಪ, ೨೦೧೦, ಸಿರಿವರ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ: ೩೯೦.

೩. ಅದೇ, ಪುಟ ೩೯೧.

ಅಧ್ಯಾಯ ೬

ಕಾವ್ಯ ಮತ್ತು ಗ್ರಾಮೀಣ ಸಂವೇದನೆ

ಅಧ್ಯಾಯ ೬
ಕಾವ್ಯ ಮತ್ತು ಗ್ರಾಮೀಣ ಸಂವೇದನೆ

ಕಾ.ತ. ಚಿಕ್ಕಣ್ಣನವರು 'ಗೊಂಚಲು' ಮತ್ತು 'ಮೆಕ್ಕೆ ಒಕ್ಕಲು' ಎಂಬ ಕವನ ಸಂಕಲನಗಳನ್ನು ಬರೆದಿದ್ದಾರೆ. ಇವರ ಸಮಗ್ರ ಕವಿತೆಗಳು 'ಮೆಕ್ಕೆ ಒಕ್ಕಲು' ಎಂಬ ಕೃತಿಯಲ್ಲಿ ಪ್ರಕಟವಾಗಿವೆ.

ದೇಸೀಯ ಸಂಸ್ಕೃತಿಯ ಬಗೆಗೆ, ಗ್ರಾಮೀಣ ಸಂಸ್ಕೃತಿಗೆ ನಾವು ತೋರಬೇಕಾದ ಕಾಳಜಿ, ವಹಿಸಬೇಕಾದ ಎಚ್ಚರ ಇವತ್ತಿನ ದಿನಗಳಲ್ಲಿ ಬಹು ತುರ್ತಿನದ್ದಾಗಿದೆ. ಗ್ರಾಮೀಣ ಮತ್ತು ದೇಸಿ ಸಂಸ್ಕೃತಿಯ ಚಿಂತನೆಯನ್ನು ಒಳಗೊಂಡ ಸಾಹಿತ್ಯವನ್ನು ಹೆಚ್ಚು ಪ್ರಚಾರಕ್ಕೆ ತರಬೇಕಾಗಿದೆ. ಇಂತಹ ಆಶಯವನ್ನಿಟ್ಟುಕೊಂಡು ಸಾಹಿತ್ಯ ರಚಿಸಿದವರಲ್ಲಿ ಕಾ.ತ. ಚಿಕ್ಕಣ್ಣನವರು ಒಬ್ಬರಾಗಿದ್ದಾರೆ.

ಇವರಿಗೆ ಪ್ರಾದೇಶಿಕತೆ ಎಲ್ಲಕ್ಕಿಂತ ಪ್ರಿಯ. ಪ್ರಿಯವಾದುದನ್ನು ಕುರಿತು ಪ್ರಿಯವಾಗಿ ಬರೆಯುವ ಸ್ನೇಹಪ್ರಿಯ, ಗ್ರಾಮೀಣ ಸೊಗಡಿನ ಬರಹಗಾರರು ಚಿಕ್ಕಣ್ಣನವರು.

ಇವರ ಕವನಗಳಲ್ಲಿ ಬರಹಕ್ಕೆ ಒಂದು ಪ್ರತ್ಯೇಕ ಬಂಧ ಇದೆ; ಪ್ರತ್ಯೇಕ ಚೆಂದ ಇದೆ; ಪ್ರತ್ಯೇಕವಾದ ಛಂದವೂ ಇದೆ.

"ಹೊತ್ತು ಸುರಿದು ಹೋಗದಿರಲಿ
ಮತ್ತೆ ಮರೆವು ಬಾರದಿರಲಿ
ಮೆಲ್ಲಾಗೆ ನುಡಿಯೇ ಮನವೇ
ಒಟ್ಟಾಗಿ ಕುಂತು ಕಟ್ಟಿದ
ಕನುಸುಗಳ ಬುತ್ತಿ ಗಂಟು !"

ಇಲ್ಲಿ ಒಲುಮೆ ಇದೆ; ಮೌನವಿದೆ! ಇಳೆ ಇದೆ; ಮಳೆ ಇದೆ; ಮನಸಿದೆ; ಕನಸಿದೆ! ಎಲ್ಲಕ್ಕಿನ್ನ ಮಿಗಿಲಾಗಿ ಬುಡಕಟ್ಟು ಜನಾಂಗದ ಆಡುನುಡಿಯೂ ಇದೆ.

"ಬೋರೆಯ ಹಾಸುರದಿ
ಏಸೊಂದು ಮುತ್ತು
ಬಾ ಗಿಣಿಯೇ
ದನಿ ತಿರುಗಿ
ಮುಂಜಾನೆ ಹೊತ್ತು!"–

ಇಂಥ ಆರ್ದ್ರ ಭಾವಧೀಪ್ತ ಸಾಲುಗಳು ಇಲ್ಲಿ ಅವೆಷ್ಟೊ ಹುದುಗಿವೆ. ನೆಲದ ಮರೆಯ ನಿಧಾನದಂತೆ ! ಮೋಡದ ಮರೆಯ ಮಿಂಚಂತೆ? ಮರಳ ಒಳಗಿನ ಜೀವ ಜಲದ ಸೆಲೆಯಂತೆ.

ಇವರ ಸಮಗ್ರ ಕವನಗಳನ್ನು ಕುರಿತು ಡಾ. ದೊಡ್ಡರಂಗೇಗೌಡರು ಈ ರೀತಿ ಹೇಳುವರು. "ಹುಚ್ಚು ಮನಸ್ಸಿನ ನಾನಾ ಕಪ್ಪು ಕಣಜಗಳಲ್ಲಿ ಪೊರೆಬಿಟ್ಟ ಬದುಕು" ಅನ್ನು ಹಿಡಿದಿಟ್ಟ ಕವಿ ಧನ್ಯ. "ಕೆಸರಾಗಲಿ ನಿನ್ನೆ ಮೊನ್ನೆಗಳೆಲ್ಲಾ ಅವು ಕತ್ತಲೆಯ ಕೂಸು ಬಿತ್ತು ನೀ ಭರವಸೆ ಆತ್ಮ ವಿಶ್ವಾಸಗಳ ಸ್ವಪ್ನಸಾಲು" ಎಂಬಲ್ಲಿ ಎಂಥ ಪರಿಸರಿದಿಂದ ಬಂದವರು ಹೆಂಗೆ ಭರವಸೆಯ ಆಶಾಕಿರಣಗಳ ಕಂಡು ಬದುಕನ್ನು ನವೀಕರಿಸಿಕೊಳ್ಳಬೇಕೆಂಬ ಅಭೀಪ್ಸೆಯನ್ನು ಸಹೃದಯ ಕವಿ ಮೆದುಮಾತಿನಲ್ಲಿ ಕಿವಿಯ ಬಳಿ ಮೆಲ್ಲಗೆ ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಕವನಗಳ ಮೂಲಕ ಉಸುರಿದ್ದಾನೆ.[೧] ಬದುಕು ಬರಿ ಕತ್ತಲೆಯೇ ಅಲ್ಲ. ಬೆಳಕು ಬಂದೇ ಬರುತ್ತದೆ ಎಂಬ ಆತ್ಮವಿಶ್ವಾಸ ಹತಾಶ ವ್ಯಕ್ತಿಗೆ ಧೈರ್ಯ ತುಂಬುತ್ತದೆ.

ಈ ಕವನ ಸಂಕಲನವು ದನಿಸೀಮೆ, ಒಳಸೀಮೆ, ಹೊರಸೀಮೆ ಮತ್ತು ಹಳೇ ಸೀಮೆಗಳಾಗಿ ಪ್ರಮುಖ ೪ ಭಾಗಗಳಲ್ಲಿದೆ. ಹಳೆ ಸೀಮೆಯ ಕವನಗಳು ೧೯೭೦ರಲ್ಲಿ ಪ್ರಕಟವಾದ 'ಗೊಂಚಲು' ಕವನ ಸಂಕಲನದಲ್ಲಿ ಸೇರಿವೆ. 'ಹಸಿರು ಸೀಮೆಯ ಹಾಡಿ'ನಲ್ಲಿ ನಿಸರ್ಗದ ರಮ್ಯ ಚೆಲುವು, 'ತಿಟ್ಟು ತಿರುವುಗಳನೇರಿ', 'ಪ್ರಕೃತಿಯ ಮನೋಹರತೆ', 'ಮೆಕ್ಕೆ ಒಕ್ಕಲು'ನಲ್ಲಿ ಪ್ರಾದೇಶಿಕತೆ ವೈಲಕ್ಷಣ್ಯ, 'ಮೂಕ ಸಾಕ್ಷಿಗಳು', 'ಕರಿನೆಲದ ಪ್ರಶ್ನೆ', 'ನಕ್ಕಳು ನ್ಯೂಯಾರ್ಕ್ ಹುಡುಗಿ' – ಪ್ರವಾಸಾನುಭವಗಳನ್ನು ಕುರಿತು ಕವಿತೆಗಳಾಗಿವೆ.

ಇವರ ಪ್ರಾದೇಶಿಕತೆಯ ಗ್ರಾಮೀಣ ಸೊಗಡಿನಲ್ಲಿಯೇ ರಚಿತವಾದ ಅನೇಕ ಕವಿತೆಗಳು ಇಲ್ಲಿವೆ. ಇದರಲ್ಲಿ 'ಹೆಣ್ಣಿಗೆ ತೌರು ಹಂಬಲ'ದಲ್ಲಿನ ದೇಸಿ ಪರಿಸರದ ಗ್ರಾಮೀಣ ಚಿತ್ರಣವಿದೆ.

"ನನ್ನೂರು ಚೆನ್ನೂರು ಚೆನ್ನೂರು ತವರೂರು
ತವರೂರು ಗಾಳಿ ಬಲು ತಂಪು । ನನ್ನ
ತವರೂರು ನೆನಪು ಬಲು ಇಂಪು ॥ ೧ ॥
ತವರ್ಮುಂದೆ ತೆಂಗುಗಳು ತವರ್ಹಿಂದೆ ಬಾಳೆಗಳು
ಬಾಳೆಗಳು ತುಂಬ ವನ ತುಂಬ । ನನ್ನ
ತವರ್ಮುಂದಿ ತವರ ಮನೆ ತುಂಬ ॥೨॥
ಬರುವ ನನ್ನಣ್ಣನ ಬ್ಯಾಗೇಯ ಆರೀಸು
ದಾರಿಯ ಆಯಾಸ ನೀಗಿಸು । ಎಲೆ ದೇವ
ಸುಳಿ ಬಾಳೆ ಚಾಮರವಾಗಿಸು ॥೩॥
ಬತ್ತ ಕುಟ್ಟಿಲ್ಲ ರಾಗಿ ಬೀಸಿಲ್ಲ ಹಟ್ಟಿ ಕಸ ಬಾಚಿಲ್ಲ
ಮನೆ ಗೋಕುರ್ತಿಯಂತು ಇನಿತು ಮುಗಿದಿಲ್ಲ
ತಂಗಿ ಬಂದಾಳೆಂಗೊ ತವರೂಗೆ ತಮ್ಮಣ್ಣಾ ॥೧೩॥"[೨]

ಎಂಬ ಕವಿತೆಯು ಹೆಣ್ಣಿಗೆ ತವರು ಮನೆ ಎಂದರೆ ತಂಪು. ನಾನಾ ರೀತಿಯಲ್ಲಿ ಹೊಗಳುತ್ತಾಳೆ. ಗಂಡನ ಮನೆಯಲ್ಲಿರುವ ತಂಗಿಯನ್ನು ತವರಿನ ಅಣ್ಣ ಕರೆದುಕೊಂಡು ಹೋಗಲು ಬರುವಾಗ ಮಲ್ಲಿಗೆ ಹೂಗಳು ದಾರಿಗೆ ಚೆಲ್ಲಾವೆ ಎಂದು, ತವರಿನ ಸಿರಿಯನ್ನು ತಂದಾನ. ಬರುವಾಗ ಬ್ಯಾಗೇಯನ್ನು, ಆಯಾಸವನ್ನು ನೀಗಿಸು ಎಂದು ತಂಗೆ 'ಎಲೆ ದೇವ ಸುಳಿ ಬಾಳೆ ಚಾಮರವಾಗಿಸು' ಎಂದು ಕೇಳಿಕೊಳ್ಳುತ್ತಾಳೆ.

ಅಣ್ಣನು ತಂಗಿಯನ್ನು ಕರೆದುಕೊಂಡು ಹೋಗುತ್ತೇನೆ ಎಂದು ತಂಗಿಯ ಅತ್ತೆ–ಮಾವರನ್ನು, ಭಾವ, ಗಂಡನನ್ನು ಕೇಳುವುದು – ಈ ಸನ್ನಿವೇಶದ ಕವನಗಳು ಅಪ್ಪಟ ಗ್ರಾಮೀಣ ಸೊಗಡನ್ನು ನಮ್ಮ ಕಣ್ಮುಂದೆ ತಂದಿಡುತ್ತವೆ.

ಕೊನೆಗೆ ಅತ್ತೆ–ಮಾವಂದಿರು ತನ್ನ ಅಣ್ಣನೊಂದಿಗೆ ತವರಿಗೆ ಕಳಿಸುವುದಿಲ್ಲ ಎಂದು ಅಣ್ಣನನ್ನು ಹಿಂದಕ್ಕೆ ಕಳಿಸಿ, ಈ ರೀತಿ ಹೇಳುವಳು.

"ಶಿವರಾಯ ಜವರಾಯ ಹೆಣ್ಣಾಗಿ ಹುಟ್ಟಿಸಬೇಡ
ಇಂಥಾ ಗಂಡ, ಅತ್ತೆ, ಮಾವನೋರ ಕೊಡಬೇಡ। ದಮ್ಮಯ್ಯ
ಹೆಣ್ಣೀಗೆ ತವರ್ಹಂಬ್ಲ ಹೆಚ್ಚಿಸಬೇಡ"

ಎಂದು ತನ್ನ ತವರಿನ ಹಂಬಲ, ಅತ್ತೆ, ಮಾವ, ಗಂಡರ ಮೇಲೆ ಇರುವ ಬೇಸರವನ್ನು ಕುರಿತು ಹೇಳುತ್ತಾಳೆ ಹಾಗೂ ಹೆಣ್ಣಿಗೆ ಇರುವ ತವರಿನ ಹಂಬಲ ಕುರಿತು ಹೇಳುತ್ತಾಳೆ.

ಲಿಂಗರಾಜು ಕಾವ್ಯ ಮೂಲತಃ ವಾಚನದ ಹೇಳುಕೇಳುವ ಪ್ರವೃತ್ತಿಯದು. "ಕುಮಾರವ್ಯಾಸ ಭಾರತದ ಒಟ್ಟು ಧ್ವನಿ ಕೇಳು ಜನಮೇಜಯ ಎಂಬಂತಿರುವಂಥದು. ವಚನಗಳು ಮತ್ತು ದಾಸರ ಹಾಡುಗಳು ಈ ಬಗೆಯವೇ. ಇನ್ನು ಜನಪದ ಸಾಹಿತ್ಯವಂತೂ ಪೂರ್ಣವಾಗಿ ಮೌಖಿಕವೇ. ಮುದ್ರಣ ಪುಸ್ತಕಗಳ ತಾಂತ್ರಿಕತೆ ಬೆಳೆದಂತೆ 'ಓದುವ' ಓದಿಸಿಕೊಳ್ಳುವ ನೆಲೆಗೆ ಹೊರಳಿದ ಕಾವ್ಯ ಈ ಶತಮಾನದಲ್ಲಿ ಅತ್ಯಂತ ಸಮೃದ್ಧತೆಯನ್ನು ತೋರಿತು. ಆದರೂ ಇಲ್ಲಿ ಒಬ್ಬ ಕೇಳುಗನಿಗೆ ಹೇಳುವ ದನಿಯೊಂದು ಹುದುಗಿರುವುದು ಕಾವ್ಯದ ಒಳಗೆ ಹರಿಯುತ್ತಿರುವುದನ್ನು ಒಳಹೊಕ್ಕು ನೋಡಿದಾಗ ಕಾಣಬಹುದು. ಬೇಂದ್ರೆ ಕಾವ್ಯ ಇದಕ್ಕೆ ಉತ್ತಮ ನಿದರ್ಶನ.

ಈ ಅಂಶವನ್ನು ಇಲ್ಲಿ ಪ್ರಸ್ತಾಪಿಸಿದ್ದು ಚಿಕ್ಕಣ್ಣನವರ ಈ ಪ್ರಸ್ತುತ ಸಂಕಲನದಲ್ಲಿಯೂ ಇಂಥ ಧ್ವನಿ ಇಲ್ಲಿನ ಕವಿತೆ, ಹಾಡುಗಳ ಒಳಗನ್ನು ತುಂಬಿಕೊಂಡಿದೆ ಎಂಬುದಕ್ಕಾಗಿ ಈ ಅಂಶಗಳೊಂದಿಗೆ ಇಲ್ಲಿನ ಕವಿತೆಗಳಲ್ಲಿ ಕಾಣುತ್ತಿರುವ ಮತ್ತೊಂದು ಹೊಸತನವೆಂದರೆ ಪ್ರಾದೇಶಿಕ ಭಾಷೆಯನ್ನು, ಬೇರೆಡೆ ಕೇಳದ ಕೆಲವು ನುಡಿಗುಟ್ಟಗಳನ್ನು ಯಾವ ಹಿಂಜರಿಕೆಯೂ ಇಲ್ಲದೆ ಈಗಾಗಲೇ ಸ್ವೀಕೃತಗೊಂಡಿರುವ ಭಾಷೆ-ಲಯದೊಂದಿಗೆ ಬೆರೆಸಿರುವುದು. ಕೂಳಿ ಬಂಕದಂಥ ಪದಗಳು ಹೀಗೆ ಇಲ್ಲಿ ಕಾಣುತ್ತವೆ. ಕವಿತೆ ಕಟ್ಟುವ ಸಿದ್ಧ ಮಾದರಿಗೆ ಹೊಸತನ ತುಂಬುವ ಯತ್ನ ಇಲ್ಲಿನ ಕಾಲೇಜು ಅವಧಿಯ ಕವಿತೆಗಳಲ್ಲಿವೆ. ಆಯಾಚಿತವಾಗಿ ಈ ಕವಿತೆಗಳು ಸರಳತೆಯನ್ನೂ, ತೊಡಕಿಲ್ಲದ ಲಯವನ್ನು ಒಳಗೊಂಡಿವೆ. ಇಲ್ಲಿರುವ ೧೯೭೩-೭೫ರ ಅವಧಿಯಲ್ಲಿನ ಕವಿತೆಗಳು ಈ ಮಾತಿಗೆ ಸಾಕ್ಷಿ. ಇಂದಿಗೂ ಇವು ತಮ್ಮ ಹೊಸತನ ಉಳಿಸಿಕೊಳ್ಳುವ ಫ್ರೆಷನೆಸ್ ಪಡೆದಿವೆ. ಉತ್ತಮ ಕವಿತೆಯ ಲಕ್ಷಣವೇ ಇದು. ಯಾವುದೇ ಕಾಲದ ಓದಿಗೂ ಇಂಥ ಕವಿತೆಗಳನ್ನು ತಮ್ಮೊಳಗಿನ ಸಂಕೀರ್ಣತೆಯನ್ನು ಬಿಟ್ಟುಕೊಳ್ಳುತ್ತಲೇ ಇರುತ್ತವೆ. ಈ ಆರಂಭಿಕ ಕವಿತೆಗಳಲ್ಲಿ ತಂದೆ-ತಾಯಿ ಕುಟುಂಬದ ಚಿತ್ರಗಳಿರುವಂತೆಯೇ ವ್ಯಕ್ತಿ ವಿಶಿಷ್ಟತೆಯನ್ನೂ ಹೊಮ್ಮಿಸಿಕೊಳ್ಳುವ ತುಡಿತವೂ ಇದೆ."

"ಮಗಾ ಮುಂಗಾರು ಬಂತು
ಕೆರೆ ತುಂಬೋದಿದೆ
ಕೂಳಿ ಸಿರಯಾಗಿದೆಯಾ ನೋಕ್ಕೋ
ಎಂಬ ತಂದೆಯ ಮಾತುಗಳಾಗಲೀ,
ಎಲ್ಲಿ ಹೋದರೂ
ನಿನ್ನ ಮಗನಾಗೇ ಬದುಕುತ್ತೇನೆ
ನನ್ನ ಪಾಡಿಗೆ ನನ್ನ ಬಿಡು"–

ಎಂದು ತಾಯಿಗೆ ಹೇಳುವ ಮಾತುಗಳಾಗಲೀ, ಒಂದು ಮನೆಯ ಮಗನೊಬ್ಬ ಬಾಲ್ಯದಿಂದ ಯೌವ್ವನಕ್ಕೆ ಅಡಿಯಿಡುತ್ತಿರುವ ಸಂದರ್ಭಕ್ಕೆ ಕನ್ನಡಿಯಾಗುವಂಥವು.

"ಜೋಳದ ತೆನೆಯಾಗಿ ಬಾಳೆಲೆಯ ಸುಳಿಯಾಗಿ
ಕೆರೆಯಂಗಣದ ತೆರೆ ಮೇಲೆ ಏರಿ ಬರುವ ಚೆಲುವನ"[೩]

ಎಂಬಲ್ಲಿ ಒಬ್ಬ ಪ್ರಿಯಕರನನ್ನು ನಲ್ಲೆಯೊಬ್ಬಳು ಗ್ರಾಮ ಬದುಕಿನ ಪ್ರತಿಮೆಗಳೊಂದಿಗೆ ಕಾಣುವ ಸುಂದರ ಚಿತ್ರಣವು ನಮ್ಮ ಮುಂದೆ ಇದೆ.

ಹೀಗೆ ಚಿಕ್ಕಣ್ಣನವರು ಇಲ್ಲಿ ಗ್ರಾಮೀಣ ಸಂವೇದನೆಯನ್ನು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ಜನಸಾಮಾನ್ಯರು ಮತ್ತು ಪರಿಸರದೊಂದಿಗೆ ಇರುವ ಅನ್ಯೋನ್ಯ ಸಂಬಂಧವನ್ನು ಕುರಿತು ರೈತರು, ಕೃಷಿ ಮತ್ತು ಮಳೆ ಇವುಗಳೊಂದಿಗೆ ಇರುವ ಒಡನಾಟ, ಸಂಬಂಧಗಳನ್ನು ಕುರಿತು ಚಿತ್ರಿಸಿದ್ದಾರೆ.

ಕೊನೆ ಟಿಪ್ಪಣಿ

೧. ಮೆಕ್ಕೆ ಒಕ್ಕಲು, ಕಾ.ತ. ಚಿಕ್ಕಣ್ಣ, ೨೦೧೦, ಗಾನಗಂಗಾ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ, ೦೬.

೨. ಅದೇ, ಪುಟ-೭೨-೭೩

೩. ನೀರೊಳಗಣ ಬೆಳಕು, (ಸಂ) ಹೆಚ್. ದಂಡಪ್ಪ, ೨೦೧೦, ಸಿರಿವರ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ ೩೯-೩೭.

ಅಧ್ಯಾಯ ೭

ಗ್ರಾಮೀಣ ಬದುಕಿನ ಸಮಕಾಲೀನ ವಾಸ್ತವಗಳು

ಅಧ್ಯಾಯ ೭

ಗ್ರಾಮೀಣ ಬದುಕಿನ ಸಮಕಾಲೀನ ವಾಸ್ತವಗಳು

ಇಂದು ನಮ್ಮ ದೇಶ, ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ದೇಶದ ಅಭಿವೃದ್ಧಿಗೆ ವಿಶ್ವದ ಅನೇಕ ದೇಶಗಳು, ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಕೋಟಿಗಟ್ಟಲೇ ಡಾಲರ್‌ಗಳಲ್ಲಿ ಹಣವನ್ನು ಸಾಲವಾಗಿ ನೀಡುತ್ತಿದೆ, ನೀಡಿದೆ. ೧೯೫೦ರ ನಂತರದಿಂದ ದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಲು, ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳನ್ನು ನಿರ್ಮಿಸಲು, ಕುಡಿಯುವ ನೀರು, ವಸತಿ, ರಸ್ತೆಗಳನ್ನು ನಿರ್ಮಿಸಲು, ಆರೋಗ್ಯ ಕಲ್ಪಿಸಿಕೊಡಲು ಇನ್ನೂ ಮುಂತಾದ ಕ್ಷೇತ್ರಗಳಲ್ಲಿನ ಅಭಿವೃದ್ಧಿಗಾಗಿ ಬಳಸಲಾಗಿದೆ. ಆದರೆ ಎಷ್ಟೋ ವಿದೇಶಿ ರಾಷ್ಟ್ರಗಳು, ವಿಶ್ವಸಂಸ್ಥೆ, ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಸಹಕಾರವಲ್ಲದೆ, ನಮ್ಮ ದೇಶದ ಮತ್ತು ರಾಜ್ಯ ಸರಕಾರಗಳ ಸಹಕಾರದಿಂದಲೂ ಗ್ರಾಮೀಣ ಪ್ರದೇಶದಲ್ಲಿನ ಮೂಲಭೂತವಾದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲಾಗಿಲ್ಲ. ಇಂದಿನ ಗ್ರಾಮೀಣ ಪ್ರದೇಶಗಳು ಹಲವಾರು ಸಮಸ್ಯೆಗಳ ಆಗರವಾಗಿದೆ. ಇಲ್ಲಿ ಶಿಕ್ಷಣ, ವಸತಿ, ಆಹಾರ, ಅಸಮಾನತೆ, ಶೋಷಣೆ, ದಲಿತರ ಮೇಲೆ ನಡೆಯುವ ದೌರ್ಜನ್ಯ, ಬಡ ಮಹಿಳೆಯರ ಮೇಲೆ ನಡೆಯುವ ಶೋಷಣೆ, ಅತ್ಯಾಚಾರ, ದೌರ್ಜನ್ಯ, ಹಿಂಸೆ, ಲೈಂಗಿಕ ಕಿರುಕುಳ, ಮೇಲ್‌ವರ್ಗದವರು ಕೆಳವರ್ಗದವರ ಮೇಲೆ ಮಾಡುವ ಶೋಷಣೆಗಳು ಇನ್ನೂ ಮುಂತಾದವರುಗಳನ್ನು ನಾವು ದಿನಂಪ್ರತಿ ಪತ್ರಿಕೆ, ಜಾಹೀರಾತು, ಟಿ.ವಿ.ಗಳಲ್ಲಿ ನೋಡುತ್ತೇವೆ. ಅಲ್ಲದೇ ಕೆಲವೊಂದು ಶೋಷಣೆಗಳು ನಮ್ಮ ಮುಂದೆ ನಡೆಯುತ್ತವೆ. ಇನ್ನೂ ಕೆಲವು ಶೋಷಣೆಗಳು ನಮ್ಮನ್ನೇ ಒಳಗೊಂಡಿರುತ್ತವೆ....!?

ಇಂದಿನ ಎಷ್ಟೋ ಗ್ರಾಮಗಳಲ್ಲಿ ಕುಡಿಯುವ (ಕುಡಿಯಲು ಯೋಗ್ಯವಾದ) ನೀರಿಲ್ಲ. ಇದ್ದರೂ ಅಲ್ಲಿ ಅದು (ಕುಡಿಯುವ ನೀರು) ಪ್ಲೋರೈಡ್ ಕಲುಷಿತವಾದದ್ದು. ಹಾಗೆಯೇ ಅಲ್ಲಿನ ಅನೇಕ ಮಕ್ಕಳು ಶಿಕ್ಷಣ ಕಲಿಯಲು ಶಾಲೆಗಳೇ ಇಲ್ಲ. ಶಿಕ್ಷಣ ಕಲಿಯಲು ಪಕ್ಕದ ಊರಿಗೆ ಅಂದರೆ ಶಾಲೆಗೆ ಸುಮಾರು ೨-೩-೪ ಕಿ.ಮೀ. ಗಳಷ್ಟು ನಡೆದುಕೊಂಡೇ ಹೋಗಬೇಕಾದ ಪರಿಸ್ಥಿತಿ ಇದೆ.

ಗ್ರಾಮೀಣ ಪ್ರದೇಶಗಳಲ್ಲಿನ ಶಾಲೆಗಳು ಬಹಳ ಹಿಂದಿನವು. ಇವುಗಳು ಇಂದು ಹಾಳಾಗಿಹೋಗಿವೆ. ಇಲ್ಲಿ ಮಕ್ಕಳು ಕುಳಿತು ಪಾಠ ಹೇಳಲು ಸರಿಯಾದ ಗಾಳಿ-ಬೆಳಕಿನ ವಾತಾಯನದ ವ್ಯವಸ್ಥೆಯಿಲ್ಲ. ಪಠ್ಯಪುಸ್ತಕಗಳ ಪೂರೈಕೆಗೆ ಸರ್ಕಾರದ ಸರಿಯಾದ ನೀತಿ-ನಿಯಮಗಳ ವ್ಯವಸ್ಥೆಯಿಲ್ಲ. ಸರ್ಕಾರದ ಇಂದಿನ ನೀತಿ-ನಿಯಮಗಳಿಂದಾಗಿ, ಅದಕ್ಷ್ಯ ಆಡಳಿತದಿಂದಾಗಿ ಇಂದು ಪಠ್ಯಪುಸ್ತಕಗಳು ಸರಿಯಾದ ಸಮಯಕ್ಕೆ ಹಳ್ಳಿಯ ಮಕ್ಕಳಿಗೆ ಸೇರುವುದಿಲ್ಲ. ಕೆಲವು ಗ್ರಾಮಗಳಲ್ಲಿ ಶಾಲೆಗಳಿಲ್ಲ, ಶಿಕ್ಷಕರಿಲ್ಲ. ಮಕ್ಕಳು ತಾವೇ ದಿನ ಶಾಲೆಗೆ ಹೋಗಿಬರುತ್ತಾ ಕಾಲ ಕಳೆಯುತ್ತಾರೆ. ಇನ್ನೂ ನಮ್ಮ ದೇಶದಲ್ಲಿ ಏಕೋಪಾಧ್ಯಾಯ ಶಾಲೆಗಳಿವೆ. ಇಲ್ಲಿ ಒಬ್ಬ ಶಿಕ್ಷಕ ೧ನೇ ರಿಂದ ೪ನೇ ತರಗತಿಗಳ ಮತ್ತು ಮೇಲಿನ ಶಿಕ್ಷಣಾಧಿಕಾರಿಗಳೊಂದಿಗೆ ಆ ಶಾಲೆಯ ಮುಖ್ಯಗುರುಗಳಾಗಿದ್ದು, ಆಡಳಿತ, ಪತ್ರವ್ಯವಹಾರಗಳನ್ನು ಮಾಡಬೇಕು. ಇವರ ಆಡಳಿತ ಸೇವೆಗೆ ತಿಂಗಳಿನ ಕಾಲು ದಿನಗಳು ಕಳೆದರೆ, ಇನ್ನೂ ವರ್ಷದ ಶೈಕ್ಷಣಿಕ ಅವಧಿಯಲ್ಲಿ ಸರಕಾರ ಡಿ.ಎಸ್.ಇ.ಆರ್., ಎನ್.ಸಿ.ಇ.ಆರ್.ಟಿ.ಗಳು ಹಾಕಿಕೊಂಡ ಶೈಕ್ಷಣಿಕ ಗುರಿ-ಉದ್ದೇಶಗಳು ಈಡೇರುವುದಾದರೂ ಹೇಗೆ? ಇನ್ನೂ ಆ ಮಕ್ಕಳ ಗತಿ ಬೆಳವಣಿಗೆ, ವಿಕಾಸಗಳು ಅಷ್ಟೇ. ಹೀಗಾಗಿಯೇ ನಮ್ಮ ಶಿಕ್ಷಣ ವ್ಯವಸ್ಥೆ ಗ್ರಾಮೀಣ ಭಾಗದಲ್ಲಿ ಪರಿಣಾಮಕಾರಿಯಾಗಿಲ್ಲ. ಅದು ತನ್ನ ಗುಣಾತ್ಮಕತೆಯನ್ನು ಕಳೆದುಕೊಂಡಿದೆ. ಶೈಕ್ಷಣಿಕ ವ್ಯವಸ್ಥೆಯ ಗುಣಾತ್ಮಕತೆಯನ್ನು ಕಳೆದುಕೊಳ್ಳಲು ಅಧಿಕಾರಿಗಳು, ಸರಿಯಾಗಿ ಕರ್ತವ್ಯ ನಿರ್ವಹಿಸದ ಬೋಧಕರ ವರ್ಗ, ಮಕ್ಕಳು, ಪಾಲಕರ ವರ್ಗ, ಸರಕಾರದ ನಿಷ್ಪ್ರಯೋಜಿತ ನೀತಿಗಳು, ನಿಯಮಗಳು, ಯೋಜನೆಗಳು, ಶಾಲೆಯ ಆಡಳಿತದಲ್ಲಿ ರಾಜಕೀಯ ಪ್ರವೇಶ ಹೀಗೆ ಮುಂತಾದವುಗಳು ಕಾರಣಗಳಾಗಿವೆ. ಇವುಗಳ ಮಧ್ಯೆ ಇಂದು ಅನೇಕ ಕಡೆ ಶಾಲೆಗಳಿಲ್ಲದಿರುವುದರಿಂದ ಮಕ್ಕಳಿಗೆ ಶಿಕ್ಷಕರು ಪಾಠವನ್ನು ಮರದ ಕೆಳಗೆ, ದೇವಾಲಯಗಳಲ್ಲಿ ಹೇಳುತ್ತಿದ್ದಾರೆ.

ಇಂದು ಗ್ರಾಮೀಣ ಪ್ರದೇಶದಲ್ಲಿ ಅನೇಕ ಜನರು ಇವತ್ತು ಹಸಿವು, ವಸತಿ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಇವರಿಗೆ ಒಂದು ದಿನಕ್ಕೆ ಊಟ ಮಾಡಲು ಒಂದೊತ್ತು ಊಟವೂ ಇಲ್ಲ. ಇವರು ಮಲಗಲು ಹಳ್ಳಿಯ ಗುಡಿಗಳು, ಪಂಚಾಯಿತಿ ಕಟ್ಟಡಗಳು, ಶಾಲೆಗಳಲ್ಲಿ, ಬಸ್ ನಿಲ್ದಾಣಗಳು, ರಸ್ತೆಯ ಮಗ್ಗಲುಗಳಲ್ಲಿ, ಮರದ ಕೆಳಗೆ ವಾಸಿಸುತ್ತಿದ್ದಾರೆ. ಸರಕಾರವು ಕಡು ಬಡವರಿಗೆ ಪೂರೈಸುವ ರಿಯಾಯ್ತಿ ದರದ ಆಹಾರ ಧಾನ್ಯ ಅಕ್ಕಿ, ಬೇಳೆ, ಗೋಧಿ, ಸಕ್ಕರೆ, ಸೀಮೆಎಣ್ಣೆ, ಇವುಗಳು ಬಡವರಿಗೆ ದೊರಕುತ್ತಿಲ್ಲ. ಈ ನ್ಯಾಯಬೆಲೆ ಅಂಗಡಿಗಳಲ್ಲಿ ಅವ್ಯವಹಾರ ನಡೆಯುವುದಲ್ಲದೆ, ಊರಿನ ಮೇಲ್ವರ್ಗದ ಜನರು ಬಡವರನ್ನು ಶೋಷಣೆ ಮಾಡುತ್ತಿದ್ದಾರೆ.

ಎಷ್ಟೋ ಗ್ರಾಮ ಪ್ರದೇಶಗಳಲ್ಲಿ ದಲಿತರು, ಅಸ್ಪೃಶ್ಯರ ಮಕ್ಕಳು ಇಂದು ತಮ್ಮ ತಂದೆಯು ಮಾಡಿದ ಸಾಲ ತೀರಿಸಲು ಹೋಟೆಲ್‌ಗಳಲ್ಲಿ, ಗೌಡ್ರ ಮನೆಗಳಲ್ಲಿ, ಹೊಲಗಳಲ್ಲಿ ಇನ್ನೂ ಅನೇಕ ಕಡೆ ಜೀತದಾಳುಗಳಾಗಿ ಕೆಲಸ ಮಾಡುತ್ತಿದ್ದಾರೆ. ಇಂದು ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ದಲಿತರನ್ನು, ಅಸ್ಪೃಶ್ಯರನ್ನು ದೇವಾಲಯಗಳ ಒಳಗಡೆ ಬರುವಂತಿಲ್ಲ ಎಂದು ಪ್ರವೇಶವನ್ನು ಊರಿನ ಮೇಲುವರ್ಗದವರು ನಿಷೇಧಿಸಿದ್ದಾರೆ. ಇಂತಹ ಕಠೋರವಾದ ಕ್ರಮಗಳು ನಿಯಮಗಳಲ್ಲದೇ ಇವರು ಸಾರ್ವಜನಿಕರು ಉಪಯೋಗಿಸುವ ಕೆರೆ ನೀರು, ಕೊಳವೆ ನೀರನ್ನು ಉಪಯೋಗಿಸುವಂತಿಲ್ಲ, ಮುಟ್ಟುವಂತಿಲ್ಲ ಎಂಬ ನಿಯಮಗಳನ್ನು ಹಾಕಿಕೊಂಡಿರುವ ಮೇಲ್ವರ್ಗದವರು, ಅವರನ್ನು ಅನೇಕ ರೀತಿಯಿಂದ, ವಿಭಿನ್ನ ಮುಖಗಳಿಂದ ಶೋಷಣೆ ಮಾಡಿದ್ದಾರೆ, ಇನ್ನೂ ಮಾಡುತ್ತಿದ್ದಾರೆ. ಮೇಲ್ವ್‌ರ್ಗದವರು ದಲಿತರ, ಅಸ್ಪೃಶ್ಯರ, ಕೆಳವರ್ಗದ ಹೆಣ್ಣುಮಕ್ಕಳನ್ನು ಗುಲಾಮರಂತೆ ಉಪಯೋಗಿಸುತ್ತಾ ಲೈಂಗಿಕವಾಗಿ ಬಳಸುತ್ತಾ, ಶೋಷಿಸುತ್ತಾ, ಇರುವುದನ್ನು ಅವರ ಮೇಲೆ ಅತ್ಯಾಚಾರಯೆಸಗುವುದನ್ನು ಇಂದು ಜಾಹೀರಾತುಗಳಲ್ಲಿ ದಿನಂಪ್ರತಿ ನಾವು ನೋಡುತ್ತೇವೆ.

ಇಂದು ಗ್ರಾಮಗಳ ಸ್ಥಿತಿ ಹೇಗಿದೆಯೆಂದರೆ ಹಳ್ಳಿಯಿಂದ ಹಳ್ಳಿಗೆ ತೆರಳಲು ರಸ್ತೆಗಳು ಸುರಕ್ಷಿತವಾಗಿಲ್ಲ. ಅನೇಕ ಗ್ರಾಮಗಳಿಗೆ ಬೀದಿ ದೀಪಗಳೇ ಇಲ್ಲ. ಇನ್ನೂ ಕೆಲವು ಗ್ರಾಮಗಳು ವಿದ್ಯುತ್‌ನ್ನೇ ನೋಡಿಲ್ಲದ ಎಷ್ಟೋ ಕುಗ್ರಾಮಗಳು ನಮ್ಮ ದೇಶದಲ್ಲಿ ಇವೆ.

ಇಂದು ಕೈಗಾರೀಕೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳಿಂದ ಅನೇಕ ಹಳ್ಳಿಯ ಜನರು, ರೈತರು ತಮ್ಮ ಭೂಮಿಗಳನ್ನು, ಮನೆಗಳನ್ನು ಕಳೆದುಕೊಂಡು ನಿರ್ಗತಿಕರಾಗಿ, ವಸತಿ, ಊಟ, ನೀರು ಮೂಲಭೂತ ಸೌಕರ್ಯಗಳಿಗೆ ಪರಿತಪಿಸುವ ಘೋರ ಕೂಗುಗಳನ್ನು ಇಂದು ನಾವು ನೋಡುತ್ತಿದ್ದೇವೆ.

ಇಂದು ವಿಮಾನ ನಿಲ್ದಾಣ, ಉದ್ದಿಮೆಗಳು ಸ್ಥಾಪನೆಗೆಂದು ಖರೀಧಿಸುವ ಭೂಮಿಯು ಫಲವತ್ತಾದ್ದು. ಇದನ್ನು ಕಳೆದುಕೊಂಡ ರೈತರ ಜೀವನಾಂಶಕ್ಕೆ ಆಧಾರವಿಲ್ಲದೆ ಅವರು ಕಡುಬಡವರಾಗಿ ಮೂಲಭೂತ ಸಮಸ್ಯೆಗಳಲ್ಲದೇ ಇನ್ನೂ ಅನೇಕ ಸಮಸ್ಯೆಗಳಿಗೆ, ಶೋಷಣೆಗಳಿಗೆ ಒಳಗಾಗಿ ಜೀವನ ಸಾಗಿಸುತ್ತಿದ್ದಾರೆ.

ಹೀಗೆ ನಾವು ವಿಶ್ವದ ಮುಂದುವರಿದ ರಾಷ್ಟ್ರಗಳಲ್ಲಿ ಸೇರುತ್ತೀವಿ, ಮುಂಚೂಣಿಯಲ್ಲಿ ಸಾಗುತ್ತೀವಿ ಎಂದು ಸಭೆ ಸಮಾರಂಭಗಳಲ್ಲಿ ಹೇಳುತ್ತಿರುವ ನಮ್ಮ ಪ್ರಜಾಪ್ರತಿ ನಿಧಿಗಳು, ಅಧಿಕಾರಿಗಳು, ದೇಶದ ಕೇಂದ್ರ ಭಾಗದ ಆಡಳಿತ ವರ್ಗದವರು ಒಮ್ಮೆಯಾದರೂ ಗ್ರಾಮೀಣ ಪ್ರದೇಶಗಳಿಗೆ ಎಲ್ಲ ಹಳ್ಳಿ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಸಮಸ್ಯೆಗಳನ್ನು ಪ್ರತ್ಯಕ್ಷವಾಗಿ ಕಂಡು, ಅವುಗಳ ಪರಿಹಾರದತ್ತ ಮನಸ್ಸು ನೀಡುವವರ ಅತ್ಯಮೂಲ್ಯವಾದ ಪರಿಣತ, ದಕ್ಷ, ಶಿಕ್ಷಣವಂತ, ಸ್ವಾರ್ಥರಹಿತ, ಪ್ರಾಮಾಣಿಕ ಜನ, ವ್ಯಕ್ತಿಗಳು, ಪ್ರತಿನಿಧಿಗಳ, ಅಧಿಕಾರಿಗಳ, ಶಿಕ್ಷಕರ, ವೈದ್ಯರ ಇನ್ನೂ ಮುಂತಾದವರುಗಳ ಕೊರತೆಯನ್ನು ನಾವು ಇಂದು ನೋಡುತ್ತಿರುವುದು ಒಂದು ದೊಡ್ಡ ಘೋರ ವಿಷಾದದ ಸಂಗತಿಯಾಗಿದೆ. ಹಾಗೂ ಇದು ಇಂದಿನ ಗ್ರಾಮೀಣ ಬದುಕಿನ ಸಮಕಾಲೀನ ವಾಸ್ತವವಾಗಿದೆ.

ಇಷ್ಟರ ಹೊರತಾಗಿಯೂ, ಗ್ರಾಮೀಣ ಸಮಾಜದಲ್ಲಿ ಇಂದಿಗೂ ಪಾರಂಪರಿಕವಾಗಿ ನಡೆದು ಬಂದಿರುವ ಹಲವು ಬಗೆಯ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಮಾನವೀಯ ನೆಲೆಗಟ್ಟಿನ ಎಷ್ಟೋ ಸಂಗತಿಗಳು ಅಲ್ಪಸ್ವಲ್ಪವಾದರೂ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ಕೊನೆಟಿಪ್ಪಣಿಗಳು

೧. ಮುಂಜಾವು, ಕಾ.ತ.ಚಿ, ೧೯೮೯, ಕೊಪ್ಪಲು ಪ್ರಕಾಶನ, ಬೆಂಗಳೂರು.

೨. ಮನಸು-ಮುಗಿಲು, ಕಾ.ತ.ಚಿ, ೧೯೯೩, ಕೊಪ್ಪಲು ಪ್ರಕಾಶನ, ಬೆಂಗಳೂರು.

೩. ವಾಸನಾಮಯ ಬದುಕಿನ ಆಚೆ-ಈಚೆ, ಕಾ.ತ.ಚಿ, ೧೯೮೮, ನಲ್ಮೆ ಪ್ರಕಾಶನ, ಬೆಂಗಳೂರು.

೪. ಒಡಲುರಿ, ಕಾ.ತ.ಚಿ, ೧೯೮೪, ನಲ್ಮೆ ಪ್ರಕಾಶನ, ಬೆಂಗಳೂರು.

೫. ಕಂಡೇರಿ, ಕಾ.ತ.ಚಿ, ೨೦೦೪, ಸುಂದರ ಪ್ರಕಾಶನ, ಬೆಂಗಳೂರು.

೬. ವಧೂಟಿ, ಕಾ.ತ.ಚಿ, ೨೦೦೪, ಕೊಪ್ಪಲು ಪ್ರಕಾಶನ, ಬೆಂಗಳೂರು, ೨೦೦೪.

೭. ದಂಡೆ, ಕಾ.ತ.ಚಿ, ದಂಡೆ, ಕಥನ ಪ್ರಕಾಶನ, ಬೆಂಗಳೂರು, ೧೯೯೯.

೮. ಗೊಂಚಲು, ಕಾ.ತ.ಚಿ, ಸುಂದರ ಪ್ರಕಾಶನ, ಬೆಂಗಳೂರು.

೯. ಮೆಕ್ಕೆ ಒಕ್ಕಲು, ಕಾ.ತ.ಚಿಕ್ಕಣ್ಣ, ೨೦೧೦, ಗಾನಗಂಗಾ ಪ್ರಕಾಶನ, ಬೆಂಗಳೂರು.

ಅಧ್ಯಾಯ ೮

ಸಮಾರೋಪ

ಅಧ್ಯಾಯ ೮
ಸಮಾರೋಪ

ಪ್ರಸ್ತುತ 'ಕಾ.ತ.ಚಿಕ್ಕಣ್ಣನವರ ಸಾಹಿತ್ಯದಲ್ಲಿ ಗ್ರಾಮೀಣ ಸಂವೇದನೆ' ಎಂಬ ಪ್ರಬಂಧವು ಸಂಪೂರ್ಣವಾಗಿ ಗ್ರಾಮೀಣ ಸೊಗಡುಳ್ಳ ಗ್ರಾಮೀಣ ಸಂವೇದನೆಯ ಗ್ರಾಮಗಳ ಮತ್ತು ಗ್ರಾಮ ಬದುಕುಗಳ ನೆಲೆಯಲ್ಲಿಯೇ ವಿವರಿಸಲ್ಪಟ್ಟಿರುವಂತದ್ದು. ಸಾಹಿತ್ಯವೇ ಚಿಕ್ಕಣ್ಣನವರ ಒಟ್ಟು ಮೂಲತಃ ಅಂತಹ ಗುಣವನ್ನು ಹೊಂದಿವೆ. ಇವರ 'ಕಂಡೇರಿ'ಯದ ಹೆಚ್ಚಿನ ಕಥೆಗಳು ಯಾವುದೇ ಪೂರ್ವಾಗ್ರಹವಿಲ್ಲದೆ ಸಮಾಜದ ವಾಸ್ತವದ ಶೋಧನೆಯ ಬಗ್ಗೆ ತೀವ್ರ ತುಡಿತ ಮತ್ತು ವಿಶ್ಲೇಷಣಾತ್ಮಕವಾದ ವೈಜ್ಞಾನಿಕ ದರ್ಶನ ಮತ್ತು ಇಂದ್ರೀಯ ಅನುಭವಗಳನ್ನು ಮೀರಿದ ಮಾನವತೆಯ ಸತ್ಯ ಸೌಂದರ್ಯಗಳ ತತ್ವ ದರ್ಶನದ ಪ್ರಯತ್ನವಾಗಿವೆ.

ಬೇರೆ ಬೇರೆ ಸಂದರ್ಭಗಳಲ್ಲಿ ರಚನೆಗೊಂಡ ಇವರ ಕಥೆಗಳಲ್ಲಿ ಸಾಮಾಜಿಕ ವಿಷಮತೆ, ಅಸಮಾನತೆ, ಶೋಷಣೆ, ಹೆಣ್ಣಿನ ದೌರ್ಬಲ್ಯ, ಹಿಂಸೆ, ಬಡವರ ಶೋಷಣೆಗಳು, ಶೋಷಣೆಯ ವಿವಿಧ ಮುಖವುಳ್ಳ ಶ್ರೀಮಂತರ ವರ್ಗಗಳು, ಅನ್ಯಾಯ, ಅಕ್ರಮ ಸಂಬಂಧಗಳು, ಅನೈತಿಕತೆಗಳು, ಮೂಢನಂಬಿಕೆಗಳು, ಮಾಟ–ಮಂತ್ರಗಳು ಇನ್ನೂ ಮುಂತಾದವುಗಳನ್ನು ಕುರಿತು ಹೇಳಲಾಗಿದೆ.

ಚಿಕ್ಕಣ್ಣನವರ ಕಥೆಗಳು ಸೂಕ್ಷ್ಮ ಸಂವೇದನೆಗಳಿಂದ ಕೂಡಿರುವಂತಹವು. ಹಾಗಾಗಿ ಗ್ರಾಮೀಣ ಸಂವೇದನೆ, ಗ್ರಾಮೀಣ ಬದುಕಿನ ಅನುಭವಗಳು ಮತ್ತು ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ನಾನಾ ವಿವಿಧ ಭಿನ್ನ ಭಿನ್ನ ಮನೋಭಾವದ ಪಾತ್ರ ಸ್ತರಗಳು ಕುತೂಹಲಕರವೂ ಅಚ್ಚರಿದಾಯಕವೂ ಆಗಿಬಿಡುತ್ತವೆ. ಇವು ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಸಾಕ್ಷಿ ಪ್ರಜ್ಞೆಗಳೂ

ಆಗಿಬಿಡುತ್ತವೆ ಮಾತ್ರವಲ್ಲ. ವಿಡಂಬಿಸುವ, ಪ್ರತಿಭಟಿಸುವ, ಬದಲಾಗಬೇಕಾದ ಗೊತ್ತುಗುರಿಯನ್ನು ನಿರ್ದೇಶಿಸುವ ಅಮೂಲ್ಯವಾದ ಕೆಲಸವನ್ನು ಮಾಡುತ್ತಿರುತ್ತವೆ. ಇಂತಹ ಅನೇಕ ಅಂಶಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಇಲ್ಲಿನ ಕಥೆಗಳನ್ನು ಕುರಿತು ಹೇಳುವುದಾದರೆ 'ಕಥೆಯೆಂಬುದನ್ನು ಮನುಷ್ಯನ ಬದುಕನ್ನು ನೋಡಲಿಕ್ಕಿರುವ ಕಿಟಕಿ' ಎನ್ನುವಂತೆ ನಿರೂಪಿಸಲಾಗಿದೆ. ಇದಕ್ಕೆ ಕಾರಣ ಮನುಷ್ಯರ ಮೇಲಿನ ಆಸಕ್ತಿಯೇ ಅವರ ಕಥನದ ದ್ರವ್ಯ. ಹಾಗಾಗಿ ಇಲ್ಲಿನ ಕಥೆಗಳು ಹಳ್ಳಿ ಪರಿಸರದಿಂದ ನಗರಕ್ಕೆ ನಗರದ ಬೇಗೆ ಹೊತ್ತು ಹಳ್ಳಿಗೆ ಸಂಚರಿಸುತ್ತವೆ. ಇನ್ನೂ ಕೆಲವು ಕಥೆಗಳು ಹಳೆ ಮೌಲ್ಯಗಳನ್ನು ಪ್ರಶ್ನಿಸುತ್ತಾ ಶ್ರೇಷ್ಠತೆಯ ಹೆಸರಲ್ಲಿ ಇಡೀ ಮನುಷ್ಯ ಜನಾಂಗವನ್ನೇ ಅಧೀನವಾಗಿಟ್ಟುಕೊಂಡ ಸ್ಥಿತಿಯನ್ನು ಪ್ರಶ್ನಿಸುತ್ತಾ ಹೊಸ ಬದುಕಿನ ಕಡೆ ಕ್ರಿಯೆಯ ಮೂಲಕ ಪ್ರಶ್ನಿಸುತ್ತದೆ.

ಇಲ್ಲಿನ ಕಥೆಗಳು ಕೇವಲ ಒಬ್ಬ ವ್ಯಕ್ತಿಯ, ಒಂದು ಸಮಾಜದ, ಒಂದು ತತ್ವದ ಜಿಜ್ಞಾಸೆಯಾಗಿರದೆ ಎಲ್ಲವನ್ನೂ ಒಳಗೊಂಡ ತನ್ನನ್ನು ತಾನೇ ಕಂಡುಕೊಳ್ಳದ ಆ ಸಲುವಾಗಿ ಜೀವಂತ ಕ್ಷಣದಲ್ಲಿ ಘರ್ಷಿಸಿಕೊಳ್ಳುವ ಕ್ರಿಯೆಯಾಗಿದೆ. ಅಂದರೆ ಅನೇಕ ವ್ಯಕ್ತಿಗಳು ಒಟ್ಟು ಬದುಕಿನ ಸಂದರ್ಭದಲ್ಲಿ ಜೀವನಾನುಭವಗಳನ್ನು ಪರಿಭಾವಿಸುವ ಆ ಮೂಲಕ ಒಂದು ಗಟ್ಟಿಯಾದ ಜೀವನ ದೃಷ್ಟಿಯನ್ನು ಧ್ವನಿಸುವಂತಹದ್ದು. ಹಾಗಾಗಿ ಇಲ್ಲಿನ ಕಥೆಗಳಲ್ಲಿ ಒಟ್ಟಾರೆ ಭಾವನಾತ್ಮಕ ಒತ್ತಡ, ಬೌದ್ಧಿಕ ಅರಿವು ಬದುಕಿನ ನಿಷ್ಠುರ ವಾಸ್ತವವನ್ನು ಮೀರುವ ಕನಸುಗಾರಿಕೆ ಎಲ್ಲವನ್ನೂ ಏಕಕಾಲದಲ್ಲಿ ಎದುರಾಗುವಿಕೆಯನ್ನೂ ಕಾಣಬಹುದು.

ಪ್ರಸ್ತುತ ಚರ್ಚಿತವಾದ ಕಥೆಗಳು ಕೇವಲ ಮನೋರಂಜನೆಯಲ್ಲದೆ, ಕೇವಲ ಸಾಮಾಜಿಕ ಜಾಗೃತಿಯಾಗಲೀ ಅಲ್ಲದೇ ಆವೊಂದು ಬದುಕಿನ ಸತ್ಯದ ಅನಾವರಣವಾಗಿವೆ. ಇಡೀ ಕಥೆಗಳನ್ನು ಗಮನಿಸಿದರೆ ಇದೊಂದು ಜೀವನದ ಸಂಘರ್ಷದ ಕಥನವೇ ಆಗಿವೆ. ಅದರಲ್ಲಿ ಕಂಡೇರಿ ಕಥೆಗಳಲ್ಲಿ ಬರುವ ಗ್ರಾಮೀಣ ಸೊಗಡುಳ್ಳ, ಗ್ರಾಮೀಣ ಸಂವೇದನೆ, ಗ್ರಾಮಗಳು, ಗ್ರಾಮೀಣ ಬದುಕು, ಸ್ತ್ರೀ ಸಂವೇದನೆಗಳು, ಆ ಪಾತ್ರಗಳದ್ದೇ ಅಲ್ಲ. ಅದು ಪ್ರತಿಯೊಬ್ಬ ಪುರುಷ ಹಾಗೂ ಹೆಣ್ಣಿನ ಸಂವೇದನೆಯೂ ಹೌದು.

ಇವರ ಕಥೆಗಳಲ್ಲಿ ವ್ಯಕ್ತಿ ಮತ್ತು ಪರಿಸರ ಇವುಗಳ ನಡುವಿನ ಸಂಬಂಧ ಮೇಲಿಂದ ಮೇಲೆ ಬೇರೆ ಬೇರೆ ಕಥೆಗಳಲ್ಲಿ ಬರುವುದರಿಂದ, ನಮಗೆ ಗೊತ್ತಿರುವ ಜನ ಮತ್ತು ಆವರಣದ

ಕಥೆ ಎಂಬಷ್ಟು ಆತ್ಮೀಯತೆ ಬೆಳೆಯುತ್ತಾ ಹೋಗುತ್ತದೆ. ಇಲ್ಲಿನ ಕಥೆಗಳು ಕಾಮ, ಪ್ರೇಮ ಸಂಬಂಧಿಯಾದ ನೀತಿ–ಅನೀತಿಗಳನ್ನು ವ್ಯಾಖ್ಯಾನಿಸುವುದಕ್ಕೆ ಪೋಷಕ ದ್ರವ್ಯವಾಗಿ ಜೀವನೋತ್ಸಾಹದ ಸಂಕೇತಗಳಾಗಿಯೂ ಬರುತ್ತವೆ. ಹಾಗೂ ಇಲ್ಲಿನ ಸ್ತ್ರೀ ಸಮೂಹ ಎಷ್ಟರ ಮಟ್ಟಿಗೆ ವಾಸ್ತವ ಜೀವನಾನುಭವದ ಆಧಾರದ ಮೇಲೆ ನಿರ್ಮಿತವಾಗಿದೆ ಎಂಬುದರ ಅರಿವಾಗುತ್ತದೆ. ಅಂದರೆ ಬೈಗುಳಗಳ ಸಮೇತ ಚಿತ್ರಿತವಾಗಿರುವುದನ್ನು ಕಾಣಬಹುದು.

ಚಿಕ್ಕಣ್ಣನವರು ಗ್ರಾಮೀಣ ಸಂವೇದನೆಯುಳ್ಳ ಲೇಖಕ ಎಂಬುದು ಒಂದು ರೀತಿಯಲ್ಲಿ ಸರಿಯೇ. ಆದರೂ ಅವರ ಒಟ್ಟು ದೃಷ್ಟಿ ಆಸ್ಮಿತೆಯ ಕಡೆಗೆ. ಮಿಕ್ಕ ಕಥೆಗಾರರಂತೆ ಶೋಷಣೆಯೇ ಪ್ರಧಾನವಾಗಿರುವುದಾಗಲೀ ಅಥವಾ ಹಳ್ಳಿಯ ಚೆಲುವಿಕೆಯೇ ಮೆರೆಯುವುದಾಗಲೀ ಅವರಿಗೆ ಸ್ವಲ್ಪ ಪ್ರಮಾಣದಲ್ಲಿ ಬೇಕಾಗುತ್ತದೆ. ಆದರೆ ಅವರ ನಿಜವಾದ ಆಸಕ್ತಿ ಕಥೆಗಳ ಮುಖ್ಯ ಉದ್ದೇಶ ಇರುವುದು ವ್ಯಕ್ತಿ ಶೋಧದ ನೆಲೆಯಲ್ಲಿಯೇ. ಇವು ಮತ್ತೆ ಎರಡು ಅಂಗಗಳಲ್ಲಿ ಹುಟ್ಟುತ್ತವೆ. ಒಂದು ಹಳ್ಳಿಯ ಪರಿಸರದಲ್ಲಿ, ಇನ್ನೊಂದು ನಗರದ ಪರಿಸರದಲ್ಲಿ ಶೋಷಣೆಯ ಚಿತ್ರಣವನ್ನು ಅಚ್ಚುಕಟ್ಟಾಗಿ ಕೊಡುವುದಕ್ಕಿಂತಲೂ ಅವರಿಗೆ ವ್ಯಕ್ತಿ ಕೇಂದ್ರದಲ್ಲಿ ನಿಂತು ವ್ಯವಸ್ಥೆಯನ್ನು ಅವಲೋಕಿಸುವುದು ಕಷ್ಟದ ಕೆಲಸ.

ಪ್ರಸ್ತುತ ಪ್ರಬಂಧವು ಪ್ರಮುಖವಾಗಿ ಗ್ರಾಮೀಣ ಸಂವೇದನೆಯ ಭಿನ್ನ ಭಿನ್ನ ಪರಿಕರಗಳನ್ನು, ವಿಭಿನ್ನ ವ್ಯಕ್ತಿಗಳನ್ನು, ಜೀವನದ ಒಳನೋಟಗಳನ್ನು ನೀಡುವಲ್ಲಿ ಸಹಕಾರಿಯಾಗಬಹುದು. ಜೊತೆಗೆ ಕಥೆಗಳಲ್ಲಿ ಬರುವ ಗ್ರಾಂಥಿಕ ಭಾಷೆ, ಆಡುಭಾಷೆ, ಸಾಮಾಜಿಕ ಕೆಳವರ್ಗಗಳು ಉಪಯೋಗಿಸುವ ಗ್ರಾಮ್ಯ ಭಾಷೆ, ಪ್ರಾದೇಶಿಕ ಭಾಷಾ ಪ್ರಬೇಧಗಳು ಕಥೆಗಳ ಒಡಲಿಗೆ ಜೀವ ತುಂಬುವ ಕೆಲಸ ಮಾಡುತ್ತವೆ. ಈ ಮೂಲಕವಾಗಿ ಅದು ಗ್ರಾಮೀಣ ಸೊಗಡಿನಲ್ಲಿ ವ್ಯಕ್ತಿ ಮತ್ತು ಸಮಾಜಕ್ಕೆ ಸಂಬಂಧಿಸಿದಂತೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಎಲ್ಲ ಬಗೆಯ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಭಾಷೆಯ ಸಂವಿಧಾನದ ನೆಲೆಯಲ್ಲಾಗುವ ಪ್ರತಿಭಟನೆಯಾಗಿದೆ. ಈ ಮೂಲಕವಾಗಿ ಪ್ರಸ್ತುತ ಪ್ರಬಂಧವು ಗ್ರಾಮೀಣ ಸಂವೇದನೆಯ ವಾಸ್ತವ ಗ್ರಾಮ ಬದುಕಿನ ಯಥಾವತ್ ಚಿತ್ರಣವಾಗಿದೆ.

ಇವರು ಗ್ರಾಮೀಣ ಸ್ತ್ರೀಯರ ಬದುಕನ್ನು ಕುರಿತು ಗಂಭೀರ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಗಂಭೀರ ಪರಿಸ್ಥಿತಿಯ ಒತ್ತಡ, ಕರಾಳವಾದಂತೆ ಸ್ವತಂತ್ರ ಮನೋಧರ್ಮಕ್ಕೆ ಒದಗುವುದು

ಇಂತಹ ತಳಮಳ, ನಿರಾಶೆಗಳ ನೆಲೆಯಿಂದಲೇ ಅನೇಕ ಸ್ತ್ರೀಪಾತ್ರಗಳು ಬಳಲುತ್ತವಾದರೂ ಅವಶ್ಯಕತೆ ಬಿದ್ದಾಗ ಸಿಡಿಯುವ ತಮಗೆ ತಾವೇ ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಜೀವನ ಪ್ರೀತಿಯ ಕಡೆಗೆ ಸಾಗುವ ಪಾತ್ರಗಳೇ ಹೆಚ್ಚು.

ಇನ್ನು ಚಿಕ್ಕಣ್ಣನವರು ತಮ್ಮ ಕಥೆಗಳನ್ನು ಚೇತೋಹಾರಿಯಾದ ಶೈಲಿಯಲ್ಲಿ ಕಟ್ಟಿದ್ದಾರೆ. ಅವರು ಕಥೆಯನ್ನು ಕಟ್ಟಿರುವ ಶೈಲಿ, ನಿರೂಪಿಸುವ ನಿರೂಪಣೆ ಜೀವಂತ ಪಾತ್ರ ನಿರ್ಮಾಣ ಕೌಶಲ್ಯ, ಗ್ರಾಮೀಣ ಬದುಕು, ನೆಲದ ಸಂಸ್ಕೃತಿಯ ಶ್ರೇಷ್ಠತೆಯನ್ನು ಸಹಜವಾಗಿ ಮನಗಾಣಿಸುವಿಕೆ ಮುಂತಾದವುಗಳು ಹೇಳಿಮಾಡಿಸಿದಂತಿವೆ. ಇಲ್ಲಿನ ಭಾಷೆಯ ಸೊಗಸು ನಿಬ್ಬೆರಗಾಗಿಸುವಂತಹದ್ದಾಗಿದೆ. ಗ್ರಾಂಥಿಕ ಭಾಷೆ, ಆಡುಭಾಷೆ, ಕೆಳವರ್ಗದವರ ಭಾಷೆ ಮುಂತಾದವು. ನಿರೂಪಣಾ ಶೈಲಿಯಲ್ಲಿ ಕಥೆಗಳ ಒಡಲಿಗೆ ಜೀವ ತುಂಬುವ ಕೆಲಸವನ್ನು ಮಾಡುತ್ತವೆ. ಭಾಷೆಯ ಬಳಕೆಯೂ ಸಹ ಬಂಡಾಯದ ನೆಲೆಯೇ ಆಗಿದೆ. ವ್ಯಕ್ತಿ ಮತ್ತು ಸಮಾಜಕ್ಕೆ ಸಂಬಂಧಿಸಿದಂತೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಎಲ್ಲ ಬಗೆಯ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಭಾಷೆಯ ಸಂವಿಧಾನದ ನೆಲೆಯಲ್ಲಾಗುವ ಪ್ರತಿಭಟನೆಯೂ ಸಹ ಈ ಪ್ರಬಂಧದ ಪರಿಣಾಮಗಳಲ್ಲಿ ಒಂದು. ಇಲ್ಲಿ ಚಿಕ್ಕಣ್ಣನವರ ಅನೇಕ ಕಥೆಗಳಲ್ಲಿನ ಅತ್ಯಂತ ವೈಯಕ್ತಿಕವಾದ ಅನುಭವಗಳೂ ಕೂಡ ಸಾಮಾನ್ಯೀಕರಣಗೊಂಡು ಒಟ್ಟು ಮನುಷ್ಯ ಸ್ವಭಾವದ ಶೋಧನೆಯ ಸಾಧನೆಯಾಗುವುದು ವಿಶೇಷತೆ.

ಗ್ರಾಮೀಣ ಜನರ ಬಾಳುವೆಯನ್ನು ಬೇರೆಯವರಿಂದ ಕೇಳಿ ಕಟ್ಟಿಕೊಡುವುದಕ್ಕಿಂತ ತಾವೇ ನೋಡಿ, ಅನುಭವಿಸಿ ಕಟ್ಟಿಕೊಡುವಂತಹ ಅಭಿವ್ಯಕ್ತಿಯೇ ಶ್ರೇಷ್ಠ. ಅದೇ ಸಹೃದಯನ ಹಿರಿಮೆ. ಅಂತಹ ಸಹೃದಯಿ ಕಾ.ತ.ಚಿಕ್ಕಣ್ಣ. ಇವರ ಕಥೆಗಳ ಭಾಷೆಯ ಸೊಗಸು, ಕಾವ್ಯಮಯತೆ, ಪ್ರಕೃತಿ ಚಿತ್ರಣ, ಸಾಮಾಜಿಕ ಪ್ರಜ್ಞೆ, ಜೀವನ ದರ್ಶನ ಎಲ್ಲವೂ ಸ್ತ್ರೀ ಸಂವೇದನೆ ಮತ್ತು ಗ್ರಾಮೀಣ ಸಂವೇದನೆಗೆ ಪೂರಕವಾಗೇ ಇರುವುದನ್ನು ಕಾಣಬಹುದು.

ಚಿಕ್ಕಣ್ಣನವರ ಕಥೆಗಳ ನಿರೂಪಣೆಯಲ್ಲಿ ಬಳಕೆಯಾಗುವ ಹಲವಾರು ಶೈಲಿಗಳ ಮಿಶ್ರಣ, ವಿಡಂಬನೆ, ಆತ್ಮಾವಲೋಕನ, ಭಾವಗೀತಾತ್ಮಕ ಉತ್ಕಟತೆ, ನಾಟಕೀಯತೆ ಇಂಥ ವಿವಿಧ ಧ್ವನಿಗಳ ಪ್ರಯೋಗಗಳ ಕಥೆಯನ್ನು ಸೂಕ್ಷ್ಮವಾಗಿ ಗಮನಿಸುವುದರ ಮುಖಾಂತರ ತಿಳಿಯಬಹುದು. ಇವರ ಕಥನ ಕ್ರಿಯೆಗೆ ಕಾವ್ಯ ಗುಣವಿದೆ. ಕಾವ್ಯದ ಕಾವಿಲ್ಲದೆ ಮನುಷ್ಯನ ದ್ವಂದ್ವ ಪ್ರವೃತ್ತಿಯನ್ನು

ಬೆಸೆಯಲು ಸಾಧ್ಯವಿಲ್ಲ. ಆದರೆ ಕಾವ್ಯಕ್ಕೆ ಇಲ್ಲದ ಸ್ವಚ್ಛಂದ ಗದ್ಯಕ್ಕೆ ಇರುವುದರಿಂದ ಹೆಚ್ಚು ವಿಸ್ತಾರವುಳ್ಳ ಸಂವೇದನೆಗಳನ್ನು ಕಥೆಯ ಕ್ರಿಯೆಯಲ್ಲಿ ತರಲು ಸಾಧ್ಯವಾಗುತ್ತದೆ. ಹಾಗಾಗಿಯೇ ಚಿಕ್ಕಣ್ಣನವರ ಕಥನ ಕ್ರಿಯೆಗೆ ಮಹತ್ವ ಬಂದಿರುವುದು ಅಂತಹ ಕಾವ್ಯ ಗುಣದಿಂದಲೇ. ಕಥನ ಶಿಲ್ಪ, ಸಂಯಮ, ಸಂಕ್ಷಿಪ್ತತೆ, ಮಾನವೀಯ ಸಂಬಂಧಗಳ ನಿಷ್ಕರ್ಷೆಯಲ್ಲಿ ಚಿಕ್ಕಣ್ಣನವರ ಕಥೆಗಳು ಸಮರ್ಥವಾದ ಅಭಿವ್ಯಕ್ತಿಯನ್ನು ಸಾಧಿಸಿವೆ.

ಚಿಕ್ಕಣ್ಣನವರ ಕಥೆಗಳನ್ನು ಗಮನಿಸಿದಾಗ ಕಥೆಗಾರರು ಪ್ರಭುತ್ವದ ಮೂಲಗಳಾದ ಜನಾಂಗ, ಜಾತಿ, ವರ್ಣ, ಪಂಥ, ಪಂಗಡ ಅಥವಾ ಸಿದ್ಧಾಂತಗಳ ಬೆನ್ನು ಹತ್ತಿಹೋಗುವುದಿಲ್ಲ. ಚಲಿಸುವ ಜೀವಿ, ಜೀವನವನ್ನು ಕುರಿತು ಅರಿಯುತ್ತಾರೆ ಮತ್ತು ಅಳೆಯುತ್ತಾರೆ. ಹಾಗಾಗಿಯೇ ಇವರ ಕಥೆಗಳು ವಿಶೇಷವಾಗಿ ಕಾಣಿಸುತ್ತವೆ.

ಚಿಕ್ಕಣ್ಣನವರ ಕೆಲವು ಕಥೆಗಳಲ್ಲಿ ಕಾಣುವ ಒಂದು ಗಮನಾರ್ಹ ಅಂಶವೆಂದರೆ ವ್ಯಂಗ್ಯ. 'ಗೆದ್ದಲು ಕಟ್ಟಿದ ಗೂಡು', 'ಕೊಂಡಿಮುಳ್ಳುಗಳು', ಕಾಲಾಯಗಳಲ್ಲಿ ದೇವರ ಪೂಜೆ, ಪುರಾಣ, ಅನ್ನ ಸಂತರ್ಪಣೆ, ಸಂಸ್ಕೃತಿಯನ್ನು ಕುರಿತು ಭಾಷಣಗಳ ನಡುವೆ ಇಲ್ಲಿ ಬಳಸಿರುವ ವ್ಯಂಗ್ಯ ಅರ್ಥಪೂರ್ಣವಾಗಿದೆ.

ಮೂರುವರೆ ದಶಕಗಳಿಂದ ಅಂದರೆ ೧೯೭೫ರಿಂದ ಬರೆದಿರುವ ಚಿಕ್ಕಣ್ಣನವರ ಕಥನಗಳನ್ನು ಬದಲಾಗುತ್ತಿರುವ ಸಾಮಾಜಿಕ ವಿನ್ಯಾಸಗಳು, ಹಳೆಯ ವ್ಯವಸ್ಥೆಯ ವಿಘಟನೆ, ವಿವಾಹ ಜೀವನದಲ್ಲಿ ಉಂಟಾಗುವ ಇಕ್ಕಟ್ಟುಗಳ, ಮೌಲ್ಯಗಳಿಂದ ಆವರಿಸಿಕೊಂಡಿರುವ ಸಮಾಜದ ಎಡಬಿಡಂಗಿತನ, ನೈತಿಕ ಮೌಲ್ಯಗಳ ಜೊತೆಯಲ್ಲಿ ಘರ್ಷಣೆಯೇರ್ಪಟ್ಟು ಇಬ್ಬಂದಿತನವೊಂದು ಮನುಷ್ಯನ ವರ್ತನೆಯಲ್ಲಿ ಕಾಣಿಸಿಕೊಳ್ಳುವುದು ಇವೇ ಮೊದಲಾದ ನೆಲೆಗಳ ವಸ್ತು ಇವರ ಕಥೆ, ಕಾದಂಬರಿಗಳಲ್ಲಿದೆ. ಈ ಮಾದರಿಯ ಕಥನಗಳನ್ನು ನವ್ಯ ಸಾಹಿತ್ಯ ಚಳವಳಿಯ ಹಿನ್ನೆಲೆಯಲ್ಲಿ ಬರೆದಿರಬಹುದಾದರೂ ಸಹ ಅದರಾಚೆಗೂ ತನ್ನ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವ ಸಾಮರ್ಥ್ಯ ಚಿಕ್ಕಣ್ಣನವರ ಕಥನಕ್ಕಿರುವುದರಿಂದ ಉತ್ತಮ ಸಂಕಥನಗಳಾಗಿವೆ.

ಮಾಸ್ತಿಯವರಂತೆ ಚಿಕ್ಕಣ್ಣನವರ ಕಥನ ಜಗತ್ತಿನ ವೈವಿಧ್ಯತೆ ಬೆರಗನ್ನುಂಟು ಮಾಡುವಂತದ್ದು. ಅವರ ಕಥಾ ಜಗತ್ತಿಗೆ ವೈವಿಧ್ಯವು ಪಾತ್ರಗಳ ಅನನ್ಯತೆಯ ಮೂಲಕ ಪ್ರಕಟವಾಗುವಂತಹದ್ದಲ್ಲ, ಬದಲಿಗೆ ಈ ವೈವಿಧ್ಯವನ್ನು ಮಾನವ ಪ್ರಕೃತಿಯ ವರ್ಣ ಪಟಲದ ಬಂಧನಕ್ಕೆ ಅಳವಡಿಸಿರುವ

ಕ್ರಮ ಬೆರಗು ಹುಟ್ಟಿಸುತ್ತದೆ. ಜೀವನದ ವಿಘಟನೆಯ ಕಾರಣಗಳ ಶೋಧನೆ, ವಿಘಟನೆಯ ಪರಿಣಾಮಗಳು, ವಿಘಟನೆಯ ಹಿಂದೆ ಇರುವ ಪ್ರಬಲವಾದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಶಕ್ತಿಗಳನ್ನು ಅನಾವರಣಗೊಳಿಸುವುದು ಮುಂತಾದ ನೆಲೆಗಳಲ್ಲಿ ಬದುಕಿನ ಶೋಧನೆಗೆ ತೊಡಗಿ, ಆ ಮೂಲಕ ಮನುಷ್ಯನ ಹುಡುಕಾಟದ ನೆಲೆಗಳಿಗೆ ಕೊಂಡೊಯ್ಯುವ ಗ್ರಾಮೀಣ ಸೊಗಡಿನ ಕಥನದ ಗುಣಗಳಿವೆ.

ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಪಲ್ಲಟಗಳನ್ನು ಅನ್ವೇಷಿಸುವ ಕ್ರಿಯೆ ಚಿಕ್ಕಣ್ಣನವರ ಕಥನದಲ್ಲಿ ನಡೆಯುತ್ತವೆ. ಮನುಷ್ಯನನ್ನು ಮೂರ್ತವಾದ ಸಾಮಾಜಿಕ, ರಾಜಕೀಯ ಚೌಕಟ್ಟುಗಳಲ್ಲಿಟ್ಟು ಅದು ಸಾಂಸ್ಕೃತಿಕ ಅನ್ವೇಷಣೆಯಾಗುವಂತೆ ಮಾಡುವ ಅರ್ಥಪೂರ್ಣ ಕಥನದಲ್ಲಿ ಈ ಬಗೆಯ ಸಾಂಸ್ಕೃತಿಕ ಅನ್ವೇಷಣೆ ಸಾಧ್ಯವಾಗಿದೆ. ಇದೇ ಚಿಕ್ಕಣ್ಣನವರ ಹೆಗ್ಗಳಿಕೆ, ನಾಗರಿಕತೆಯು ಸೃಷ್ಟಿಸಿದ ಜಾತಿ, ಹಣ, ಪ್ರಭಾವ ಮುಂತಾದ ಲೌಕಿಕ ಅನಿಷ್ಟಗಳು ಸ್ವಾತಂತ್ರ್ಯಾನಂತರ ಸಂಸ್ಕೃತಿಯ ಭಾಗವಾಗಿ ಹೋಗಿರುವುದರ ವಿವರಣೆಗಳು ಚಿಕ್ಕಣ್ಣನವರ ಕಥನಗಳಲ್ಲಿ ಪರಿಣಾಮಕಾರಿಯಾದ ಗ್ರಹಿಕೆಗೆ ಒಳಗಾಗಿವೆ. ಆರ್ಥಿಕ ಅಸಮಾನತೆ ಹಾಗೂ ಜಾತಿಯ ಪ್ರಭಾವದಿಂದ ಮನುಷ್ಯರು ಮನುಷ್ಯರಾಗಿ ಉಳಿಯದಿರುವ ವಿನ್ಯಾಸಗಳನ್ನು ಚಿಕ್ಕಣ್ಣನವರ ಕಥನ ಕಟ್ಟಿಕೊಡುತ್ತದೆ. ಇಲ್ಲಿ ಗ್ರಾಮೀಣ ಕೃಷಿ ಸಂಸ್ಕೃತಿ ಜಗತ್ತಿನ ಆವರಣದಲ್ಲಿ ಮನುಷ್ಯ ಸಂಬಂಧಗಳ ವಿವರಗಳು ಬಿಚ್ಚಿಕೊಳ್ಳುವ ಪರಿ ಅನನ್ಯವಾಗಿದೆ.

ಚಿಕ್ಕಣ್ಣನವರು ಮನುಷ್ಯನ ಅಮರತ್ವವನ್ನು ಬಯಸುವರು. ಇದರಿಂದಾಗಿ ಅವರು ವ್ಯಕ್ತಿತ್ವದ ಅಮರತ್ವದ ಅಂಶಗಳನ್ನು ಹುಡುಕುವ ಪ್ರಯತ್ನ ಮಾಡಬೇಕೆಂಬ ಪ್ರಬಲವಾದ ಇಚ್ಛೆಯನ್ನು ಹೊಂದಿದ್ದಾರೆ. ಒಬ್ಬೊಬ್ಬ ವ್ಯಕ್ತಿಯ ಕೆಲಸ ಕಾರ್ಯಗಳು ಹುಟ್ಟು ಸಾವು ಇವುಗಳ ಮಿತಿಯಲ್ಲಿ ಸಿಕ್ಕಿದಂತೆ ಭಾಸವಾದರೂ ಅವುಗಳು ಅಮರವಾದ ಜೀವ ಪ್ರವಾಹ. ವ್ಯಕ್ತಿಯೊಬ್ಬನ ಹುಟ್ಟು ಹುಟ್ಟು ಅಲ್ಲ. ಆಲದ ಮರವೊಂದು ಹುಟ್ಟಿ ವಯಸ್ಸಾಗುವುದಕ್ಕೆ ಮೊದಲಿಗೆ ಬಿಳಲನ್ನು ನೆಲಕ್ಕೆ ಊರುತ್ತದೆ. ಮೊದಲ ಕಾಂಡ ಮುಪ್ಪಿನಿಂದ ನಾಶವಾದರೂ ಹೊಸ ಬಿಳಲುಗಳೇ ಕಾಂಡಗಳಾಗಿ ಆಲದ ಮರದ ಜೀವನ ಮುಂದೆ ಸಾಗುತ್ತದೆ. ಆಲದ ಮರದ ಕಾಂಡ ಸತ್ತದ್ದು ನಿಜ; ಆದರೆ ಆಲದ ಮರ ಸತ್ತದ್ದು ಮಾತ್ರ ನಿಜವಲ್ಲ. ಇಂತಹ ಆಶಾಭಾವನೆಯಿಂದ ಕಥೆ, ಕಾದಂಬರಿ, ನಾಟಕ, ಕಾವ್ಯ, ವಿಮರ್ಶೆ ಮುಂತಾದ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಬರೆಯುತ್ತಿರುವ

ಚಿಕ್ಕಣ್ಣನವರಿಗೆ ನದಿ, ನದಿ ಪಾತ್ರ, ದಂಡೆ, ಹರಿವ ನೀರು, ಅದರ ಸುತ್ತಲಿರುವ ಮರ, ಗಿಡ, ಬಳ್ಳಿ, ಪ್ರಾಣಿಪಕ್ಷಿಗಳು, ಎಲ್ಲವೂ ಕೂಡ ಮಾನವನ ಬದುಕಿಗೆ ಪ್ರೇರಕ, ಪ್ರೇರಣೆ ಎಂದು ಭಾವಿಸಿ ಮಾನವನ ಭೌತಿಕ ಪರಿಸರ ಮತ್ತು ಮಾನವನ ಸಾಮಾಜಿಕ ಜೀವನಗಳ ನಡುವಣ ನಿಗೂಢವಾದ ಮತ್ತು ಪ್ರತ್ಯಕ್ಷವಾದ ಪರಸ್ಪರ ಕ್ರಿಯೆಯನ್ನು ಅಭಿವ್ಯಕ್ತಿಸಲು ತಮ್ಮದೇ ಆದ ಭಾಷೆಯನ್ನು ರೂಢಿಸಿಕೊಂಡಿದ್ದಾರೆ. ಈ ಮೂಲಕ ಪರಿಸರ ಹಾಗೂ ಸಾಮಾಜಿಕ ಸನ್ನಿವೇಶಗಳ ಸಮತೋಲನ ಮತ್ತು ಸಂಘಟನೆಗಳನ್ನು ಗ್ರಾಮೀಣ ಪರಿಸರದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾ.ತ.ಚಿಕ್ಕಣ್ಣನವರ ಒಟ್ಟಾರೆ ಸೃಜನಶೀಲತೆಯ ಕೆಲವು ಮಾದರಿಗಳನ್ನು ಗ್ರಾಮೀಣ ಸಂವೇದನೆ ಮತ್ತು ಪರಿಸರದ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅನುಬಂಧಗಳು

ಅನುಬಂಧಗಳು

ಕಾ.ತ. ಚಿಕ್ಕಣ್ಣ : ಸಂಕ್ಷಿಪ್ತ ವ್ಯಕ್ತಿ ವಿವರ

೧.	ಹೆಸರು	:	ಕಾ.ತ. ಚಿಕ್ಕಣ್ಣ
೨.	ಶಿಕ್ಷಣ	:	ಎಂ.ಎ. (ಜಾನಪದ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೩.	ವಿಳಾಸ	:	ನಂ. ೮೯೨, 'ಪುಷ್ಕರಣಿ', ೮ನೇ ಕ್ರಾಸ್, ೧ನೇ 'ಇ' ಮೇಯಿನ್, ೨ನೇ ಹಂತ, ಗಿರಿನಗರ, ಬೆಂಗಳೂರು–೫೬೦ ೦೮೫. ಮೊ: ೯೪೪೮೮೯೧೧೯೧.
೪.	ವೃತ್ತಿ	:	ನಿವೃತ್ತ ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಕನ್ನಡ ಭವನ, ಬೆಂಗಳೂರು.
೫.	ಪ್ರಕಟಣೆಗಳು		
	೧. ಕಥಾಸಂಕಲನಗಳು	:	೧. ಬಿಳಲು ಬಿಟ್ಟ ಬದುಕು (೧೯೭೬ ಮತ್ತು ೧೯೮೩) (ದೇವರಾಜ ಬಹದ್ದೂರ್ ಬಹುಮಾನಿತ ಕೃತಿ) ೨. ಒಡಲುರಿ (೧೯೮೪) ೩. ವಾಸನಾಮಯ ಬದುಕಿನ ಆಚೆ ಈಚೆ (೧೯೮೮) ೪. ಮನಸು ಮುಗಿಲು (೧೯೯೩) ೫. ಅಗಾಂತರ (೨೦೦೩) ೬. ಕಂಡೇರಿ (ಆ ತನಕದ ಕಥೆಗಳು–೨೦೦೪) ೭. ಮೋಡ ನೆರಳ ನಿರಾಳ (೨೦೧೦) (ವೀಚಿ ಸಾಹಿತ್ಯ ಪುರಸ್ಕಾರ) ೮. ಕಾತಚಿ ಕಥಾರಂಗ (೨೦೧೧)
	೨. ಕಾದಂಬರಿಗಳು	:	೧. ಮುಂಜಾವು (ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನಿತ ಕೃತಿ ೧೯೮೯, ೧೯೯೦ & ೨೦೦೯)

೨. ದಂಡೆ (ವರ್ಧಮಾನ ಪ್ರಶಸ್ತಿ ಪಡೆದ ಕೃತಿ- ೧೯೯೯)

೩. ಸಾಂಸ್ಕೃತಿಕ ಸ್ಮೃತಿ ಚಿತ್ರ: ನಿಶಬುದದೆಡೆಗೆ (೨೦೦೭)

೪. ನಾಟಕ : ೧. ವಧೂಟಿ (ಆರ್ಯಭಟ ಪ್ರಶಸ್ತಿ ಪಡೆದ ಕೃತಿ ೧೯೯೭ ಮತ್ತು ೨೦೧೦)

೨. ಚದುರಂಗ - ೨೦೧೨

೫. ಪ್ರಬಂಧ ಸಂಕಲನ : ೧. ಬಳ್ಳಿಸಾಲು (೧೯೯೬)

೨. ಉಕ್ಕೆಸಾಲು (೨೦೧೦)

೬. ಕವನ ಸಂಕಲನ : ೧. ಗೊಂಚಲು (೧೯೯೭)

೨. ಮೆಕ್ಕೆ ಒಕ್ಕಲು (೨೦೧೦)

೭. ಬಾಲ ಸಾಹಿತ್ಯ : ೧. ಕನಕದಾಸರು (೧೯೮೨, ೧೯೮೩, ೧೯೮೪, ೧೯೯೦, ೨೦೦೮ ಮತ್ತು ೨೦೧೦)

೮. ಸಂಪಾದನ ಕೃತಿಗಳು: ೧. ಕನಕ ಕಿರಣ (ಕನಕದಾಸರ ಕುರಿತು ವಿಮರ್ಶಾ ಗ್ರಂಥ, ೧೯೮೨, ೧೯೮೩ ಮತ್ತು ೧೯೯೪)

೨. ಪ್ರೈಸ್‌ಲೆಸ್ ಗೋಲ್ಡ್ (ಇಂಗ್ಲೀಷ್‌ನಲ್ಲಿ ಸಹ ಸಂಪಾದನೆ ೧೯೮೩)

೩. ಭಾರತೀಪ್ರಿಯ (ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ ೧೯೯೪)

೪. ನಯಸೇನ (ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ ೧೯೯೬)

೫. ಹೊನ್ನಾರು (ಡಾ. ಹೆಚ್.ಕೆ. ಲಕ್ಕಪ್ಪಗೌಡರ ಕುರಿತು ಅಭಿನಂದನ ಗ್ರಂಥ, ೨೦೦೭)

೬. ಸಂಗೊಳ್ಳಿ ರಾಯಣ್ಣ (೧೯೯೮)

೭. ಕನಕ ಭಾರತಿ (೧೯೮೪)

೮. ಮುತ್ತು ಬಂದಿದೆ ಕೇರಿಗೆ (೧೯೯೧)

೯. ಮೈತ್ರಿ

೧೦. ಸಂಯುಕ್ತ

೧೧. ಸಂಪದ

೧೨. ಸ್ವರ್ಣ ಸಂಚಯ

೯. ನಿಯತಕಾಲಿಕಗೆ ಸಂಪಾದನೆ: ೧. ಕನ್ನಡ-ಸಂಸ್ಕೃತಿ ವಾರ್ತೆ (ತ್ರೈಮಾಸಿಕ ೧೯೮೦-೮೫)

೨. ಕನಕಸ್ಫೂರ್ತಿ, ಕಾಗಿನೆಲೆ ಪ್ರಕಾಶನ

೧೦. ಪ್ರಧಾನ ಸಂಪಾದಕತ್ವ : ೧. ಕಾಳಿದಾಸ (೨೦೦೮)

೨. ಕೋಳೂರು ಮಲ್ಲಪ್ಪ (೨೦೦೮)

೩. ಡಾ. ಆರ್.ನಾಗನಗೌಡ (೨೦೦೮)

೪. ಟಿ. ಮರಿಯಪ್ಪ (೨೦೦೮)

೬. ಕಾ.ತ. ಚಿಕ್ಕಣ್ಣನವರ ಸಾಹಿತ್ಯ ಕುರಿತು ವಿಮರ್ಶಾ ಗ್ರಂಥಗಳು:

೧. ಸೊಲ್ಲೆತ್ತಿ (ಮುಂಜಾವು, ದಂಡೆ ಕಾದಂಬರಿಗಳ ಕುರಿತು ವಿವಿಧ ಲೇಖಕರು ೨೦೦೧, ಸಂ: ಡಾ. ಮಲ್ಲಿಕಾ ಘಂಟಿ)

೨. ನೀರೊಳಗಣ ಬೆಳಕು (ಕಾ.ತ.ಚಿಕ್ಕಣ್ಣನವರ ಸಮಗ್ರ ಸಾಹಿತ್ಯ ಕುರಿತ ವಿಮರ್ಶಾ ಲೇಖನಗಳ ಗ್ರಂಥ, ೨೦೧೦, ಸಂ: ಹೆಚ್. ದಂಡಪ್ಪ)

೩. ಹೊತ್ತಿಗೆ (ವಿಧಾನ ಸಭಾಕ್ಷೇತ್ರ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ), ಭಾಷಣ ಹಾಗೂ ಇತರರ ಲೇಖನಗಳು, ೨೦೦೧.

೭. **ಅನುವಾದಿತ ಕೃತಿಗಳು** : ೧. MIST AND OTHER STORIES (೧೦ ಕಥೆಗಳ ಇಂಗ್ಲೀಷ್ ಅನುವಾದ ೨೦೧೦) ಅನುವಾದಕಿ : ಪ್ರೊ. ಗೀತಾ ಶ್ರೀನಿವಾಸನ್

೨. KANDERI (೧೨ ಕಥೆಗಳ ಇಂಗ್ಲೀಷ್ ಅನುವಾದ ೨೦೧೦) ಅನುವಾದಕರು: ಹೆಚ್.ಎಸ್.ಎಂ.ಪ್ರಕಾಶ್

೩. ಕನಕದಾಸರು – ಇಂಗ್ಲೀಷ್, ಹಿಂದಿ, ತೆಲುಗು, ತಮಿಳು ಭಾಷೆಗೆ ಅನುವಾದಗೊಂಡಿದೆ.

೪. DANDE (ಕಾದಂಬರಿ) (ಮುದ್ರಣದಲ್ಲಿ)
ಅನುವಾದಕರು : ಹೆಚ್.ಎಸ್.ಎಂ. ಪ್ರಕಾಶ್

೫. DHUND KPAAR (೧೨ ಕತೆಗಳ ಉರ್ದು ಅನುವಾದ : ಮುದ್ರಣದಲ್ಲಿ)
ಅನುವಾದಕರು : ಮಯಹರ್ ಮನ್ಸೂರ್

೮. **ರಂಗ ದೃಶ್ಯರೂಪವಾಗಿರುವ ಕೃತಿಗಳು:**

೧. ಕಥೆಗಳು :
೧. ಒಡಲುರಿ
೨. ಹುಚ್ಚೀರಿಯ ಎಸರಿನ ಪ್ರಸಂಗ
೩. ದಾವರ
೪. ಆಯಾಮ
೫. ಕೊಂಡಿ ಮುಳ್ಳುಗಳು
೬. ಸಂತೆಮಾಳದ ಹಾದಿಗುಂಟ
೭. ಕರಗವ್ವ

೨. ಕಾ.ತ.ಚಿ.ಕಥಾರಂಗ ; ಈ ಕೆಳಕಂಡ ಕಥೆಗಳನ್ನು ಸಂಯೋಜಿಸಿದ ವಿನೂತನ ನಾಟಕವಿದು. (ನಿರ್ದೇಶನ : ಸಿ. ಬಸವಲಿಂಗಯ್ಯ)
೧. ಸತ್ಯವತಿ
೨. ಕಟ್ಟುಗಳು
೩. ವಂಶಸ್ಥರು
೪. ಗಂಟಾದ ನಂಟು
೫. ತಿರಿದುಣ್ಣುವ ಜನರ ನಡುವೆ
೬. ವಾಸನಾಮಯ ಬದುಕಿನ ಆಚೆ ಈಚೆ
೭. ಗದ್ದೆ ಗುಮ್ಮ
೮. ಹುಚ್ಚೀರಿಯ ಎಸರಿನ ಪ್ರಸಂಗ

೩. ಕಾದಂಬರಿ : ದಂಡೆ (ನಿರ್ದೇಶನ : ಸಿಜಿಕೆ)

೯. **ಧ್ವನಿಸುರುಳಿ** :
೧. ಬೆಳ್ಳಕ್ಕಿ ಸಾಲು (ಸ್ವರಚಿತ ಗೀತೆಗಳು)
೨. ಕನಸು ಚೆಲ್ಲಾವೆ (ಸ್ವರಚಿತ ಗೀತೆಗಳು)
೩. ಇದೇನೆ ಸಖಿ (ಸ್ವರಚಿತ ಗೀತೆಗಳು)

೧೦. ಚಿತ್ರ ರಚನೆ ಮತ್ತು ನಿರ್ದೇಶನ

: ೧. ಪಂಪ ಕಾವ್ಯ ವೈಭವ (ದೂರದರ್ಶನದಲ್ಲಿ ಪ್ರಸಾರ) (ಗಮಕ, ಕಾವ್ಯ, ನಾಟಕ, ಸಂಗೀತ ಕಲಾಪ್ರಕಾರಗಳ ಸಂಯೋಜಿತ ರೂಪಕ)

೨. ಮಾಯಾಲಾಸ್ಯ (ದೂರದರ್ಶನದಲ್ಲಿ ಪ್ರಸಾರ) (ಸಂಗೀತ, ನೃತ್ಯ ಸಂಯೋಜಿತ ರೂಪಕ)

೩. ಮುತ್ತು ಬಂದಿದೆ ಕೇರಿಗೆ (ದೂರದರ್ಶನಕ್ಕಾಗಿ ಕನಕದಾಸರ ಕುರಿತು ಕಾವ್ಯಚಿತ್ರ)

೪. ಬೆಳ್ಳಕ್ಕಿ ಸಾಲು (ಸ್ವಂತ ಸಣ್ಣಕಥೆಗಳ ಆಧರಿಸಿ ದೂರದರ್ಶನಕ್ಕಾಗಿ ಧಾರವಾಹಿ)

೫. ಸಂತ ಕವಿ ಕನಕದಾಸರು (ರೂಪಕ)

೬. ತಲ್ಲಣಿಸದಿರು ಮನವೆ (ಕನಕದಾಸರ ಕುರಿತು ರೂಪಕ ಸಾಹಿತ್ಯ ರಚನೆ)

೭. ಕನಕ ಕಾವ್ಯ ವೈಭವ (ರೂಪಕ–ಸಾಹಿತ್ಯ ರಚನೆ)

೮. ದೂರದರ್ಶನದ ಹಲವಾರು ಧಾರಾವಹಿಗಳಿಗೆ ಸಂಭಾಷಣೆ, ಹಾಡುಗಳ ರಚನೆ.

೧೧. ಮನ್ನಣೆ : ೧. ಅಧ್ಯಕ್ಷತೆ, ಕನ್ನಡ ಸಾಹಿತ್ಯ ಸಮ್ಮೇಳನ ವರ್ತೂರು ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತು ಘಟಕ.

೨. ೧೯೯೭ರಲ್ಲಿ ಅಮೇರಿಕಾದಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನಕ್ಕೆ ಕರ್ನಾಟಕ ರಾಜ್ಯದ ಸಾಂಸ್ಕೃತಿಕ ತಂಡದ ಮುಖಂಡತ್ವ ವಹಿಸಿ ತೆರಳಿದ್ದು.

೩. ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಹಲವಾರು ಕಥೆಗಳು ರೂಪಾಂತರಗೊಂಡು ಪ್ರಸಾರವಾಗಿವೆ.

೪. ಆಕಾಶವಾಣಿ, ವಿಶ್ವವಿದ್ಯಾನಿಲಯಗಳಲ್ಲಿ ಭಾಷಣ ಲೇಖನಗಳ ಮಂಡನೆ

೧೨. ಪುರಸ್ಕಾರ : ೧. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪುರಸ್ಕಾರ

೨. ವರ್ಧಮಾನ ಪುರಸ್ಕಾರ

೩. ಆರ್ಯಭಟ ಪುರಸ್ಕಾರ

೪. ವೀಚಿ ಸಾಹಿತ್ಯ ಪುಸ್ತಕ ಪುರಸ್ಕಾರ

೫. ಇತರೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಂದ ಗೌರವ ಪುರಸ್ಕಾರ

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು

೧. ಕಾ.ತ.ಚಿಕ್ಕಣ್ಣ, ಮುಂಜಾವು, ಕೊಪ್ಪಲು ಪ್ರಕಾಶನ, ಬೆಂಗಳೂರು, ೧೯೮೯,

೨. ಕಾ.ತ.ಚಿಕ್ಕಣ್ಣ, ಮನಸು–ಮುಗಿಲು, ಕೊಪ್ಪಲು ಪ್ರಕಾಶನ, ಬೆಂಗಳೂರು, ೧೯೯೩.

೩. ಕಾ.ತ.ಚಿಕ್ಕಣ್ಣ, ವಾಸನಾಮಯ ಬದುಕಿನ ಆಚೆ–ಈಚೆ, ನಲ್ಮೆ ಪ್ರಕಾಶನ, ಬೆಂಗಳೂರು, ೧೯೮೮.

೪. ಕಾ.ತ.ಚಿಕ್ಕಣ್ಣ, ಒಡಲುರಿ, ನಲ್ಮೆ ಪ್ರಕಾಶನ, ಬೆಂಗಳೂರು, ೧೯೮೪.

೫. ಕಾ.ತ.ಚಿಕ್ಕಣ್ಣ, ಕಂಡೇರಿ, ಸುಂದರ ಪ್ರಕಾಶನ, ಬೆಂಗಳೂರು, ೨೦೦೪.

೬. ಕಾ.ತ.ಚಿಕ್ಕಣ್ಣ, ವಧೂಟಿ, ಕೊಪ್ಪಲು ಪ್ರಕಾಶನ, ಬೆಂಗಳೂರು, ೨೦೦೪.

೭. ಕಾ.ತ.ಚಿಕ್ಕಣ್ಣ, ದಂಡೆ, ಕಥನ ಪ್ರಕಾಶನ, ಬೆಂಗಳೂರು, ೧೯೯೯.

೮. ಕಾ.ತ.ಚಿಕ್ಕಣ್ಣ, ಗೊಂಚಲು, ಸುಂದರ ಪ್ರಕಾಶನ, ಬೆಂಗಳೂರು, ೧೯೯೭.

೯. ಕಾ.ತ.ಚಿಕ್ಕಣ್ಣ, ಮೆಕ್ಕೆ ಒಕ್ಕಲು, ಗಾನಗಂಗಾ ಪ್ರಕಾಶನ, ಬೆಂಗಳೂರು, ೨೦೧೦.

ಆನುಷಂಗಿಕ ಆಕರಗಳು:

೧. ಅರವಿಂದ ಮಾಲಗತ್ತಿ : 'ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೨. ಅರವಿಂದ ಮಾಲಗತ್ತಿ : 'ದಲಿತಮಾರ್ಗ', ಬೆಂಗಳೂರು, ಕನ್ನೆ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೩. ಆಮೂರ ಜಿ.ಎಸ್. : 'ಕನ್ನಡ ಕಥನ ಸಾಹಿತ್ಯ ಸಣ್ಣ ಕಥೆ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೩

೪. ಆಮೂರ ಜಿ.ಎಸ್. : (ಸಂ), 'ಸ್ವಾತಂತ್ರ್ಯೋತ್ತರ ಕನ್ನೆ ಕಥಾಲೋಕ', ಅಂಕಿತ ಪುಸ್ತಕ, ಬೆಂಗಳೂರು, ೨೦೦೪

೫. ಡಾ. ಯು.ಆರ್. ಅನಂತಮೂರ್ತಿ, 'ಪ್ರಜ್ಞೆ ಮತ್ತು ಪರಿಸರ', ಅಕ್ಷರ ಪ್ರಕಾಶನ, ಸಾಗರ, ೧೯೭೧.

೬ ಅ.ನ. ಕೃಷ್ಣರಾಯ, 'ಸಾಹಿತ್ಯ ಮತ್ತು ಜೀವನ', ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ, ೧೯೪೪.

೭. ಎಚ್. ದಂಡಪ್ಪ, 'ನೀರೋಳಗಣ ಬೆಳಕು', ಸಿರಿವರ ಪ್ರಕಾಶನ, ಬೆಂಗಳೂರು, ೨೦೧೦.

೮. ಗಿರಡ್ಡಿ ಗೋವಿಂದರಾಜ : 'ಸಣ್ಣಕಥೆಯ ಒಲವುಗಳು', ಸಾಹಿತ್ಯ ಭಂಡಾರ-೯, ಹುಬ್ಬಳ್ಳಿ, ೧೯೬೫

೯. ಗಿರಡ್ಡಿ ಗೋವಿಂದರಾಜು, 'ಸಾತತ್ಯ', ಸಂಕ್ರಮಣ ಪ್ರಕಾಶನ, ಧಾರವಾಡ, ೧೯೭೮.

೧೦. ಹೊನ್ನಯ್ಯ ಸಿ.ಬಿ. : 'ಕನ್ನಡ ಸಣ್ಣಕಥೆಗಳಲ್ಲಿ ದಲಿತ ಸಂಸ್ಕೃತಿ', ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು-೧೯೯೪

೧೧. ಡಾ. ಕರೀಗೌಡ ಬೀಚನಹಳ್ಳಿ, 'ವ್ಯಷ್ಟಿ ಮತ್ತು ಸಮಷ್ಟಿ', 'ಹೆತ್ತೊಡಲು', ಅಜಂತಾ ಪ್ರಕಾಶನ, ಕೆಂಗೇರಿ ಉಪನಗರ, ಬೆಂಗಳೂರು, ೧೯೯೧.

೧೨. ಕೀರ್ತಿನಾಥ ಕುರ್ತುಕೋಟಿ, 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ', ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩.

೧೩. ಡಾ. ಶಾಂತಿನಾಥ ದೇಸಾಯಿ, 'ಕನ್ನಡ ಕಾದಂಬರಿ ನಡೆದು ಬಂದ ರೀತಿ' ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಪಿ. ಲಂಕೇಶ್, 'ಕಲ್ಲು ಕರಗುವ ಸಮಯ', ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೫.

೧೫. ಪಿ. ಲಂಕೇಶ್, 'ಅಕ್ಷರ ಹೊಸ ಕಾವ್ಯ', ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೦.

೧೬. ಮುಕ್ತಾಯಕ್ಕ ಎಚ್.ಎಸ್., 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭.

೧೭. ಮೊಗಳ್ಳಿ ಗಣೇಶ್ : ಕಥನ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು-೧೯೯೮

೧೮. ಡಾ. ಮಲ್ಲಿಕಾ ಘಂಟಿ (ಸಂ), 'ಸೊಲ್ಲೆತ್ತಿ', ತುಳುಕಿನ ವೆಂಕಣ್ಣಯ್ಯಾ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೧.

೧೯. ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂ (ಸಂ), 'ನೆಲ ಸಂಸ್ಕೃತಿ', ಸುಮುಖ ಪ್ರಕಾಶನ, ವಿದ್ಯಾರಣ್ಯನಗರ, ಬೆಂಗಳೂರು.

೨೦. ನಾಗಭೂಷಣಸ್ವಾಮಿ ಓ.ಎಲ್. : 'ವಿಮರ್ಶೆಯ ಪರಿಭಾಷೆ', ಅಂಕಿತ ಪ್ರಕಾಶನ, ಬೆಂಗಳೂರು, ೧೯೯೧

೨೧. ಡಾ. ನಿಂಗಪ್ಪ ಚಿ.ಸಿ. : 'ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ', ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ, ೨೦೦೮

೨೨. ನೀಲಾ ಪಾಟೀಲ (ಸಂಕಲನ) : 'ಕನ್ನಡ ಸಾಹಿತಿಗಳ ಮಾಹಿತಿ', ಸಂಕ್ರಮಣ ಪ್ರಕಾಶನ, ಬೆಂಗಳೂರು, ೨೦೦೩

೨೩. ಡಾ. ರಹಮತ್ ತರೀಕೆರೆ, 'ಸಾಂಸ್ಕೃತಿಕ ಅಧ್ಯಯನ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೪. ಡಾ. ರಹಮತ್ ತರೀಕೆರೆ, 'ಕನ್ನಡ ಸಂಶೋಧನೆ ತಾತ್ವಿಕ ವಿಚಾರ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೫. ಪ್ರೊ. ಸಿ.ಎನ್. ರಾಮಚಂದ್ರನ್ (ಸಂ), 'ಬಯಲು-ರೂಪ,' ಸ್ವಪ್ನ ಬುಕ್ ಹೌಸ್, ಬೆಂಗಳೂರು.

೨೬ ಡಾ. ಸುಮಿತ್ರಾಬಾಯಿ ಬಿ.ಎಸ್., 'ಸ್ತ್ರೀವಾದ' ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯.

೨೭. ಡಾ. ಶಾಂತಿನಾಥ ದೇಸಾಯಿ, 'ಕನ್ನಡ ಕಾದಂಬರಿ ನಡೆದು ಬಂದ ರೀತಿ', ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೮. ಡಾ. ಶಾಂತಿನಾಥ ದೇಸಾಯಿ, 'ನವ್ಯ ಸಾಹಿತ್ಯ ದರ್ಶನ', ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೦.

೨೯. ಶಿವರಾಮ ಕಾಡನಕುಪ್ಪೆ, 'ಸಮನ್ವಯ', ಸಾಹಿತ್ಯ ಪ್ರಕಾಶನ, ಮೈಸೂರು, ೧೯೭೬.

೩೦. 'ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ', ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೩೧. 'ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು', ವಿವಿಧ ಲೇಖಕರು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೩೨. 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ', ವಿವಿಧ ಲೇಖಕರು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬.

೩೩. ವೆಂಕಟೇಶ್, 'ಲಂಕೇಶರ ಕಥನ ಸಾಹಿತ್ಯದಲ್ಲಿ ಗ್ರಾಮ ಸಮಾಜ', ೧೯೯೮, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು,

ಅಪ್ರಕಟಿತ ಎಂ.ಫಿಲ್. ನಿಬಂಧಗಳು

೧. 'ಡಾ. ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು', ಸುನೀಲ್‌ಕುಮಾರ ಹೆಚ್.

೨. 'ಗೀತಾ ನಾಗಭೂಷಣರವರ ಕಾದಂಬರಿಗಳಲ್ಲಿ ಪ್ರತಿಭಟನಾತ್ಮಕ ನೆಲೆಗಳು', ಸೌಮ್ಯ ಡಿ.ಕೆ.

೩. 'ಡಾ. ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆ ಒಂದು ಅಧ್ಯಯನ', ಮಧು ಆರ್.ಎಸ್.

೪. 'ಡಾ. ಕರೀಗೌಡ ಬೀಚನಹಳ್ಳಿ ಕಥೆಗಳಲ್ಲಿ ಗ್ರಾಮ ಸಮಾಜದ ಸ್ವರೂಪ', ಕುಮಾರ್ ಹೆಚ್.

೫. 'ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ ಪ್ರಕೃತಿ ಮತ್ತು ಪರಿಸರ', ತಾರಾಮಣಿ ಆರ್.

೬. 'ಲಂಕೇಶ್ ಕಾವ್ಯ-ಸಂಸ್ಕೃತಿ ಚಿಂತನೆ', ಶಿಲ್ಪ ಎಸ್.

ಪೂರಕ ಪಠ್ಯಗಳು:

೧. ಡಾ. ಅಮರೇಶ ನುಗಡೋಣಿ, 'ಕನ್ನಡ ಸಂಶೋಧನೆಯ ವೈಧಾನಿಕತೆಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨. ಡಾ. ಎಸ್.ಎಸ್. ಅಂಗಡಿ, 'ಸಂಬಂಧ ವಾಚಕಗಳು ಮತ್ತು ಸಂಬೋಧನೆಗಳು', ೨೦೦೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೩. ಡಾ. ಕೆ. ಕೆಂಪೇಗೌಡ, 'ಕನ್ನಡ ಭಾಷಾ ಸ್ವರೂಪ', ೧೯೯೬, ಪ್ರಕಾಶನ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

೪. ಡಾ. ಕೆ. ಕೆಂಪೇಗೌಡ, 'ಸಾಮಾನ್ಯ ಭಾಷಾ ವಿಜ್ಞಾನ', ೧೯೯೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫. ಲಿಂಗದೇವರು ಹಳೇಮನೆ (ಸಂ), 'ಕನ್ನಡ ಭಾಷಾ ಅಧ್ಯಯನ', ೨೦೧೦, ಅರುಹು ಕುರುಹು ಪ್ರಕಾಶಕರು, ಮೈಸೂರು.

೬. ಡಾ. ಸಾ.ಶಿ.ಮರುಳಯ್ಯ, ಡಾ. ಸಬಿಹಾ ಭೂಮಿಗೌಡ, ಡಾ. ರಾಜೇಶ್ವರಿ ಮಹೇಶ್ವರಯ್ಯ, 'ಕನ್ನಡ ಭಾಷಾ ಪ್ರವೇಶ', ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೭. ಆರ್. ನರಸಿಂಹಾಚಾರ್, 'ಕರ್ನಾಟಕ ಕವಿ ಚರಿತೆ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, (ಸಂಪುಟ-೧, ೨, ೩), ೧೯೦೭, ೧೯೧೯, ೧೯೨೯.

೮. ಡಾ. ಕೆ.ವಿ.ನಾರಾಯಣ, (ಪ್ರಸಂ), 'ಭಾಷೆ', ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೯. ಡಾ. ರಹಮತ್ ತರೀಕೆರೆ, 'ಸಾಂಸ್ಕೃತಿಕ ಅಧ್ಯಯನ', ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

೧೦. ಡಾ. ರಹಮತ್ ತರೀಕೆರೆ, 'ಕನ್ನಡ ಸಂಶೋಧನೆ ತಾತ್ವಿಕ ವಿಚಾರ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೧. ಡಾ. ಸಾಂಬಮೂರ್ತಿ, 'ಕನ್ನಡ ಕ್ರಿಯಾರಚನೆ-ಬಗೆಗಳು', ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೨. ಡಾ. ಸಂಗಮೇಶ ಸವದತ್ತಿಮಠ, 'ತೌಲನಿಕ ದ್ರಾವಿಡ ಭಾಷಾ ವಿಜ್ಞಾನ', ೧೯೭೬, ರೂಪರಶ್ಮಿ ಪ್ರಕಾಶನ, ಧರವಾಡ.

೧೩. ಡಾ. ವ್ಹಿ. ಶಿವಾನಂದ, 'ತೌಲನಿಕ ದ್ರಾವಿಡ ಭಾಷಾವಿಜ್ಞಾನ', ೧೯೯೯, ವಿದ್ಯಾನಿಧಿ ಪ್ರಕಾಶನ, ಗದಗ.

೧೪. 'ಹಸ್ತಪ್ರತಿ ವ್ಯಾಸಂಗ', ಸಂಪಾದಕರು: ಡಾ. ವೀರೇಶ ಬಡಿಗೇರ, ೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.